# ಖ಼ಿಲಾಫತಿನ ಸ್ಥಾನಮಾನಗಳು

# ಹಾಗೂ ನಮ್ಮ ಕರ್ತವ್ಯಗಳು

ಪ್ರಕಾಶನ:

**ನಝ಼ಾರತ್ ನಶ್ರೋ ಇಶಾಅತ್ ಖಾದಿಯಾನ್**

# “Khilafathina Sthanamaanagalu haagu namma kartavyagalu”

Kannada rendering of Urdu work:

خلافت کا عظیم الشان مقام ومرتبہ، اسکی برکات، خلیفہ وقت کی محبت واطاعت اور

ہماری ذمہّ داریاں

***(Khilafat ka azeemoshan maqamo martaba, uski barkaat, Khalifaye waqt ki muhabbat o itaat or hamari zimmedariyan)***


| | |
|---|---|
| Compiled by : | Moulavi Sayyad Aftab Ahmad Nayyar & Moulavi Arif Rabbani |
| Translated by : | Muhammad Rafeeq, Manjeshwar |
| Reviewed by : | Moulavi Inamullah, |
| Typing by : | U. Basheer Ahmad, Manjeshwar |
| Published by : | Nazarat Nashro - Isha’at, Qadian, Distt. Gurdaspur, Punjab -143516 |
| First Edition : | 2020 |
| Copies : | 1000 |
| Printed at : | Fazl-e-Umar Printing Press, Qadian |

# ಮುನ್ನುಡಿ

ಹಝ್ರತ್ ಮಸೀಹ್ ಮೌಊದ್‌ರ(ಅ) ಕಾಲಾನಂತರ 108 ವರ್ಷ ಗಳಿಂದ ಅಹ್ಮದಿಯಾ ಸಂಘಟನೆಯಲ್ಲಿ ಖಿಲಾಫತಿನ ಅನುಗ್ರಹೀತವಾದ ವ್ಯವಸ್ಥೆ ಜಾರಿಯಲ್ಲಿದೆ. ಇದು ಅಹ್ಮದಿಯಾ ಸಂಘಟನೆಯ ಮೇಲೆ ಅಲ್ಲಾಹನ ಅತ್ಯಂತ ಮಹತ್ತರವಾದ ಅನುಗ್ರಹವಾಗಿದೆ. ಇಂದು ಅಹ್ಮದಿಯಾ ಸಂಘಟನೆಯ ಹೊರತು ಮತ್ತೆಲ್ಲರೂ ಈ ಅನುಗ್ರಹದಿಂದ ವಂಚಿತರಾಗಿದ್ದಾರೆ. ಖಿಲಾಫತಿನ ಸ್ಥಾಪನೆಗಾಗಿ ಅವರು ಅತಿ ಕಠಿಣವಾಗಿ ಪರಿಶ್ರಮಿಸುತ್ತಿದ್ದಾರೆ. ಅಲ್ಲಾಹನು ಸ್ವಯಂ ಇದನ್ನು ಸ್ಥಾಪನೆ ಮಾಡುವುದರ ಹೊರತು ಭೌತಿಕವಾದ ಯಾವುದೇ ಶ್ರಮಫಲದಿಂದ ಇದು ಸ್ಥಾಪನೆಯಾಗುವಂತಹದ್ದಲ್ಲ.

ಅಲ್ಲಾಹನ ಮಹತ್ತರವಾದ ಅನುಗ್ರಹದಿಂದ ಜಮಾಅತ್ ಅಹ್ಮದಿಯಾ ಒಂದು ಸೌಭಾಗ್ಯಶಾಲಿ ಜಮಾಅತ್ ಆಗಿದೆ. ಅದರಲ್ಲಿ ಅಲ್ಲಾಹನು ಖಿಲಾಫತಿನ ಈ ಅನುಗ್ರಹೀತವಾದ ವ್ಯವಸ್ಥೆಯನ್ನು ಜಾರಿಗೊಳಿಸಿರುವನು. ಆ ಮುಖಾಂತರ ಲೋಕದಲ್ಲೆಡೆ ಜಮಾಅತಿಯಾದ ಶಿಕ್ಷಣ, ಬೋಧನೆ ಅಲ್ಲದೆ ಪ್ರಚಾರ, ಪ್ರಕಾಶನ, ಪ್ರಸಾರವು ಆಧುನಿಕ ಸಂಪರ್ಕ ಮಾಧ್ಯಮಗಳ ಮೂಲಕ ಅತ್ಯಂತ ಭರದಿಂದ ನಡೆಯುತ್ತಿವೆ – ಅಲ್‌ಹಮ್ದುಲಿಲ್ಲಾಹ್.

ಖಿಲಾಫತಿನ ಮಹತ್ತರವಾದ ಅನುಗ್ರಹದ ದೃಷ್ಟಿಕೋನದಿಂದ ಈ ಜಮಾಅತಿನ ಸಹೋದರರಿಗೆ ಅವರ ಕರ್ತವ್ಯದ ಕಡೆಗೆ ಗಮನಹರಿಸುವಂತಾಗಲು ನಝ್ಝಾರತ್ ನಶ್ರೋ ಇಶಾಅತ್ ಖಾದಿಯಾನ್ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್‌ರ (ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್) ಅನುಮೋದಿತವಾದ ಮಜ್ಲಿಸ್ ಶೂರ 2015ರ ಸೂಚನೆಯ ಮೇರೆಗೆ 'ಖಿಲಾಫತಿನ ಅತ್ಯುನ್ನತ ಸ್ಥಾನಮಾನ, ಅದರ ಅನುಗ್ರಹಗಳು, ಕಾಲದ ಖಲೀಫರ ಮೇಲಿನ ಪ್ರೀತಿ, ಅನುಸರಣೆ ಮತ್ತು ನಮ್ಮ ಹೊಣೆಗಾರಿಕೆಗಳು' ಎಂಬ ವಿಷಯದ ಬಗ್ಗೆ ಈ ಕಿರುಹೊತ್ತಿಗೆಯನ್ನು ತಯಾರಿಸಿದೆ. ಈ ಕಿರುಹೊತ್ತಿಗೆಯ ಸಂಕಲನಕ್ಕೆ

ಸನ್ಮಾನ್ಯ ಮೌಲವಿ ಸಯ್ಯದ್ ಆಫ್ತಾಬ್ ಅಹ್ಮದ್ ಸಾಹಿಬ್ ನಯ್ಯರ್ ಮತ್ತು ಸನ್ಮಾನ್ಯ ಮೌಲವಿ ಮುಹಮ್ಮದ್ ಆರಿಫ್ ರಬ್ಬಾನಿ ಸಾಹಿಬ್ ಸಹಕರಿಸಿರುವರು. 'ಜಝಾಕುಮುಲ್ಲಾಹು ಅಹಸನಲ್ ಜಝಾ' ಸಯ್ಯದುನಾ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್‌ರ (ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್) ಒಪ್ಪಿಗೆಯಿಂದ ಈ ಕಿರುಹೊತ್ತಿಗೆಯನ್ನು ಪ್ರಕಟಿಸಲಾಗುತ್ತಿದೆ. ಅಲ್ಲಾಹನು ಇದನ್ನು ಎಲ್ಲ ವಿಧದಲ್ಲೂ ಅನುಗ್ರಹೀತವನ್ನಾಗಿಸಲಿ – ಆಮೀನ್.

**– ನಾಝಿರ್ ನಶ್ರೋ ಇಶಾಅತ್ ಖಾದಿಯಾನ್**

# ಪ್ರಸ್ತಾವನೆ

ಅಲ್ಲಾಹನು, ಮನುಷ್ಯನನ್ನು ಸೃಷ್ಟಿಸಿದುದರ ಉದ್ದೇಶವನ್ನು ಪೂರ್ತೀಕರಿಸಲು ಪ್ರವಾದಿಗಳ ಪರಂಪರೆಯನ್ನು ಜಾರಿಗೊಳಿಸಿರುವನು. ಆದ ಕಾರಣ ಎಲ್ಲ ಕಾಲದಲ್ಲೂ ಅಲ್ಲಾಹನಿಂದ ನಿಯೋಗಿತರಾದ ದಿವ್ಯಪುರುಷರು ಬರುತ್ತಿದ್ದರು. ಅವರನ್ನು ಅಲ್ಲಾಹನ ಪ್ರತಿನಿಧಿಗಳೆಂದು ಕರೆಯಲಾಯಿತು. ಅವರು ಮನುಷ್ಯರಿಗೆ ಸನ್ಮಾರ್ಗ ತೋರಿಸಲು ಅತ್ಯಧಿಕವಾಗಿ ಪರಿಶ್ರಮಿಸಿದರು. ಅಲ್ಲಾಹನ ಈ ಸಂದೇಶವಾಹಕರು ದೀರ್ಘವಾದ ಕಠಿಣ ಪರಿಶ್ರಮದ ನಂತರ ಒಂದು ದೈವಿಕ ಜಮಾಅತನ್ನು ಸ್ಥಾಪಿಸಿ ಇತರ ಮನುಷ್ಯರಂತೆ ಈ ನಶ್ವರವಾದ ಲೋಕಕ್ಕೆ ವಿದಾಯ ಹೇಳಿ ತಮ್ಮ ಯಥಾರ್ಥ ಒಡೆಯನಲ್ಲಿ ವಿಲೀನರಾದರು.

ಪ್ರವಾದಿಗಳ ಮರಣದ ನಂತರ ಅವರ ಅನುಯಾಯಿಗಳ ಜಮಾಅತ್ ಜೀವನ್ಮರಣದ ಸನ್ನಿವೇಶಕ್ಕೆ ತಲುಪುತ್ತದೆ. ಬಾಹ್ಯವಾದ ಈ ಅವಸ್ಥೆಯನ್ನು ವೀಕ್ಷಿಸಿ ಅದರ ಶತ್ರುಗಳು ಆನಂದಿಸುತ್ತಾರೆ. ಆ ಪರಿಸ್ಥಿತಿಯಲ್ಲಿ ಅಲ್ಲಾಹನು ಆ ಜಮಾಅತನ್ನು ಪರಾಧೀನತೆಗೊಳ್ಳಲು ಬಿಡುವುದಿಲ್ಲ. ಬದಲಾಗಿ ಅಗಲಿದವರ ಸ್ಥಾನಕ್ಕೆ ಅವರ ಪ್ರತಿನಿಧಿಗಳನ್ನು ನಿಯಮಿಸುತ್ತಾನೆ. ಅದರಿಂದ ಬೀಳುವಂತಾದ ಸಮುದಾಯವು ನೆಲೆನಿಲ್ಲುವಂತಾಗುತ್ತದೆ. ನಂತರ ಕ್ರಮೇಣ ಆ ಜಮಾಅತ್ ತನ್ನ ಧ್ಯೆಯೋದ್ದೇಶದ ಪೂರ್ತೀಕರಣದಲ್ಲಿ ಕಾರ್ಯ ಪ್ರವೃತವಾಗುತ್ತದೆ. ಅದೇ ರೀತಿ ಅಲ್ಲಾಹನ ಈ ನಡೆವಳಿಕೆ ಕ್ರಮ ತನ್ನ ಪ್ರಿಯ ಪ್ರವಾದಿಯಾದ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಮೇಲೂ ಪೂರ್ತಿಯಾಯಿತು. ಅವರ ವಿಯೋಗದ ನಂತರ ಹಝ್ರತ್ ಅಬೂಬಕರ್‌ರನ್ನು(ರ) ಪ್ರತಿನಿಧಿಯನ್ನಾಗಿಸಿ ಸನ್ಮಾರ್ಗದ ಖಿಲಾಫತನ್ನು ನೆಲೆನಿಲ್ಲಿಸಿದನು. ಈ ಸನ್ಮಾರ್ಗದ ಖಿಲಾಫತ್ ಮೂವತ್ತು ವರ್ಷಗಳ ಕಾಲದವರೆಗೆ ಜಾರಿಯಲ್ಲಿತ್ತು. ಅದರ ನಂತರ ಹಝ್ರತ್ ಪೈಗಂಬರರ(ಸ) ಭವಿಷ್ಯವಾಣಿಯಂತೆ ಈ ಸನ್ಮಾರ್ಗದ ಖಿಲಾಫತಿನ ಈ ಶೃಂಖಲೆಗೆ ಒಂದು ದೀರ್ಘಕಾಲೀನ ವಿರಾಮ ಉಂಟಾಯಿತು. ಅಲ್ಲಾಹನ ಹಾಗೂ ರಸೂಲರ(ಸ) ಭವಿಷ್ಯವಾಣಿಯ ಮತ್ತು ವಾಗ್ದಾನದ ಖಿಲಾಫತ್ ರಾಶಿದದ ಈ ಶೃಂಖಲೆಯು ಕೊನೆಯ ಕಾಲದಲ್ಲಿ **'ಅಲಾ ಮಿನ್‌ಹಾಜ್ ನುಬುವ್ವತ್'** (ಪ್ರವಾದಿತ್ವದ

ಹಾದಿಯಲ್ಲಿರುವ ಖಿಲಾಫತ್) ಪುನಃ ಸ್ಥಾಪಿತವಾಗಬೇಕಿತ್ತು. ಅದರ ಸಂಗ್ರಹ ಈ ರೀತಿಯಾಗಿದೆ. ಸೂರಃ ಜುಮುಅ ಸೂಕ್ತ ಅವತೀರ್ಣವಾಯಿತು.

هُوَ الَّذِىْ بَعَثَ فِى الْاُمِّيّٖنَ رَسُوْلًا مِّنْهُمْ يَتْلُوْا عَلَيْهِمْ اٰيٰتِهٖ وَيُزَكِّيْهِمْ وَ
يُعَلِّمُهُمُ الْكِتٰبَ وَالْحِكْمَةَ ۗ وَاِنْ كَانُوْا مِنْ قَبْلُ لَفِىْ ضَلٰلٍ مُّبِيْنٍ

ಅಂದರೆ ಅಲ್ಲಾಹನು ಅನಕ್ಷರಸ್ತ ಜನರಲ್ಲಿ (ಅರಬಿಗಳಲ್ಲಿ) ಅವರಿಂದಲೇ ಒಬ್ಬ ಸಂದೇಶವಾಹಕನನ್ನು ನಿಯುಕ್ತಗೊಳಿಸಿದನು. (ಆ ಸಂದೇಶವಾಹಕ) ಅವನ (ಅಲ್ಲಾಹನ) ವಚನಗಳನ್ನು ಅವರಿಗೆ ವಾಚಿಸುತ್ತಾರೆ; ಅವರನ್ನು ಶುದ್ಧೀಕರಿಸುತ್ತಾರೆ ಹಾಗೂ ಅವರಿಗೆ ಗ್ರಂಥವನ್ನೂ ಜ್ಞಾನವನ್ನೂ ಕಲಿಸುತ್ತಾರೆ. ಮುಂಚೆಯಾದರೋ ಅವರು ಸ್ಪಷ್ಟವಾದ ತಪ್ಪು ಹಾದಿಯಲ್ಲಿದ್ದರು. ಅವರೊಂದಿಗೆ ಇಷ್ಟರ ವರೆಗೆ ಸೇರಿಲ್ಲದ ಅವರ ಪೈಕಿಯ ಇನ್ನೊಂದು ಜನತೆಯಲ್ಲೂ ನಮ್ಮ ಈ ಸಂದೇಶವಾಹಕರು (ತಮ್ಮ ಪ್ರತಿರೂಪವೆಂಬಂತೆ) ಶಿಕ್ಷಣ ನೀಡುವರು. (62:3,4)

ಇದರ ಬಗ್ಗೆ ಸಹಾಬಿವರ್ಯರು ಹಝ್ರತ್ ಪೈಗಂಬರರೊಡನೆ[ಸ] ತಮ್ಮ ಪುನರಾಗಮನವುಂಟಾಗುವ (ತಮ್ಮ ಪ್ರತಿಬಿಂಬದ ರೂಪದಲ್ಲಿ) ಆ ಜನತೆ ಯಾರಾಗಿರಬಹುದು ಎಂದು ಪ್ರಶ್ನಿಸಿದಾಗ ಹಝ್ರತ್ ಪೈಗಂಬರ್[ಸ] ಆಗ ಅಲ್ಲಿದ್ದ ಹಝ್ರತ್ ಸಲ್ಮಾನುಲ್ ಫಾರಿಸಿಯರ[ರ] ಭುಜದ ಮೇಲೆ ಕೈಯಿಟ್ಟು ಹೇಳಿದರು: **'ಲೌಕಾನಲ್ ಈಮಾನು ಇಂದಸ್ಸುರಯ್ಯಾ ಲನಾಲಹು ರಜುಲುಮ್ಮಿನ್ ಹಾಉಲಾಯಿ'** ಅಂದರೆ ಯಾವುದಾದರೂ ಕಾಲದಲ್ಲಿ ಈಮಾನ್ ಲೋಕದಿಂದ ಮೂಲೋತ್ಪಾಟನೆಯಾಗಿ ಕೃತಿಕಾ ನಕ್ಷತ್ರ ಪುಂಜದ ವರೆಗೆ ತಲುಪಿದರೂ ಫಾರ್ಸಿ ವಂಶದಿಂದ ಒಬ್ಬರು ಅದನ್ನು ಹಿಂತಿರುಗಿ ಲೋಕಕ್ಕೆ ಮರಳಿ ತರುವರು.

**(ಬುಖಾರಿ ಕಿತಾಬುತ್ತಫ್ಸೀರ್ ಬಾಬ್ ತಫ್ಸೀರ್ ಸೂರಃ ಜುಮುಅಃ)**

ಇನ್ನೊಂದು ಸಂದರ್ಭದಲ್ಲಿ ಹಝ್ರತ್ ಪೈಗಂಬರ್[ಸ] ಹೀಗೂ ಹೇಳಿದ್ದರು: **'ಸಲ್ಮಾನು ಮಿನ್ನಾ ಅಹ್ಲಿಲ್ ಬೈತಿ'**

ಅಂದರೆ ಸಲ್ಮಾನ್ ಫಾರಿಸಿ ನಮ್ಮವರಾಗಿದ್ದಾರೆ ಅಥವಾ ನಮ್ಮ ಅಹ್ಲ್

ಬೈತಿನವರಾಗಿದ್ದಾರೆ.

**(ತಬ್ರಾನಿ ಕಬೀರ್ ಮುಸ್ತದರಕ್ ಹಾಕಿಮ್ ಬಹವಾಲ ಜಾಮಿಉಸ್ಸಗೀರ್)**

ಈ ಹದೀಸಿನಲ್ಲಿ ಈ ಒಂದು ಸೂಚನೆಯಿತ್ತು. ಅದೇನೆಂದರೆ, ಬರುವ ಮಸೀಹ್ ಮತ್ತು ಮಹ್‌ದಿಯು ಅಹ್ಲುಲ್ ಫಾರಿಸಿಯ (ಫಾರ್ಸಿ ವಂಶಜ) ವರಲ್ಲಾಗಬೇಕಿತ್ತು. ಆದ್ದರಿಂದ ಮಹ್‌ದೀ ಬಗ್ಗೆ ಹೇಳಲಾದ ಆ ಎರಡನೆಯ ಹದೀಸು ಅಹ್ಲುಲ್ ಬೈತಿನವರಾಗಿರುವರು ಎಂಬುದು ಸಹ ಪ್ರತ್ಯಕ್ಷವಾಗಿ ಪೂರ್ತಿಯಾಯಿತು.

ಹಝ್ರತ್ ಪೈಗಂಬರ್[ಸ] ಅಂತಿಮ ಕಾಲಘಟ್ಟದಲ್ಲಿ ಫಾರ್ಸಿ ವಂಶದಲ್ಲಿ ತಮ್ಮ ಪ್ರತಿಪುರುಷ ಅವತರಿಸುವರೆಂದು ಭವಿಷ್ಯವಾಣಿ ನುಡಿದ ಹಾಗೆಯೇ ಬೇರೆ ಕೆಲವು ಹದೀಸುಗಳಲ್ಲಿ ಅದರ ವಿವರಣೆ ನೀಡಿರುವರು. ಹಝ್ರತ್ ಅಬೂಹುರೈರ[ರ] ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್[ಸ] ಅರುಹಿದರು:

**'ಕೈಫ ಅಂತುಂ ಇಧಾ ನಝ್ಲುಲ ಇಬ್ನು ಮರಿಯಮ**

**ಫೀಕುಂ  ವ ಇಮಾಮುಕುಂ ಮಿನ್‌ಕುಂ'**

ಅಂದರೆ ಇಬ್ನು ಮರಿಯಮ್ ನಿಮ್ಮ ಎಡೆಯಲ್ಲಿ ಅವತೀರ್ಣರಾಗುವಾಗ ನಿಮ್ಮ ಅವಸ್ಥೆ ಏನಾಗಿರಬಹುದು? ಇಬ್ನು ಮರಿಯಮ್ ಯಾರಾಗಿರುವರೆಂದು ನಿಮಗೆ ಗೊತ್ತೇ? ಅವರು ನಿಮ್ಮದ್ದೇ ಇಮಾಮ್ ಆಗಿರುವರು ಮತ್ತು (ನನ್ನ ಸಮುದಾಯವೇ) ನಿಮ್ಮಿಂದಲೇ ಅವರು ಜನಿಸುವರು.

**(ಸಹೀಹ್ ಬುಖಾರಿ ಕಿತಾಬು ಅಹಾದೀಸುಲ್ ಅಂಬಿಯಾ ಬಾಬ್ ನುಝೂಲು ಈಸಬ್ನು ಮರಿಯಂ)**

ಇನ್ನೊಂದು ಹದೀಸಿನಲ್ಲಿ ಇದರ ನೈಜತೆಯನ್ನು ಇನ್ನಷ್ಟು ವಿವರಿಸುತ್ತಾ ಆಗಮಿಸಲಿರುವ ಮಸೀಹರು ಇಮಾಮ್ ಮಹ್‌ದಿಯು ಆಗಿರುವರೆಂದು ಸ್ಪಷ್ಟಪಡಿಸಲಾಗಿದೆ. ಅಂದರೆ ಮಸೀಹ್ ಮತ್ತು ಮಹ್‌ದಿಯು ಒಂದೇ ವ್ಯಕ್ತಿಯ ಎರಡು ನಾಮಗಳಾಗಿವೆ ಎಂದು ವಿವರಿಸುತ್ತಾ ಹೀಗೆ ಹೇಳಲಾಗಿದೆ:

**'ವಲಲ್ ಮಹದಿಯ್ಯು ಇಲ್ಲಾ ಈಸಬ್ನು ಮರ್‌ಯಮ'**

ಅಂದರೆ ಈಸಬ್ನು ಮರ್‌ಯಮರ ಹೊರತು ಬೇರೆ ಯಾವ ಮಹದಿಯೂ ಇಲ್ಲ.

**(ಇಬ್ನುಮಾಜಾ ಬಾಬ್ ಶಿದ್ದತುರ್ಝಮಾನ್ ಪುಟ 257 ಮಿಸ್ರಿ – ಕಂಝುಲ್ ಉಮ್ಮಾಲ್ ಸಂ. 7 ಪುಟ 156)**

ಹಝ್ರತ್ ಪೈಗಂಬರ್[ಸ] ಬರುವಂತಹ ಇಮಾಮರ ಕಾಲದ ಕುರಿತು ಸಹ ಹೀಗೆ ಹೇಳಿರುವರು:

**ಇಧಾ ಮಝತ್ ಅಲ್ಫುನ್‌ವ್ವ ಮಿಅತಾನಿ ವ ಅರ್ಬಊನ ಸನತನ್ ಯಬ್‌ಅಸುಲ್ಲಾಹುಲ್ ಮಹ್‌ದಿಯ್ಯ**

ಅಂದರೆ ಒಂದು ಸಾವಿರದ ಇನ್ನೂರ ನಲ್ವತ್ತು ವರ್ಷ ಕಳೆದರೆ ಅಲ್ಲಾಹನು ಮಹದಿಯನ್ನು ಅವತೀರ್ಣಗೊಳಿಸುವನು.

**(ಅನ್ನಜುಮುಸ್ಸಾಖಿಬ್ ಸಂ. 2 ಪುಟ. 209)**

ಆ ಮಸೀಹ್ ಮತ್ತು ಮಹ್‌ದಿಯ ಸ್ಥಾನಮಾನದ ಬಗ್ಗೆ ಹಝ್ರತ್ ಪೈಗಂಬರ್[ಸ] ಅರುಹುತ್ತಾರೆ.

**ಲೈಸ ಬೈನೀ ವಬೈನಹೂ ನಬಿಯ್ಯುನ್ ಯಾನಿ ಈಸಾ ವ ಇನ್ನಹು ನಾಝಿಲುನ್ ಫ ಇಧಾ ರಾಅಇತುಮೂಹು ಫಅ್‌ರಿಫೂಹು**

ಅಂದರೆ ಅವತೀರ್ಣರಾಗುವ ಮಸೀಹ್ ಮತ್ತು ನನ್ನ ನಡುವೆ ಬೇರೆ ಯಾವುದೇ ಪ್ರವಾದಿಯಿಲ್ಲ ಮತ್ತು ಮಸೀಹ್ ಖಂಡಿತವಾಗಿಯೂ ನಿಮ್ಮಲ್ಲಿ ಅವತೀರ್ಣರಾಗುವರು. ಆದ್ದರಿಂದ ಅವರು ಬರುವಾಗ, ಅವರನ್ನು ಕಂಡ ಮಾತ್ರಕ್ಕೆ ನೀವು ಅವರನ್ನು ಗುರುತಿಸಬೇಕು.

**(ಅಬೂದಾವೂದ್ ಕಿತಾಬುಲ್ ಮಲಾಹಮ್ ಬಾಬ್ ಖುರೂಜುದ್ದಜ್ಜಾಲ್)**

ಸಹೀಹ್ ಮುಸ್ಲಿಮಿನ ಒಂದು ಹದೀಸಿನಲ್ಲಿ ಹಝ್ರತ್ ಪೈಗಂಬರ್[ಸ] ಅವತೀರ್ಣರಾಗುವ ಮಸೀಹರ ಬಗ್ಗೆ ಒಂದೇ ವಾಕ್ಯದಲ್ಲಿ ಪದೇ ಪದೇ ನಬಿ ಎಂಬ ನಾಮದಿಂದ ಕರೆದಿರುವರು. ಅವರು ಅರುಹುತ್ತಾರೆ:

**ವಯುಹ್ಸರು ನಬಿಯುಲ್ಲಾಹಿ ಈಸಾ ವ ಅಸ್‌ಹಾಬುಹೂ..... ಫ ಯರ್ಗ಼ಬು ನಬಿಯುಲ್ಲಾಹಿ ಈಸಾ ವ ಅಸ್‌ಹಾಬುಹೂ.... ಸುಮ್ಮ ಯಹ್ಬಿತು ನಬಿಯುಲ್ಲಾಹಿ ಈಸಾ ವ ಅಸ್‌ಹಾಬುಹೂ..... ಫ ಯರ್ಗಬು ನಬಿಯುಲ್ಲಾಹಿ ಈಸಾ ವ ಅಸ್‌ಹಾಬುಹೂ ಇಲಲ್ಲಾಹಿ.....**

**(ಮುಸ್ಲಿಮ್ ಬಾಬ್ ಝಿಕುರ್ ದಜ್ಜಾಲ್)**

ಅಂದರೆ ಮಸೀಹ್ ಮೌಊದರು[ಅ] ಯಅ್‌ಜೂಜ್ ಮಅ್‌ಜೂಜ್‌ಗಳು ಪ್ರಬಲರಾಗುವ ಕಾಲದಲ್ಲಿ ಆಗಮಿಸುವಾಗ ಮಸೀಹ್ ನಬಿಯುಲ್ಲಾಹ್ ಮತ್ತು ಅವರ ಅನುಯಾಯಿಗಳು ವಿರೋಧಿಗಳ ವಲಯದಲ್ಲಿ ಆವರಿಸಲ್ಪಡುವರು..... ಆಗ ಮಸೀಹ್ ನಬಿಯುಲ್ಲಾಹ್ ಮತ್ತು ಅವರ ಅನುಯಾಯಿಗಳು ಅಲ್ಲಾಹನ ಸನ್ನಿಧಿಯಲ್ಲಿ ಪ್ರಾರ್ಥನಾ ನಿರತರಾಗುವರು. ಆ ಪ್ರಾರ್ಥನೆಯ ಕಾರಣದಿಂದ ಮಸೀಹ್ ನಬಿಯುಲ್ಲಾಹ್ ಮತ್ತು ಅವರ ಅನುಯಾಯಿಗಳು ಕಷ್ಟಗಳ ವರ್ತುಲದಿಂದ ಪಾರಾಗಿ ವಿರೋಧಿಗಳ ಶಿಬಿರಗಳ ಮೇಲೆ ನುಗ್ಗುವರು. ಆದರೆ ಅಲ್ಲಿ ಅವರಿಗೆ ಹೊಸ ರೀತಿಯ ಸಮಸ್ಯೆಗಳು ತಲೆದೋರುವುವು. ಆಗ ಮಸೀಹ್ ನಬಿಯುಲ್ಲಾಹ್ ಮತ್ತು ಅವರ ಅನುಯಾಯಿಗಳು ಪುನಃ ಅಲ್ಲಾಹನ ಸನ್ನಿಧಿಯಲ್ಲಿ ಪ್ರಾರ್ಥಿಸುತ್ತಾ ಸಾಷ್ಟಾಂಗವೆರಗುವರು. ಆಗ ಅಲ್ಲಾಹನು ಅವರ ಕಷ್ಟತೆಗಳನ್ನು ನಿವಾರಿಸುವನು.

ಈ ಹದೀಸಿನಲ್ಲಿ ಹಝ್ರತ್ ಪೈಗಂಬರ್[ಸ] ಒಂದೇ ವಾಕ್ಯದಲ್ಲಿ ಮಸೀಹ್ ಮೌಊದರ ಕುರಿತು ನಾಲ್ಕು ಬಾರಿ ನಬಿಯುಲ್ಲಾಹ್ ಎಂದು ಅರುಹಿರುವರು.

ಮೇಲೆ ವಿವರಿಸಿದ ಹದೀಸಿನಿಂದ ಅಂತಿಮ ಕಾಲಘಟ್ಟದಲ್ಲಿ ಹದಿಮೂರನೇ ಶತಮಾನದ ಕೊನೆಯಲ್ಲಿ ಮಸೀಹ್ ಮತ್ತು ಮಹ್‌ದೀ ಅವತೀರ್ಣರಾಗುವರೆಂದು ತಿಳಿದುಬರುತ್ತದೆ. ಅವರು ಹಝ್ರತ್ ಪೈಗಂಬರರ[ಸ] ಪ್ರತಿಬಿಂಬ ಅಥವಾ ಪ್ರತಿಪುರುಷರ ರೂಪದಲ್ಲಿ ಅವತೀರ್ಣರಾಗುವರು ಮತ್ತು ಅವರನ್ನು ಅಲ್ಲಾಹನು ನುಬುವತಿನ ಸ್ಥಾನದಿಂದ ಅನುಗ್ರಹಿಸುವನು. ಈ ಭವಿಷ್ಯವಾಣಿಯಂತೆ ಹಝ್ರತ್ ಮಿರ್ಝಾ ಗ಼ುಲಾಂ ಅಹ್ಮದ್[ಅ] ಸರಿಯಾಗಿ ಹದಿಮೂರನೇ ಶತಮಾನದ ಕೊನೆಯಲ್ಲಿ ಮಸೀಹ್ ಮತ್ತು ಮಹ್‌ದಿಯಾಗಿರುವರೆಂದು

ವಾದಿಸಿದರು. ಅಲ್ಲಾಹನು ಅವರಿಗೆ ದಿವ್ಯಸಂದೇಶದ ಮೂಲಕ **ಜಅಲ್ನಾಕಲ್ ಮಸೀಹಿಬ್ನು ಮರ್‌ಯಮ** – ನಾವು ನಿನ್ನನ್ನು ಮಸೀಹಿಬ್ನು ಮರ್‌ಯಮನನ್ನಾಗಿ ಮಾಡಿರುತ್ತೇವೆ ಎಂದು ಹೇಳಿದನು.

**(ಇಝಾಲೆ ಔಹಾಂ ಪುಟ 632)**

ಅದೇ ರೀತಿ ಅಲ್ಲಾಹನು ಹಝ್ರತ್ ಪೈಗಂಬರರ(ಸ) ಸಂಪೂರ್ಣ ಅನುಸರಣೆಯ ಮತ್ತು ವಿಧೇಯತೆಯ ಫಲವಾಗಿ ಭವಿಷ್ಯವಾಣಿಯಂತೆ ಅವರಿಗೆ ಉಮ್ಮತಿ ನಬಿಯ ಸ್ಥಾನವನ್ನು ನೀಡಲಾಗಿತ್ತು. ಅವರು ಈ ಸ್ಥಾನದ ಕುರಿತು ವಿವರಿಸಿ ಹೇಳುತ್ತಾರೆ:

"ಪ್ರವಾದಿತ್ವ ನಮ್ಮ ನಬಿ ಕರೀಮ್‌ರೊಂದಿಗೆ(ಸ) ಸಮಾಪ್ತವಾಯಿತು. ಪವಿತ್ರ ಖುರ್‌ಆನಿನ ಹೊರತು ನಮಗೆ ಬೇರೆ ಗ್ರಂಥವಿಲ್ಲ. ಅದು ಎಲ್ಲ ಗ್ರಂಥಗಳಿಗಿಂತಲೂ ಶ್ರೇಷ್ಠವಾದುದಾಗಿದೆ, 'ಹಝ್ರತ್ ಪೈಗಂಬರ(ಸ) ಶರೀಅತ್ (ನಿಯಮಸಂಹಿತೆ) ಹೊರತು ಬೇರೆ ಶರೀಅತ್ ನಮಗಿಲ್ಲ. ನಿಸ್ಸಂದೇಹವಾಗಿಯೂ ಹಝ್ರತ್ ಪೈಗಂಬರ್(ಸ) ನನ್ನ ಹೆಸರನ್ನು ನಬಿಯೆಂದು ಇಟ್ಟಿದ್ದಾರೆ. ಇದು ಅವರನ್ನು ಸಂಪೂರ್ಣವಾಗಿ ಅನುಸರಿಸಿರುವುದರಿಂದ ಲಭಿಸಿದ ಪ್ರತಿಬಿಂಬ ಅಥವಾ ಮಾದರಿಯ ಅನುಗ್ರಹವಾಗಿದೆ. ನನ್ನಲ್ಲಿ ಯಾವುದೇ ಶ್ರೇಷ್ಠತೆಯನ್ನು ನಾನು ಕಾಣುವುದಿಲ್ಲ, ನಾನು ಏನಾದರೂ ಗಳಿಸಿರುವವನಾದರೆ ಅದು ಆ ಪವಿತ್ರ ಪ್ರವಾದಿಯಿಂದ ಗಳಿಸಿರುವುದಾಗಿದೆ. ಅಲ್ಲಾಹನ ಸನ್ನಿಧಿಯಲ್ಲಿ ನನ್ನ ನುಬುವತಿನ ಅರ್ಥ ಕೇವಲ ದೈವಿಕ ಸಂದೇಶ ಹಾಗೂ ಸಂಬೋಧನೆಯ ಆಧಿಕ್ಯವಾಗಿದೆ. ಯಾರಾದರೂ ಅದಕ್ಕಿಂತ ಹೆಚ್ಚಿನದ್ದನ್ನು ವಾದಿಸುವವನಾದರೆ ಅಥವಾ ತನಗೆ ಹೆಚ್ಚಿನ ಶ್ರೇಷ್ಠತೆಯನ್ನು ಕಲ್ಪಿಸುವನಾದರೆ ಅಥವಾ ತನ್ನನು ಹಝ್ರತ್ ಪೈಗಂಬರ(ಸ) ನೊಗದಿಂದ ಬೇರ್ಪಡಿಸುವನಾದರೆ ಅವನ ಮೇಲೆ ಅಲ್ಲಾಹನ ಶಾಪವಿದೆ. ನಮ್ಮ ರಸೂಲ್ ಕರೀಮ್(ಸ) ಖಾತಮುನ್ನಬಿಯೀನ್ ಆಗಿದ್ದಾರೆ. ಅವರೊಂದಿಗೆ ಸಂದೇಶವಾಹಕರ ಸರಣಿ ಸಮಾಪ್ತವಾಯಿತು. ಹಝ್ರತ್ ಪೈಗಂಬರರ(ಸ) ನಂತರ ಯಾರಿಗೂ ಸ್ವತಂತ್ರ ನಬಿಯ ವಾದ ಮಾಡುವುದು ಸಾಧ್ಯವಿಲ್ಲ. ಈಗ ಹೇರಳವಾಗಿ ದೈವಿಕ ಸಂದೇಶ (ಲಭಿಸುವ ಪದವಿ)

ಮಾತ್ರ ಬಾಕಿಯಿದೆ. ಅದು ಕೂಡ ನಬಿ ಕರೀಮ್‌ರನ್ನು(ಸ) ಅನುಸರಿಸುವುದರ ಷರತ್ತಿನಿಂದ ಮಾತ್ರ ತೆರೆದಿದೆ ಅದರ ಹೊರತು ಇಲ್ಲ. ನಾನು ಅಲ್ಲಾಹನ ಮೇಲೆ ಆಣೆ ಹಾಕಿ ಹೇಳುತ್ತೇನೆ! ನನಗೆ ಈ ಸ್ಥಾನ ಲಭಿಸಿರುವುದು ಮುಹಮ್ಮದ್ ಮುಸ್ತಫಾರ(ಸ) ಪ್ರಕಾಶದ ಪ್ರಭೆಯನ್ನು ಅನುಸರಿಸುವುದರಿಂದ ಮಾತ್ರವೇ ಆಗಿದೆ. ನನ್ನ ಹೆಸರನ್ನು ಅಲ್ಲಾಹನು **'ಮಜಾಝೀ'**ಯಾಗಿ ನಬಿಯೆಂದು ಇಟ್ಟಿದ್ದಾನೆ, ಹೊರತು ಅದು **'ಹಖೀಖಿ'**ಯಾಗಿ ಅಲ್ಲ.* ಇಲ್ಲಿ ಅಲ್ಲಾಹನ ಹಾಗೂ ಹಝ್ರತ್ ಪೈಗಂಬರರ(ಸ) ಘನತೆಯನ್ನು ಸಂಕುಚಿತಗೊಳಿಸಲಾಗಿಲ್ಲ. ಏಕೆಂದರೆ ನನ್ನ ತರಬೇತಿಯು ಹಝ್ರತ್ ಪೈಗಂಬರರ(ಸ) ರೆಕ್ಕೆಗಳಡಿಯಲ್ಲಿ ನಡೆದಿದೆ. ನನ್ನ ಕಾಲ್ನಡಿಗೆ ಹಝ್ರತ್ ಪೈಗಂಬರರ(ಸ) ಹೆಜ್ಜೆಗುರುತುಗಳನ್ನು ಹಿಂಬಾಲಿಸುತ್ತಾ ಇದೆ. ನಾನು ಯಾವುದೇ ಮಾತು ನನ್ನ ವತಿಯಿಂದ ಹೇಳಿಲ್ಲ; ಬದಲಾಗಿ

---

* **ಹಖೀಖಿ ನುಬುವ್ವತ್:** ಹಖೀಖಿ ನುಬುವ್ವತ್ ಎಂಬುದು ಹಝ್ರತ್ ಮಸೀಹ್ ಮೌಊದ್(ಅ) ಬಳಸಿದ ಒಂದು ಪಾರಿಭಾಷಿಕ ಪದವಾಗಿದೆ. ಇದರ ಅರ್ಥ ಶರೀಅತ್ ಮತ್ತು ನೇರವಾಗಿ ಲಭಿಸುವ ಪ್ರವಾದಿತ್ವ ಪದವಿ ಎಂಬುದಾಗಿದೆ.

ಮೌಲವಿ ಮುಹಮ್ಮದ್ ಅಲಿ ಸಾಹಿಬರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬರೆದ ಪತ್ರದಲ್ಲಿ ಹೀಗೆ ಹೇಳುತ್ತಾರೆ: "ಈ ನುಬುವ್ವತ್ (ಪ್ರವಾದಿತ್ವ) ಮತ್ತು ರಿಸಾಲತನ್ನು ಹಖೀಖಿ ನುಬುವ್ವತ್ ಮತ್ತು ರಿಸಾಲತ್ ಎಂದರೆ, ಶರೀಅತ್ ಲಭಿಸಿದ ನುಬುವ್ವತ್ ಎಂದು ಭಾವಿಸುವ ವ್ಯಕ್ತಿ ತಪ್ಪು ತಿಳಿದುಕೊಂಡಿದ್ದಾನೆ."

**(ಮೌಲವಿ ಮುಹಮ್ಮದ್ ಅಲಿ ಸಾಹಿಬ್ ಬರೆದ 'ಅನ್ನುಬುವ್ವತ್ ಫಿಲ್ ಇಸ್ಲಾಮ್' ಎಂಬ ಪುಸ್ತಕದಿಂದ, ಪುಟ ಸಂ. 196, ಟಿಪ್ಪಣಿ)**

**ಮಜಾಝೀ ನುಬುವ್ವತ್:** ಹಖೀಖಿ ನುಬುವ್ವತ್ ಎಂಬ ಪಾರಿಭಾಷಿಕ ಪದಕ್ಕೆ ಎದುರಾಗಿ ಪ್ರಯೋಗಿಸಲ್ಪಡುವಂತಹ ಮಜಾಝೀ ನುಬುವ್ವತ್ ಎಂಬುದರ ಅರ್ಥ ಶರೀಅತ್ ಇಲ್ಲದ ಹಾಗೂ ಹಝ್ರತ್ ಮುಹಮ್ಮದ್ ಪೈಗಂಬರರೊಡನೆ(ಸ) ಇರುವ ಆಳವಾದ ಸಂಬಂಧದಿಂದ ಲಭಿಸಿದಂತಹ ನುಬುವ್ವತ್.

ನಾನು ಸ್ವತಂತ್ರವಾದ ಶರೀಅತ್ ತಂದ ನಬಿಯಲ್ಲ ಹಾಗೂ ಸ್ವತಂತ್ರವಾದ ನಬಿಯೂ ಅಲ್ಲ. ನನ್ನ ಅನುಕರಣೀಯ ಪ್ರವಾದಿಯಾದ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಂತರಿಕ ಅನುಗ್ರಹಗಳನ್ನು ಪಡೆದುಕೊಂಡು..... ರಸೂಲ್ ಮತ್ತು ನಬಿಯಾಗಿರುವೆನು – ಆದರೆ ಯಾವುದೇ ಹೊಸ ಶರೀಅತ್ ಇಲ್ಲದೆ. ಈ ರೀತಿಯಲ್ಲಿ ನಬಿಯೆಂದು ಕರೆಯಲ್ಪಡುವುದರಿಂದ ನಾನು ಎಂದೂ ನಿರಾಕರಿಸಲಿಲ್ಲ. ಈ ಅರ್ಥದಲ್ಲಿಯೇ ಅಲ್ಲಾಹನು ನನ್ನನ್ನು ನಬಿ ಮತ್ತು ರಸೂಲ್ ಎಂದು ಕರೆದಿರುವನು. ಆದ್ದರಿಂದ ಈಗಲೂ ನಾನು ಈ ಅರ್ಥದಲ್ಲಿ ನಬಿ ಮತ್ತು ರಸೂಲ್ ಆಗಿರುವುದನ್ನು ನಿರಾಕರಿಸುವುದಿಲ್ಲ.

**(ಏಕ್ ಗ़ಲತೀ ಕಾ ಇಝಾಲ; ರೂಹಾನೀ ಖಝಾಇನ್ ಭಾಗ 18, ಪುಟ 210,211)**

ಅಲ್ಲಾಹನು ನನಗೆ ನೀಡಿದ ದಿವ್ಯಸಂದೇಶವನ್ನು ಅನುಸರಿಸಿದ್ದೇನೆ. ಆದ್ದರಿಂದ ನಾನು ಜನರ ಬೆದರಿಕೆಗೆ ಹೆದರುವವನಲ್ಲ."

**(ಅಲ್‌ಇಸ್‌ತಿಫ್‌ತಾ – ರೂಹಾನಿ ಖಝಾಇನ್ ಸಂ. 22; ಪುಟ 688, 689)**

ಹಝ್ರತ್ ಮಸೀಹ್ ಮೌಊದ್(ಅ) 1889ರಲ್ಲಿ ಒಂದು ಪರಿಶುದ್ಧವಾದ ಜಮಾಅತನ್ನು ಸ್ಥಾಪಿಸಿದರು. ಆ ಜಮಾಅತಿಗೆ 'ಜಮಾಅತ್ ಅಹ್ಮದಿಯಾ ಮುಸ್ಲಿಮ' ಎಂದು ಹೆಸರಿಟ್ಟರು. ಅವರ ಸಂಪೂರ್ಣ ಜೀವಿತ ಇಸ್ಲಾಮನ್ನು ಪ್ರಪಂಚದಾದ್ಯಂತ ವಿಜಯಿಸಲಿಕ್ಕಾಗಿ ಕಾರ್ಯನಿರತವಾಗಿತ್ತು. ಅವರಿಂದ ವಿರಚಿತವಾದ 80ರಷ್ಟು ಗ್ರಂಥಗಳು ಅದಕ್ಕೆ ಸಾಕ್ಷಿಗಳಾಗಿವೆ. ಅದೇ ರೀತಿಯಲ್ಲಿ ಇಸ್ಲಾಮಿನ ವಿಜಯಕ್ಕಾಗಿ ಅವರು ತಮ್ಮ ಪೂರ್ತಿ ಜೀವನವನ್ನು ಮುಡಿಪಾಗಿಟ್ಟಿದ್ದರೆಂಬುದಕ್ಕೆ ಸ್ವಂತ ಹಾಗು ಇತರರ ಸಾಕ್ಷಿಗಳು ನಮ್ಮ ಮುಂದಿವೆ.

ಅಲ್ಲಾಹನ ಇಂಗಿತಕ್ಕನುಸರಿಸಿ ಹಝ್ರತ್ ಮಸೀಹ್ ಮೌಊದ್(ಅ) ತನ್ನ ಕರ್ತವ್ಯವನ್ನು ಅತ್ಯಂತ ಮನೋಹರವಾಗಿ ನಿಭಾಯಿಸಿದರು. ತನ್ನ ಕೊನೆಯುಸಿರಿನ ತನಕ ದೈವಿಕವಾದ ಈ ಸಂಘಟನೆಗಾಗಿ ತನ್ನ ಜೀವಿತದ ಪ್ರತಿಕ್ಷಣವನ್ನು ಅರ್ಪಿಸಿದರು. ಅದಕ್ಕಾಗಿ ಒಂದು ಪರಿಶುದ್ಧವಾದ ಜಮಾಅತನ್ನು ಸ್ಥಾಪಿಸಿದರು. ಅವರ ಮರಣಾನಂತರ ಅವರ ವಿರೋಧಿಗಳು ಈ ಜಮಾಅತ್ ನಶಿಸಿ ಹೋಗಬಹುದೆಂದು ಭಾವಿಸಿದರು. ಆದರೆ ಅಲ್ಲಾಹನು ಅವನ ವಾಗ್ದಾನದ ಪ್ರಕಾರ ಖಿಲಾಫತಿನ ವ್ಯವಸ್ಥೆಯನ್ನು ಜಾರಿಗೊಳಿಸಿದನು. ಅಲ್ಲಾಹನು ಅರುಹುತ್ತಾನೆ:

وَعَدَ اللّٰهُ الَّذِيْنَ اٰمَنُوْا مِنْكُمْ وَعَمِلُوا الصّٰلِحٰتِ لَيَسْتَخْلِفَنَّهُمْ فِي الْاَرْضِ
كَمَا اسْتَخْلَفَ الَّذِيْنَ مِنْ قَبْلِهِمْ ۪ وَلَيُمَكِّنَنَّ لَهُمْ دِيْنَهُمُ الَّذِي ارْتَضٰى
لَهُمْ وَلَيُبَدِّلَنَّهُمْ مِّنْۢ بَعْدِ خَوْفِهِمْ اَمْنًا ؕ يَعْبُدُوْنَنِيْ لَا يُشْرِكُوْنَ بِيْ شَيْـًٔا ؕ
وَمَنْ كَفَرَ بَعْدَ ذٰلِكَ فَاُولٰٓئِكَ هُمُ الْفٰسِقُوْنَ-

ನಿಮ್ಮ ಪೈಕಿ ವಿಶ್ವಾಸ ಹೊಂದಿ ಸತ್ಕರ್ಮಗೈಯುವವರಿಗೆ, ಅವರಿಗಿಂತ ಮುಂಚೆ

ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ ಖಂಡಿತವಾಗಿಯೂ ಅವರನ್ನು ಸಹ ಭೂಮಿಯಲ್ಲಿ ಖಲೀಫರನ್ನಾಗಿ ಮಾಡುವನೆಂದೂ ಅವರಿಗೋಸ್ಕರ ಅವನು ತೃಪ್ತಿಗೊಂಡ ಧರ್ಮವನ್ನು ಅವರಿಗೆ ಬಲಪಡಿಸಿ ಕೊಡುವನೆಂದೂ ಅವರ ಭಯ ಭೀತಿಯ ಬಳಿಕ ಅವರಿಗೆ ಸುರಕ್ಷತೆ ಮತ್ತು ನೆಮ್ಮದಿಯನ್ನು ದಯಪಾಲಿಸುವನೆಂದೂ ಅಲ್ಲಾಹನು ವಾಗ್ದಾನ ಮಾಡಿದ್ದಾನೆ. ಅವರು ನನ್ನನ್ನು ಮಾತ್ರ ಆರಾಧಿಸುವರು; ನನಗೆ ಯಾರನ್ನೂ ಸಹಭಾಗಿ ಮಾಡಲಾರರು. ಅನಂತರವೂ ಯಾರಾದರೂ ನಿರಾಕರಿಸಿದರೆ ಅವರೇ ಧಿಕ್ಕಾರಿಗಳು. (24:56)

ಹಝ್ರತ್ ಅಬ್ದುರಹ್ಮಾನ್ ಇಬ್ನು ಸಹಲ್ ವರದಿ ಮಾಡುತ್ತಾರೆ, ಹಝ್ರತ್ ಪೈಗಂಬರ್[ಸ] ಅರುಹಿದರು: ಎಲ್ಲ ನುಬುವತಿನ ನಂತರವು ಖಿಲಾಫತ್ ಉಂಟಾಗುತ್ತದೆ.

**(ಕಂಝುಲ್ ಉಮ್ಮಾಲ್, ಕಿತಾಬುಲ್ ಫಿತನ್ ಮಿನ್ ಖಿಸ್ಮುಲ್ ಅಫ್ಆಲ್ – ಫಸ್ಲ್ ಫೀ ಮುತಫರ್ರಿಕಾತುಲ್ ಫಿತನ್ ಸಂ.11; ಪುಟ 115 ಹದೀಸ್ ನಂಬ್ರ 31444)**

ಹಝ್ರತ್ ಹುಝೈಫ ವರದಿ ಮಾಡುತ್ತಾರೆ, ಹಝ್ರತ್ ಪೈಗಂಬರ್[ಸ] ಅರುಹಿದರು: ನಿಮ್ಮಲ್ಲಿ ಪ್ರವಾದಿತ್ವದ ನಂತರ ಪ್ರವಾದಿತ್ವದ ಮಾರ್ಗದಲ್ಲಿ ಖಿಲಾಫತ್ ಸ್ಥಾಪಿತವಾಗುವುದು. ನಂತರ ಆಕ್ರಮಣಕಾರಿಯಾದ ರಾಜಾಡಳಿತೆ ಸ್ಥಾಪಿತವಾಗುವುದು. ಅದರ ನಂತರ ನಿರಂಕುಶ ಪ್ರಭುಗಳ ಆಧಿಪತ್ಯ ಉಂಟಾಗುವುದು. ನಂತರ ಪ್ರವಾದಿತ್ವದ ಮಾರ್ಗದಲ್ಲಿ ಪುನಃ ಖಿಲಾಫತ್ ಸ್ಥಾಪಿತವಾಗುವುದು. ಅಷ್ಟು ಹೇಳಿ ಹಝ್ರತ್ ಪೈಗಂಬರ್[ಸ] ಮೌನವಾದರು.

**(ಮುಸ್ನದ್ ಅಹ್ಮದ್ ಹದೀಸ್ 17680)**

ಹಝ್ರತ್ ಪೈಗಂಬರರ[ಸ] ಈ ಭವಿಷ್ಯವಾಣಿಯಂತೆ ವಾಗ್ದತ್ತ ಮಹ್ದೀ ಮತ್ತು ಮಸೀಹರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಅಲೈಹಿಸ್ಸಲಾಮರ ನಿಧನದ ನಂತರ ಅಹ್ಮದಿಯಾ ಖಿಲಾಫತಿನ ಅನುಗ್ರಹೀತವೂ ವೈಭವಶಾಲಿಯೂ ಆದ ವ್ಯವಸ್ಥೆಯು ಜಾರಿಯಾಯಿತು. ಅದನ್ನು ಹಝ್ರತ್ ಮಸೀಹ್ ಮೌಊದ್[ಅ] **ಖುದ್ರತೆ ಸಾನಿಯಾ** ಎಂದು ನಾಮಕರಣ ಮಾಡಿದರು. ಹಝ್ರತ್ ಮಸೀಹ್ ಮೌಊದ್[ಅ] ಖಿಲಾಫತ್ ಅಹ್ಮದಿಯಾದ ಬಗ್ಗೆ ಸುವಾರ್ತೆ

ನೀಡುತ್ತಾ ಅರುಹುತ್ತಾರೆ:

"ಇದು ಅಲ್ಲಾಹನ ಸುನ್ನತ್ (ನಡವಳಿಕೆ) ಆಗಿದೆ, ಮನುಷ್ಯನನ್ನು ಭೂಲೋಕದಲ್ಲಿ ಸೃಷ್ಟಿಸಿದಾಗಿನಿಂದ ಅವನ ಈ ನಡವಳಿಕೆಯು ಜಾರಿಯಲ್ಲಿದೆ. ಅವನು ನಬಿಗಳನ್ನೂ ಸಂದೇಶವಾಹಕರನ್ನು ಕಳುಹಿಸಿ ಅವರಿಗೆ ವಿಜಯ ನೀಡುತ್ತಾನೆ. ಅಲ್ಲಾಹನು ಹೇಳುತ್ತಾನೆ:

كَتَبَ اللّٰهُ لَاَغۡلِبَنَّ اَنَا وَرُسُلِیۡ

'ನಾನೂ ನನ್ನ ಸಂದೇಶವಾಹಕರೂ ಖಂಡಿತವಾಗಿಯೂ ವಿಜಯಿಗಳಾಗುವೆವು' ಎಂದು ಅಲ್ಲಾಹನು (ವಿಧಿ) ಬರೆದಿರುವನು. (58:22)

ವಿಜಯವೆಂಬುದರ ಅರ್ಥವೇನೆಂದರೆ, ಸಂದೇಶವಾಹಕರ ಮತ್ತು ನಬಿಗಳ ಉದ್ದೇಶವು ಅಲ್ಲಾಹನ ಇಚ್ಛೆಗಳೂ ನ್ಯಾಯವಿಧಿಗಳೂ ಭೂಮಿಯಲ್ಲಿ ಈಡೇರಬೇಕೆಂಬುದಾಗಿರುತ್ತವೆ..... ಆದರೆ ಅದರ ಈಡೇರಿಕೆ ಅವರ ಕೈಯಿಂದ ಮಾಡಿಸುವುದಿಲ್ಲ. ಒಂದು ರೀತಿಯ ವೈಫಲ್ಯವೆಂದು ತೋರುವ ಸನ್ನಿವೇಶದಲ್ಲಿ ಅವರನ್ನು ಮರಣಪಡಿಸಿ ಶತ್ರುಗಳ ಲೇವಡಿ, ಗೇಲಿ, ಆಕ್ಷೇಪಣೆ, ಆಪಾದನೆಗಳಿಗೆ ಸಂದರ್ಭ ಒದಗಿಸುತ್ತಾನೆ. ಶತ್ರುಗಳು ಲೇವಡಿ, ಗೇಲಿಗಳು ಮಾಡಿದ ನಂತರ ಅವನು ತನ್ನ ಶಕ್ತಿ ಪ್ರಕಟಣೆಯ ಮತ್ತೊಂದು ಕೈಯನ್ನು ತೋರಿಸುತ್ತಾನೆ ಮತ್ತು ಅನುಕೂಲಕರ ಪರಿಸ್ಥಿತಿಯನ್ನು ನಿರ್ಮಿಸಿ ಅದರಿಂದ ಅಪೂರ್ಣಗೊಂಡ ಉದ್ದೇಶವನ್ನು ಪೂರ್ತಿಗೊಳಿಸುತ್ತಾನೆ. ಒಟ್ಟಿನಲ್ಲಿ ತನ್ನ ಎರಡು ರೀತಿಯ ಶಕ್ತಿಯನ್ನು ಪ್ರಕಟಪಡಿಸುತ್ತಾನೆ. 1) ಪ್ರವಾದಿಗಳ ಕೈಯಿಂದಲೇ ತನ್ನ ಶಕ್ತಿಯ ಕೈಯನ್ನು ಪ್ರಕಟಪಡಿಸುತ್ತಾನೆ. 2) ಎರಡನೆಯದು, ಪ್ರವಾದಿಯ ಮರಣದ ನಂತರ ಸಂಕಷ್ಟಗಳ ಪರಿಸ್ಥಿತಿ ಒದಗಿಬಂದು ಶತ್ರುಗಳು ಪ್ರಬಲರಾಗಿ ಇನ್ನು ಇವರ ಕೆಲಸವು ಅಸ್ತವ್ಯಸ್ತವಾಯಿತು ಮತ್ತು ಈ ಸಂಘಟನೆಯು ನಿರ್ನಾಮವಾಗಬಹುದೆಂದು ಭಾವಿಸುತ್ತಾರೆ. ಜಮಾಅತಿನ ಸದಸ್ಯರೂ ಚಂಚಲಚಿತ್ತರಾಗಿ ಅವರ ಸೊಂಟಮುರಿದು ಹೋಗುವ ಪರಿಸ್ಥಿತಿಯೊದಗಿ ಬರುತ್ತದೆ. ಹಲವಾರು ದೌರ್ಭಾಗ್ಯವಂತರು ಧರ್ಮಪರಿತ್ಯಾಗ ಮಾಡುತ್ತಾರೆ! ಆಗ

ಅಲ್ಲಾಹನು ಎರಡನೇ ಸಲ ತನ್ನ ಪ್ರಬಲವಾದ ಶಕ್ತಿಯನ್ನು ಪ್ರಕಟಪಡಿಸುತ್ತಾನೆ. ಬೀಳುತ್ತಿರುವ ಜಮಾಅತನ್ನು ಸಂರಕ್ಷಿಸುತ್ತಾನೆ. ಆದರೆ ಯಾರು ಕೊನೆಯವರೆಗೆ ತಾಳ್ಮೆ ವಹಿಸುತ್ತಾರೋ ಅವರು ಅಲ್ಲಾಹನ ಪವಾಡವನ್ನು ವೀಕ್ಷಿಸುತ್ತಾರೆ! ಹಝ್ರತ್ ಅಬೂಬಕರರ(ರ) ಕಾಲದಲ್ಲಿಯೂ ಹೀಗೆ ನಡೆಯಿತು. ಹಝ್ರತ್ ಪೈಗಂಬರರ(ಸ) ಮರಣವು ಅಕಾಲದಲ್ಲಿ ಉಂಟಾದ ಮರಣವೆಂದು ಪರಿಗಣಿಸಲಾಗಿತ್ತು. ಮರಳುಗಾಡಿನ ಅವಿವೇಕಿಗಳಾದ ಹಲವಾರು ಅರಬಿಗಳು ಧರ್ಮಪರಿತ್ಯಾಗ ಮಾಡಿದರು. ಹಝ್ರತ್ ಪೈಗಂಬರರ(ಸ) ಸಹಾಬಿಗಳು ಕೂಡ ಅತ್ಯಂತ ದುಃಖದ ಕಾರಣ ಮತಿಗೆಟ್ಟವರಂತೆ ಆದರು. ಆಗ ಅಲ್ಲಾಹನು ಹಝ್ರತ್ ಅಬೂಬಕರ್‌ರವರನ್ನು(ರ) ಎದ್ದುನಿಲ್ಲಿಸಿ ಮತ್ತೊಮ್ಮೆ ತನ್ನ ಶಕ್ತಿಯ ಮಾದರಿಯನ್ನು ತೋರಿಸಿದನು. ಇಸ್ಲಾಮನ್ನು ನಿರ್ನಾಮವಾಗುವುದರಿಂದ ಸಂರಕ್ಷಿಸಿದನು ಮತ್ತು ಈ ವಾಗ್ದಾನವನ್ನು ಈಡೇರಿಸಿದನು. ಅದೇನಂದರೆ,

وَلَيُمَكِّنَنَّ لَهُمْ دِيْنَهُمُ الَّذِى ارْتَضٰى لَهُمْ وَلَيُبَدِّلَنَّهُمْ مِّنْ بَعْدِ خَوْفِهِمْ اَمْنًا

ಅವರ ಭಯಭೀತಿಯ ಬಳಿಕ ಅವರಿಗೆ ಸುರಕ್ಷತೆ ಮತ್ತು ನೆಮ್ಮದಿಯನ್ನು ದಯಪಾಲಿಸುವನೆಂದು ಅಲ್ಲಾಹನು ವಾಗ್ದಾನ ಮಾಡಿದ್ದಾನೆ. (24:56)

"ಪ್ರಿಯರೇ, ಅಲ್ಲಾಹನ ಪುರಾತನ ಕಾಲದಿಂದಲೇ ನಡೆದುಕೊಂಡು ಬಂದಿರುವ ನಡವಳಿಕೆ ಕ್ರಮ ಇದೇ ಆಗಿದೆ, ಅಲ್ಲಾಹನು ಎರಡು ಶಕ್ತಿ ಪ್ರಕಟಣೆಗಳನ್ನು ತೋರ್ಪಡಿಸುತ್ತಾನೆ. ಹೀಗೆ ಶತ್ರುಗಳ ಎರಡು ಹುಸಿ ಖುಷಿಗಳನ್ನು ಅವನು ಧ್ವಂಸ ಮಾಡಿ ತೋರಿಸುತ್ತಾನೆ. ಆದ್ದರಿಂದ ಅಲ್ಲಾಹನು ಆ ಪುರಾತನವಾದ ನಡವಳಿಕೆಯನ್ನು ಈಗ ವರ್ಜಿಸಲು ಸಾಧ್ಯತೆಯಿಲ್ಲ. ಆದ್ದರಿಂದ ನಾನು ನಿಮ್ಮಲ್ಲಿ ಹೇಳಿದ ವಿಷಯದ ಬಗ್ಗೆ ನೀವು ದುಃಖಿತರಾಗದಿರಿ. ನಿಮ್ಮ ಹೃದಯವು ವ್ಯಾಕುಲಗೊಳ್ಳದಿರಲಿ. ಯಾಕೆಂದರೆ ಎರಡನೇ ಶಕ್ತಿ ಪ್ರಕಟಣೆ ಕಾಣಬೇಕಾದದ್ದು ನಿಮಗೆ ಅಗತ್ಯವಾಗಿದೆ. ಅದರ ಬರುವಿಕೆ ನಿಮಗೆ ಉತ್ತಮವಾಗಿದೆ. ಯಾಕೆಂದರೆ ಅದು ಶಾಶ್ವತವಾಗಿದೆ.... ನಾನು ದೇವನ ಕಡೆಯಿಂದ ಒಂದು ಶಕ್ತಿಯ ಪ್ರಕಟಣೆಯ ರೂಪದಲ್ಲಿ ಅವತರಿಸಿರುವೆನು. ನಾನು ಅಲ್ಲಾಹನ ಒಂದು ಸಾಕಾರ ದಿವ್ಯಶಕ್ತಿ ಪ್ರಕಟಣೆಯಾಗಿದ್ದೇನೆ. ನನ್ನ ನಂತರ ಬೇರೆಯೂ

ವ್ಯಕ್ತಿತ್ವಗಳು ಬರುವವರು. ಅವರು ಅಲ್ಲಾಹನ ಎರಡನೇ ದಿವ್ಯಶಕ್ತಿ ಪ್ರಭಾವದ ಪ್ರಕಟಣೆಯಾಗಿರುವವರು. ಆದ್ದರಿಂದ ಅಲ್ಲಾಹನ ಎರಡನೇ ದಿವ್ಯಶಕ್ತಿ ಪ್ರಭಾವದ ಆವಿರ್ಭಾವದ ನಿರೀಕ್ಷೆಯಲ್ಲಿ ನೀವೆಲ್ಲರೂ ಒಟ್ಟಾಗಿ ಪ್ರಾರ್ಥಿಸುತ್ತಿರಿ. ಎರಡನೇ ದಿವ್ಯಶಕ್ತಿ ಪ್ರಭಾವದ ಆವಿರ್ಭಾವಕ್ಕಾಗಿ ಸಾತ್ವಿಕರ ಪ್ರತಿಯೊಂದು ಜಮಾಅತ್ ಪ್ರತಿಯೊಂದು ದೇಶದಲ್ಲಿ ಒಟ್ಟು ಸೇರಿ ಪ್ರಾರ್ಥನೆಯಲ್ಲಿ ನಿರತರಾಗಬೇಕಾಗಿದೆ. ಹೀಗೆ ಎರಡನೇ ದಿವ್ಯಶಕ್ತಿ ಪ್ರಕಟಣೆ ಆಕಾಶದಿಂದ ಇಳಿಯಲಿ ಮತ್ತು ನಿಮ್ಮ ಒಡೆಯನು ಅತ್ಯಂತ ಶಕ್ತಿಶಾಲಿ ಎಂದು ಕಾಣುವಂತಾಗಲಿ......"

**(ಅಲ್ ವಸಿಯ್ಯತ್ ರೂಹಾನೀ ಖಝಾಇನ್ ಸಂ. 20; ಪುಟ 304–306)**

ಇದಕ್ಕೆ ಸಂಬಂಧಿಸಿ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

"ಹಝ್ರತ್ ಪೈಗಂಬರರ(ಸ) ನಂತರ ಖಲೀಫರ ಪರಂಪರೆ ಸ್ಥಾಪಿತವಾದ ರೀತಿಯಲ್ಲಿಯೇ ಹಝ್ರತ್ ಮಸೀಹ್ ಮೌಊದರ(ಅ) ನಂತರ ಖಲೀಫರ ಪರಂಪರೆ ಸ್ಥಾಪಿತವಾಗುವುದು ಮತ್ತು ಅವರನ್ನು ಅನುಸರಿಸುವುದು ಕಡ್ಡಾಯವೆಂದೂ ಹಾಗೂ ಜಮಾಅತಿನ ನಿಜವಾದ ಪ್ರತಿನಿಧಿ ಅವರಾಗಿರುತ್ತಾರೆಂದೂ ಹಝ್ರತ್ ಮಸೀಹ್ ಮೌಊದರ(ಅ) ಉಲ್ಲೇಖದಿಂದ ಸಾಬೀತಾಗುತ್ತದೆ".

**(ಖಿಲಾಫತ್ ಅಲಾ ಮಿನ್‌ಹಾಜ್ ನುಬುವ್ವತ್ ಸಂ. 3, ಪುಟ 601)**

ಮೇ 1908ರಂದು ಹಝ್ರತ್ ಮಸೀಹ್ ಮೌಊದರ(ಅ) ನಿಧನದ ನಂತರ ಹಝ್ರತ್ ಹಾಫಿಝ್ ಹಕೀಂ ನೂರುದ್ದೀನ್ ಸಾಹಿಬ್(ರ) ಪ್ರಥಮ ಖಲೀಫರಾಗಿ ಆಯ್ಕೆಗೊಂಡರು. 1914ರಲ್ಲಿ ಖಲೀಫತುಲ್ ಮಸೀಹ್ ಅವ್ವಲ್‌ರ(ರ) ನಿಧನದ ನಂತರ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್(ರ) ಎರಡನೇ ಖಲೀಫರಾಗಿ ಚುನಾಯಿತರಾದರು. ಅವರ ನಿಧನದ ನಂತರ ಹಝ್‌ರತ್ ಮಸೀಹ್ ಮೌಊದ್‌ರ(ಅ) ಮೂರನೇ ಖಲೀಫರಾಗಿ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್(ರಹ್) ಆಯ್ಕೆಗೊಂಡರು. ಅವರ ನಿಧನದ ನಂತರ 1982ರಲ್ಲಿ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್(ರಹ್) ನಾಲ್ಕನೇ

ಖಲೀಫರಾಗಿ ಚುನಾಯಿತರಾದರು. ಅವರ ನಿಧನದ ನಂತರ 2003ರಲ್ಲಿ ನಮ್ಮ ಈಗಿನ ಇಮಾಮರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್(ಅಯ್ಯದುಲ್ಲಾಹು) ಹಝ್ರತ್ ಮಸೀಹ್ ಮೌಊದರ(ಅ) ಐದನೇ ಖಲೀಫರಾಗಿ ಆಯ್ಕೆಗೊಂಡರು. ಅವರ ನೇತೃತ್ವದಲ್ಲಿ ಅಹ್ಮದಿಯಾ ಜಮಾಅತ್ ಪ್ರಗತಿಯ ಹೆದ್ದಾರಿಯಲ್ಲಿ ನಿರತವಾಗಿದೆ.

ಅಲ್ಲಾಹನು ನಮ್ಮ ಪ್ರೀತಿಯ ಇಮಾಮರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್‌ರಿಗೆ(ಅಯ್ಯದುಲ್ಲಾಹು) ಆಯುರಾರೋಗ್ಯವನ್ನೂ ದೀರ್ಘಾಯುಷ್ಯವನ್ನೂ ಪ್ರದಾನ ಮಾಡಲಿ. ಅವರ ಕಾರುಣ್ಯದ ದೃಷ್ಟಿ ನಮ್ಮ ಮೇಲೆ ಸದಾ ಇರಲಿ, ಅವರ ಅನುಗ್ರಹೀತವಾದ ಖಿಲಾಫತಿನ ಕಾಲದಲ್ಲಿ ನೈಜ ಇಸ್ಲಾಮ್ ಅಹ್ಮದಿಯತಿನ ವಿಜಯವು ಉಂಟಾಗಲಿ – ಆಮೀನ್.

ಈ ಜಮಾಅತ್ ಅಭಿವೃದ್ಧಿ ಹೊಂದುತ್ತಾ ಹೋಗುವುದು. ಎರಡನೇ ಮಹತ್ತರವಾದ ಶಕ್ತಿ ಪ್ರಕಟಣೆಯ ದಿವ್ಯ ಸ್ವರೂಪಗಳು ಅಲ್ಲಾಹನ ಇಂಗಿತಕ್ಕನುಸಾರ ಸದಾ ನೆಲೆನಿಲ್ಲುವುದು. ಯಾಕೆಂದರೆ ನಮ್ಮ ಒಡೆಯನ ಹತ್ತಿರ ಎರಡನೇ, ಮೂರನೇ, ನಾಲ್ಕನೇ, ಐದನೇ ಹೀಗೆ ಹಲವು ಶಕ್ತಿ ಪ್ರಕಟಣೆಗಳು ಇವೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಇದಕ್ಕೆ ಸಂಬಂಧಿಸಿ ಒಂದೆಡೆ ಹೇಳುತ್ತಾರೆ:

"ನಾನು ಹೋಗುವೆನು, ಆದರೆ ಅಲ್ಲಾಹನು ನಿಮಗಾಗಿ ಎರಡನೇ ದಿವ್ಯಶಕ್ತಿಯನ್ನು ಕಳುಹಿಸುವನು' ಎಂದು ಹಝ್ರತ್ ಮಸೀಹ್ ಮೌಊದ್(ಅ) ಅರುಹಿದರು. ನಮ್ಮ ಒಡೆಯನ ಹತ್ತಿರ ಎರಡನೇ ದಿವ್ಯಶಕ್ತಿ ಮಾತ್ರವಲ್ಲ, ಅವನ ಹತ್ತಿರ ಮೂರನೇ ದಿವ್ಯಶಕ್ತಿ ಸಹ ಇದೆ, ಅವನ ಹತ್ತಿರ ನಾಲ್ಕನೇ ದಿವ್ಯಶಕ್ತಿಯೂ ಇದೆ. ಮೊದಲ ದಿವ್ಯಶಕ್ತಿ ಪ್ರಕಟಣೆಯ ನಂತರ ಎರಡನೇ ದೈವಿಕ ಶಕ್ತಿ ಪ್ರಕಟವಾಯಿತು. ಎರಡನೇ ದೈವಿಕ ಶಕ್ತಿ ಪ್ರಕಟಣೆಯ ನಂತರ ಮೂರನೇ ದಿವ್ಯ ಶಕ್ತಿ ಪ್ರಕಟವಾಗುವುದು. ಅದರ ನಂತರ ನಾಲ್ಕನೇ ದಿವ್ಯ ಶಕ್ತಿ ಆಗಮಿಸುವುದು. ಅದರ ನಂತರ ಐದನೇ ದಿವ್ಯಶಕ್ತಿ ಬರುವುದು. ಅದರ ನಂತರ ಆರನೆಯದು ಉಂಟಾಗುವುದು. ಅಲ್ಲಾಹನ ಹಸ್ತವು ಜನರಿಗೆ ಪವಾಡಗಳನ್ನು ತೋರಿಸುತ್ತಾ ಹೋಗುವುದು. ಪ್ರಪಂಚದ ಯಾವುದೇ ಪ್ರಬಲವಾದ ಶಕ್ತಿಗೂ, ಅತ್ಯಂತ

ಶಕ್ತನಾದ ದೊರೆಗೂ ಈ ಕಾರ್ಯಯೋಜನೆಯ ದಾರಿಯನ್ನು ಅಡ್ಡಿಪಡಿಸಲು ಸಾಧ್ಯವಿಲ್ಲ. ಈ ಉದ್ದೇಶವನ್ನು ಈಡೇರಿಸಲು ಅಲ್ಲಾಹನು ಹಝ್ರತ್ ಮಸೀಹ್ ಮೌಊದ್‌ರನ್ನು[ಅ] ಪ್ರಥಮ ಅಡಿಗಲ್ಲಾಗಿ ಮಾಡಿದನು. ನಂತರ ಎರಡನೆಯ ಅಡಿಗಲ್ಲಾಗಿ ನನ್ನನ್ನು ಇರಿಸಿದನು.ಹಝ್ರತ್ ಪೈಗಂಬರ್[ಸ] ಒಮ್ಮೆ ಅರುಹಿದರು: (ಇಸ್ಲಾಮ್) ಧರ್ಮ ಅಪಾಯದಲ್ಲಾಗುವಾಗ ಅಲ್ಲಾಹನು ಅದನ್ನು ಸಂರಕ್ಷಿಸಲು ಫಾರ್ಸಿವಂಶದಿಂದ ಕೆಲವರನ್ನು ಸನ್ನದ್ಧಗೊಳಿಸುವನು. ಹಝ್ರತ್ ಮಸೀಹ್ ಮೌಊದ್[ಅ] ಅವರಲ್ಲಿ ಒಬ್ಬರಾಗಿದ್ದರು. ಇನ್ನೊಬ್ಬ ವ್ಯಕ್ತಿ ನಾನಾಗಿದ್ದೇನೆ. 'ರಿಜಾಲ್' (ಕೆಲವು ಪುರುಷರು) ಎಂಬ ಶಬ್ದದ ಪ್ರಕಾರ ಫಾರ್ಸಿವಂಶಜರಿಂದ ಇನ್ನೂ ಕೆಲವು ವ್ಯಕ್ತಿಗಳು ಇಸ್ಲಾಮ್ ಧರ್ಮದ ಮಹತ್ವವನ್ನು ಸ್ಥಾಪಿಸಲು ಹಾಗು ಅದರ ಅಡಿಪಾಯವನ್ನು ಸುದೃಢಪಡಿಸಲು ಆವಿರ್ಭವಿಸುವರು."

**(ಅಲ್‌ಫಝ್ಲ್ ಇಂಟರ್‌ನ್ಯಾಷನಲ್ 23–29 ಮೇ 2014).**

ದ್ವಿತೀಯ ದಿವ್ಯಶಕ್ತಿಯ ಈ ಪ್ರತಿಫಲನಗಳ (ಫಾರಸೀ ವಂಶಜರಾದ ಶ್ರೇಷ್ಠ ಪುರುಷರು) ನೇತೃತ್ವದಲ್ಲಿ ಅಹ್ಮದಿಯಾ ಜಮಾಅತ್ ಮುನ್ನಡೆಯ ಹಂತವನ್ನು ಶೀಘ್ರಗತಿಯಲ್ಲಿ ಕ್ರಮಿಸುತ್ತಿದೆ ಎಂಬುದಕ್ಕೆ ಅಹ್ಮದಿಯಾ ಚರಿತ್ರೆ ಸಾಕ್ಷಿಯಾಗಿದೆ. ಈಗ ಜಮಾಅತಿಗೆ ಪ್ರಪಂಚದಲ್ಲಿ ಅತ್ಯಂತ ಗಣ್ಯವಾದ ಸ್ಥಾನವಿದೆ. ಮಾನವ ಕುಲದ ಸೇವೆಯಲ್ಲಿ, ಇಸ್ಲಾಮಿನ ಪ್ರಚಾರದಲ್ಲಿ, ಶಿಕ್ಷಣ ತರಬೇತಿಯ ರಂಗದಲ್ಲಿ ಅತ್ಯಂತ ಮುಂದಿದೆ. ಇಪ್ಪತ್ತನಾಲ್ಕು ಗಂಟೆಗಳ ಟಿ.ವಿ. ಚ್ಯಾನೆಲಾದ ಎಂ.ಟಿ.ಎ. ಮೂಲಕ, ರೇಡಿಯೋ ಮಾಧ್ಯಮ, ಕಿರುಹೊತ್ತಗೆ, ಕರಪತ್ರಗಳ ಮೂಲಕ ಇಸ್ಲಾಮಿನ ನೈಜವಾದ ಸಂದೇಶವನ್ನು ಪ್ರಪಂಚದಾದ್ಯಂತ ಬಿತ್ತರಿಸುತ್ತಿದೆ. ಶಿಕ್ಷಣ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ಹಾಗೂ ನೀರು ಸರಬರಾಜು, ಸೌರ ವಿದ್ಯುತ್ ಆರ್ಜನೆಯಲ್ಲಿ ಬಡವ ಬಲ್ಲಿದರಿಗೆ ಸಹಾಯಿಸುತ್ತಿದೆ. ಇದೇ ರೀತಿಯಲ್ಲಿ ಪ್ರೀತಿ ವಿಶ್ವಾಸ, ಶಾಂತಿ ಸ್ಥಾಪನೆ, ಸಹೋದರತೆ, ಕಾನೂನು ಪಾಲನೆಯಲ್ಲಿ ಮನ್ನಣೆ ಪಡೆದಿದೆ. ಇಸ್ಲಾಮಿನ ನೈಜವಾದ ಚಿತ್ರಣವನ್ನು ಲೋಕಾದ್ಯಂತ ಪ್ರಚಾರ ಪಡಿಸುವುದರಿಂದ ಮುಸ್ಲಿಮೇತರ ಜನರು ಇಸ್ಲಾಮಿನ ಮನೋಹರವಾದ ಶಿಕ್ಷಣಕ್ಕೆ ಆಕರ್ಷಿತರಾಗುತ್ತಿದ್ದಾರೆ. ಪವಿತ್ರ ಖುರ್‌ಆನ್ ಮತ್ತು ಇಸ್ಲಾಮಿನ ಕೃತಿಗಳನ್ನು

ಪ್ರಕಾಶನಗೊಳಿಸುವುದರಲ್ಲಿ ಅಹ್ಮದಿಯಾ ಜಮಾಅತಿಗೆ ಸರಿಸಾಟಿಯಾಗಿ ಯಾರೂ ಇಲ್ಲ. ಇವತ್ತು ಇನ್ನೂರಕ್ಕಿಂತಲೂ ಹೆಚ್ಚು ರಾಷ್ಟ್ರಗಳಲ್ಲಿ ಈ ಜಮಾಅತ್ ಸ್ಥಾಪಿತವಾಗಿದೆ. ಖಿಲಾಫತಿನ ಅನುಗ್ರಹದಿಂದ ಜಮಾಅತಿಗೆ ಏಕತೆ, ಒಗ್ಗಟ್ಟು, ಅನ್ಯೋನ್ಯ ಸಂಬಂಧ, ಸುದೃಢವಾದ ವಿಶ್ವಾಸ ಮತ್ತು ಸಾತ್ವಿಕವಾದ ಕರ್ಮಗಳ ಸಂಪನ್ನತೆಯಿಂದೊಡಗೂಡಿದ ದೃಢವಾದ ಅಡಿಪಾಯವಿದೆ. ವಾಗ್ದಾನ ಮಾಡಲ್ಪಟ್ಟ ಅನುಗ್ರಹದ ಬಹುಪಾಲು ಅಂಶವನ್ನು ಅದು ಪಡೆದುಕೊಂಡಿದೆ. ಖಿಲಾಫತ್ ಅಹ್ಮದಿಯಾದ ನೇತೃತ್ವದಲ್ಲಿ ಅಹ್ಮದಿಯಾ ಜಮಾಅತ್ ಅಥವಾ ಯಥಾರ್ಥವಾದ ಇಸ್ಲಾಮಿನ ಕಡೆಗಿರುವ ಆಹ್ವಾನವನ್ನು ಲೋಕಾದಾದ್ಯಂತ ಬಿತ್ತರಿಸಲಾಗುತ್ತಿದೆ. ಹಾಗೆಯೇ ಜನರು ಗುಂಪು ಗುಂಪಾಗಿ ಬಂದು ಇಸ್ಲಾಮಿನೊಳಗೆ ಪ್ರವೇಶಿಸುತ್ತಿದ್ದಾರೆ. ಅಲ್ಲಾಹನ ಸಹಾಯವು ಆಕಾಶದಿಂದ ಧಾರಾಕಾರವಾಗಿ ವರ್ಷಿಸುತ್ತಿರುವುದಾಗಿ ಕಾಣುವಂತಾಗಿದೆ. ಒಟ್ಟಿನಲ್ಲಿ, ಖಿಲಾಫತಿನ ಕಾರಣದಿಂದ ಅಹ್ಮದಿಯಾ ಜಮಾಅತ್ ಅಲ್ಲಾಹನ ಅಪರಿಮಿತವಾದ ಅನುಗ್ರಹಗಳನ್ನು ತನ್ನೆಡೆಗೆ ಸೆಳೆಯುತ್ತಿದೆ. ಅಲ್ಲಾಹನ ಪ್ರಕಾಶದ ರಶ್ಮಿಗಳಿಂದ ಅದು ಪ್ರಭಾವಪೂರಿತವಾಗಿದೆ. ಆದರೆ ಖಿಲಾಫತಿನ ವಿರೋಧಿಗಳು ಅವಮಾನಿತರೂ ಪರಾಜಿತರೂ ಪರಸ್ಪರ ಭಿನ್ನಾಭಿಪ್ರಾಯದಲ್ಲಿ ಸಿಲುಕಿದವರೂ ಆಗಿರುವರು.

ಅಹ್ಮದಿಯಾ ಖಿಲಾಫತಿನ ಅನುಗ್ರಹವನ್ನು ಭೌತಿಕವಾದ ಅನುಗ್ರಹ ಗಳೊಂದಿಗೆ ತಾರತಮ್ಯಪಡಿಸುವುದು ತಿಳಿಗೇಡಿತನವಾಗಿದೆ. ಅಲ್ಲಾಹನ ಪಾಶವು ಅಲ್ಲಾಹನೊಂದಿಗಿನ ಮತ್ತು ಸತ್ಯವಿಶ್ವಾಸಿಗಳ ಅನ್ಯೋನ್ಯವಾದ ಒಂದು ಸಂಬಂಧವಾಗಿದೆ. ಈ ಆಧ್ಯಾತ್ಮಿಕ ವ್ಯವಸ್ಥೆಯು ಸತ್ಯವಿಶ್ವಾಸಿಗಳ ಮತ್ತು ಸಾತ್ವಿಕರ ಆಶ್ರಯವಾಗಿ ಅವರ ಪ್ರಗತಿಯ ಕ್ಷೇತ್ರವನ್ನು ನಿರ್ಧರಿಸಿ ತಮ್ಮ ಜೀವನೋದ್ದೇಶವನ್ನು ಪೂರ್ತೀಕರಿಸಲು ಸ್ಪಷ್ಟವಾಗಿ ಸೂಚಿಸುವ ಪಕ್ವವಾದ ಮಾರ್ಗದರ್ಶಕವೆಂದು ಜಮಾಅತ್ ಅಹ್ಮದಿಯಾದ ಚರಿತ್ರೆಯು ಸಾಕ್ಷ್ಯವಹಿಸುತ್ತದೆ. ಸತ್ಯವಿಶ್ವಾಸಿಗಳ ಭಯದ ಅವಸ್ಥೆಗಳು ಸಮಾಧಾನದ ಸ್ಥಿತಿಗೆ ಥಟ್ಟನೆ ಪರಿವರ್ತಿತವಾಗಿ ಧರ್ಮ ಸುದೃಢಗೊಳ್ಳುವುದನ್ನು ಹಲವು ಬಾರಿ ದರ್ಶಿಸಲಾಗಿದೆ. ಏಕತ್ವದ ಪತಾಕೆಯು ಹಾರುವುದನ್ನೂ ವಿಗ್ರಹಗಳು ಪತನಗೊಳ್ಳುವುದನ್ನೂ ಕಾಣಲಾಗಿದೆ. ಪ್ರವಾದಿತ್ವದ

ದೌತ್ಯದ ನೆರವೇರಿಕೆಯು ಆಗುತ್ತಿರುವುದಾಗಿಯೂ ಕಾಣುತ್ತೇವೆ.

ಈ ಕೊಡುಗೆಯನ್ನು ಕರುಣಿಸಿದ ಅಲ್ಲಾಹನನ್ನು ನಾವು ಎಷ್ಟು ಸ್ತುತಿಸಿದರೂ ಸಾಲದು. ಈ ಸಂಬಂಧವಾಗಿ ನಮ್ಮ ಮೊತ್ತಮೊದಲನೆಯ ಜವಾಬ್ದಾರಿಯು ನಮಗೆ ನೀಡಿದಂತಹ ಈ ಕೊಡುಗೆಯ ಮಹತ್ವವನ್ನು ಗ್ರಹಿಸಬೇಕು, ಅದನ್ನು ಹೃತ್ಪೂರ್ವಕವಾಗಿ ಗೌರವಿಸಬೇಕು ಹಾಗೂ ಖಿಲಾಫತಿನ ಅನುಸರಣೆಯನ್ನು ಕಡ್ಡಾಯಗೊಳಿಸಬೇಕಾಗಿದೆ.

ಖಿಲಾಫತಿನ ಅನುಗ್ರಹವು ಜಾರಿಯಲ್ಲಿದೆ. ಆದರೆ ಅದರಿಂದ ಪ್ರಯೋಜನ ವನ್ನು ಪಡೆಯಲು ದೈವಿಕವಾದ ಈ ವ್ಯವಸ್ಥೆಯ ಬಗ್ಗೆ ಅರಿವುಳ್ಳವರಾಗಬೇಕು. ಅದರ ಸ್ಥಾನವನ್ನೂ ದರ್ಜೆಯನ್ನೂ ಅರಿಯುವಂತಾಗಬೇಕು. ಇತರ ಯಾವುದೇ ಲೌಕಿಕ ಸಂಬಂಧಗಳಲ್ಲಿ ಕಾಣಲಾಗದಂತಹ ನಿಷ್ಠೆಯ, ಪ್ರಾಮಾಣಿಕತೆಯ, ಪ್ರೀತಿಯ ಸಂಬಂಧ ಖಿಲಾಫತ್ ಅಹ್ಮದಿಯಾದೊಂದಿಗೆ ಹೊಂದಿರಬೇಕು.

ಈ ಶರತ್ತುಗಳನ್ನು ಪಾಲಿಸುತ್ತಾ ಖಿಲಾಫತಿನೊಂದಿಗೆ ಸಂಬಂಧ ವೇರ್ಪಡಿಸಿದರೆ ನಾವು ಮಾತ್ರವಲ್ಲ, ನಮ್ಮ ಸಂತಾನ ಪರಂಪರೆಯೂ ಇದರ ಪ್ರಯೋಜನವನ್ನು ಪಡೆಯುವವರಾಗುವರು.

## ಖಿಲಾಫತ್ತಿನ ಮಹೋನ್ನತ ಸ್ಥಾನಮಾನಗಳು

ಅಹ್ಮದಿಯಾ ಖಿಲಾಫತ್ ಅತ್ಯಂತ ಅಪರಿಮಿತವಾದ ಪ್ರಾಮುಖ್ಯತೆಯನ್ನು ಪಡೆದಿರುವ ವ್ಯವಸ್ಥೆಯಾಗಿದೆ. ಪ್ರವಾದಿಯ ಮರಣದ ನಂತರ ಅವರ ದೌತ್ಯದ ಪೂರ್ತೀಕರಣಕ್ಕೆ ಅವರ ಪ್ರಾತಿನಿಧ್ಯ ವಹಿಸುವ ಆಧ್ಯಾತ್ಮಿಕ ನೇತೃತ್ವವಾಗಿದೆ ಖಿಲಾಫತ್ ಎಂಬುದರಿಂದ ಅದರ ಪ್ರಾಧಾನ್ಯವನ್ನು ಉತ್ತಮ ರೀತಿಯಲ್ಲಿ ಅಂದಾಜು ಮಾಡಬಹುದಾಗಿದೆ. ಅವರೊಂದಿಗೆ ಸದಾ ಅಲ್ಲಾಹನ ಸಹಾಯದ ವಾಗ್ದಾನವಿದೆ. ದೈವಿಕ ಸಹಾಯವು ಪ್ರತಿ ಹೆಜ್ಜೆಯಲ್ಲೂ ಲಭಿಸುತ್ತದೆ. ಅವರಿಗೆ ಈ ಸಹಾಯಗಳೆಲ್ಲ ಯಾವ ಶಕ್ತಿಯಿಂದ ಲಭಿಸುವುದೆಂದು ಯೋಚಿಸಿ ಪ್ರಪಂಚವೇ ಬೆರಗುಗೊಳ್ಳುತ್ತದೆ. ಖಿಲಾಫತಿನ ಸ್ಥಾನದಲ್ಲಿ ಆರೋಹಿಸಲ್ಪಟ್ಟಂತಹ ವ್ಯಕ್ತಿಗಳು ಪ್ರವಾದಿತ್ವದ ಪ್ರಕಾಶದ ಪ್ರತಿಬಿಂಬವಾಗಿರುತ್ತಾರೆ. ಅವರು ಪ್ರವಾದಿಯ

ಪರಿಪೂರ್ಣತೆ ಮತ್ತು ಗುಣವಿಶೇಷಗಳನ್ನು ಹೊಂದಿರುತ್ತಾರೆ. ಅವರು ಪ್ರವಾದಿಯ ಅನುಗ್ರಹದಿಂದ ಅಂಶ ಪಡೆದಿರುತ್ತಾರೆ. ಜಮಾಅತಿನ ಸಾತ್ವಿಕರಾದ ಜನರು ಖಲೀಫರನ್ನು ಚುನಾಯಿಸುವರಾದರೂ ಅಲ್ಲಾಹನು ಖಲೀಫರನ್ನು ಸ್ವಯಂ ಆಯ್ಕೆ ಮಾಡುತ್ತಾನೆ. ಅಲ್ಲಾಹನಿಂದ ದಯಪಾಲಿಸಲ್ಪಟ್ಟ ಈ ಪದವಿಯಿಂದ ಒಬ್ಬ ಖಲೀಫರನ್ನು ಸ್ಥಾನಭ್ರಷ್ಟಗೊಳಿಸಲು ಎಂದಿಗೂ ಸಾಧ್ಯವಿಲ್ಲ. ಅವರು ಪ್ರವಾದಿಯ ಪ್ರತಿನಿಧಿಯಾಗಿದ್ದಾರೆ. ಅಲ್ಲಾಹನು ಸ್ವಯಂ ಅವರಿಗೆ ಕಲಿಸುತ್ತಾನೆ. ಅವರನ್ನು ಜ್ಞಾನದಿಂದ ಅನುಗ್ರಹಿಸುತ್ತಾನೆ. ಸತ್ಯವಿಶ್ವಾಸಿಗಳ ಹೃದಯಗಳಲ್ಲಿ ಅವರ ಮೇಲಿನ ಮಮತೆಯನ್ನುಂಟುಮಾಡುವ ಹಾಗೆಯೇ ಅವರಿಗೆ ಸತ್ಯವಿಶ್ವಾಸಿಗಳ ಮೇಲೆಯೂ ಸಹಾನುಭೂತಿಯನ್ನು ಉಂಟುಮಾಡುತ್ತಾನೆ. ಅದರಿಂದಾಗಿ ಜನರ ಕಷ್ಟಕಾರ್ಪಣ್ಯಗಳಲ್ಲಿ ಅವರು ಮರುಗಿ ಅವರಿಗಾಗಿ ದುಆಗಳನ್ನು ಮಾಡುತ್ತಾರೆ. ದೃಷ್ಟಾಂತ ಎಂಬ ರೀತಿಯಲ್ಲಿ ಅವರ ಪ್ರಾರ್ಥನೆಗಳು ಸ್ವೀಕಾರವಾಗುತ್ತವೆ. ಅವರಿಗೆ ಅಸಾಧಾರಣವಾದ ಒಂದು ಪ್ರತಾಪವನ್ನು ನೀಡಲಾಗುತ್ತದೆ. ಅವರು ಲೋಕ ಜನತೆಯ ಆಧ್ಯಾತ್ಮಿಕ ಮಾರ್ಗದರ್ಶಕರಾಗಿರುತ್ತಾರೆ. ಅವರನ್ನು ಅನುಸರಿಸಿ ವಿಧೇಯರಾಗಿರಬೇಕಾದುದು ಸತ್ಯವಿಶ್ವಾಸಿಗಳ ಕರ್ತವ್ಯವಾಗಿದೆ. ಅವರಿಂದ ಮುಖ ತಿರುಗಿಸಿ ಮರಣ ಹೊಂದುವುದು ತಿಳಿಗೇಡಿತನದ ಮರಣವಾಗಿದೆ. ಅವರೊಂದಿಗೆ ಸಂಬಂಧವಿಟ್ಟುಕೊಳ್ಳುವುದು ಅಲ್ಲಾಹನು ಹಾಗೂ ಅವನ ಪೈಗಂಬರರೊಂದಿಗೆ(ಸ) ಸಂಬಂಧವಿರಿಸುವುದಕ್ಕೆ ಸಮಾನವಾಗಿದೆ. ಖಲೀಫರು ತನ್ನ ಕಾಲದಲ್ಲಿ ಅಲ್ಲಾಹನ ಪ್ರತಿನಿಧಿಯಾಗಿರುತ್ತಾರೆ ಹಾಗೂ ಅಲ್ಲಾಹನಿಗೆ ಅವರು ಅತ್ಯಂತ ಪ್ರಿಯ ವ್ಯಕ್ತಿಯಾಗಿರುತ್ತಾರೆ.

ಹಝ್ರತ್ ಮಸೀಹ್ ಮೌಊದ್(ಅ) ಖಿಲಾಫತಿನ ಸ್ಥಾನಮಾನದ ಯಥಾರ್ಥತೆಯ ಕುರಿತು ಅರುಹುತ್ತಾರೆ:

"ಖಲೀಫರು ವಾಸ್ತವದಲ್ಲಿ ಸಂದೇಶವಾಹಕರ ಪ್ರತಿಬಿಂಬವಾಗಿರುತ್ತಾರೆ. ಮನುಷ್ಯನಿಗೆ ನಿತ್ಯಜೀವನವಿಲ್ಲವಾದರೂ ಮಾನವಕುಲದಲ್ಲಿ ಅತ್ಯಂತ ಉತ್ಕೃಷ್ಟವಾದ ವ್ಯಕ್ತಿತ್ವವಾಗಿರುವ ಪ್ರವಾದಿಗಳ ಅಸ್ತಿತ್ವವನ್ನು ಪ್ರತಿಬಿಂಬದ ರೂಪದಲ್ಲಿ ಲೋಕಾಂತ್ಯದವರೆಗೆ ಬಾಕಿಯಿರಿಸಲು ಅಲ್ಲಾಹನು ನಿರ್ಧರಿಸಿರುವನು.

ಈ ಉದ್ದೇಶದಿಂದ ಯಾವ ಕಾಲದಲ್ಲೂ ಲೋಕವು ಅಲ್ಲಾಹನ ಪ್ರವಾದಿತ್ವದ ಅನುಗ್ರಹದಿಂದ ವಂಚಿತರಾಗದಿರಲಿಕ್ಕಾಗಿ ಅವನು ಖಿಲಾಫತನ್ನು ಜಾರಿಗೊಳಿಸಲು ತೀರ್ಮಾನಿಸಿದನು."

(ಶಹಾದತುಲ್ ಖುರ್‌ಆನ್ ಪುಟ 57, ರೂಹಾನೀ ಖಝಾಇನ್ ಸಂ. 6 ಪುಟ. 353)

ಹಝ್ರತ್ ಮುಸ್ಲಿಹ್ ಮೌಊದ್[ರ] ಅರುಹುತ್ತಾರೆ:

"ಚೆನ್ನಾಗಿ ನೆನಪಿಟ್ಟುಕೊಳ್ಳಿರಿ! ಖಲೀಫರನ್ನು ಅಲ್ಲಾಹನು ಮಾಡುತ್ತಾನೆ, ಖಲೀಫರು ಮನುಷ್ಯ ನಿರ್ಮಿತವಾಗಿದೆಯೆಂದು ಹೇಳುವವನು ಸುಳ್ಳುಗಾರ ನಾಗಿದ್ದಾನೆ. ಖಿಲಾಫತಿನ ಬಗ್ಗೆ ಎಲ್ಲಿಯೂ ಮನುಷ್ಯರ ಕಡೆಗೆ ಸೂಚಿಸಿ ಹೇಳಲಿಲ್ಲವೆಂದು ಪವಿತ್ರ ಖುರ್‌ಆನನ್ನು ಗಹನವಾಗಿ ಪರಿಶೀಲಿಸುವುದಾದರೆ ತಿಳಿಯುವುದು. ಪ್ರತಿಯೊಂದು ರೀತಿಯ ಖಲೀಫರ ಸಂಬಂಧಿಸಿ ಅಲ್ಲಾಹನು ಹೇಳಿರುವುದು ಅವರನ್ನು ನಾವು ಮಾಡುತ್ತೇವೆ ಎಂದಾಗಿದೆ."

(ಕೌನ್ ಹೇ ಖುದಾಕೆ ಕಾಮ್ ಕೋ ರೋಕ್ ಸಕೆ; ಅನ್ವಾರುಲ್ ಉಲೂಂ ಸಂ. 2, ಪುಟ 11)

"ಪ್ರವಾದಿತ್ವದ ನಂತರ ಅತ್ಯಂತ ದೊಡ್ಡ ಹುದ್ದೆ ಇದಾಗಿದೆ (ಖಿಲಾಫತಿನ ಹುದ್ದೆ). ಸರಕಾರದಿಂದ ನನಗೆ ಯಾವುದಾದರೊಂದು ಪದವಿ ಲಭಿಸುವಂತೆ ಶ್ರಮಿಸುತ್ತೇನೆ ಎಂದು ಒಬ್ಬ ವ್ಯಕ್ತಿ ನನ್ನೊಡನೆ ಹೇಳಿದರು. ಈ ಪದವಿಗಳೆಲ್ಲ ಮಾಮೂಲಿ ಸಂಗತಿಗಳಾಗಿವೆ. ನಾನು ಪ್ರಪಂಚದ ರಾಜಾಧಿರಾಜನ ಹುದ್ದೆಯನ್ನು ಕೂಡ ಖಿಲಾಫತ್ತಿನ ಎದುರಿಗೆ ಅತ್ಯಂತ ಕ್ಷುಲ್ಲಕವೆಂದು ಭಾವಿಸುತ್ತೇನೆ. ಆದ್ದರಿಂದ ನಾನು ನಿಮಗೆ ಉಪದೇಶಿಸುತ್ತೇನೆ, ತಮ್ಮ ವಿಚಾರಗಳಲ್ಲಿ ದೇವಭಕ್ತಿ ಮತ್ತು ಮರ್ಯಾದೆಯ ರೀತಿಯನ್ನು ಕೈಗೊಳ್ಳಿರಿ. ತಮ್ಮ ಮನಸ್ಸಿನೊಳಗೆ ಆಕ್ಷೇಪಗಳು ಉದ್ಭವಿಸುವ ನಮ್ಮ ಸ್ನೇಹಿತರು ನಷ್ಟ ಹೊಂದಿದವರಾಗಬೇಕೆಂದು ನಾನು ಎಂದಿಗೂ ಬಯಸುವುದಿಲ್ಲ. ಯಾಕೆಂದರೆ ಖಿಲಾಫತಿನ ಹುದ್ದೆಯ ಮುಂದೆ ವಯಸ್ಸಾದವರು ಕೂಡ ನನಗೆ ಮಕ್ಕಳಂತೆ ಆಗಿರುತ್ತಾರೆ. ಆದ್ದರಿಂದ ತನ್ನ ಮಕ್ಕಳು ನಷ್ಟವಾಗಬಾರದೆಂದು ಪ್ರತಿಯೊಬ್ಬ ಪಿತನೂ ಆಶಿಸುತ್ತಾನೆ."

(ಅನ್ವಾರುಲ್ ಉಲೂಂ ಸಂ. 9, ಪುಟ 425–426)

"ನಿಸ್ಸಂಶಯವಾಗಿಯೂ ಜನರು ಖ಼ಲೀಫರನ್ನು ಚುನಾಯಿಸುತ್ತಾರೆ. ಆದರೆ ಅದರ ಚುನಾವಣೆಯನ್ನು ಅಲ್ಲಾಹನು ತನ್ನಿಂದ ಏರ್ಪಡಿಸಲಾದ ಚುನಾವಣೆಯೆಂದು ಸಾರುತ್ತಾನೆ. ಈ ರೀತಿಯ ಚುನಾವಣೆಯಿಂದ ಪ್ರವಾದಿಗಳು ಖ಼ಲೀಫರಿಂದ ಪ್ರತ್ಯೇಕಿಸಲ್ಪಡುತ್ತಾರೆ. ಒಂದು ವೇಳೆ ಅಲ್ಲಾಹನು ನೇರವಾಗಿ ಯಾರನ್ನಾದರೂ ಖಲೀಫರೆಂದು ಆರಿಸಿ ನಾನು ನಿನ್ನನ್ನು ಖ಼ಲೀಫನನ್ನಾಗಿ ಮಾಡುತ್ತೇನೆಂದು ಹೇಳಿದರೆ, ಈ ಖ಼ಲೀಫ ಮತ್ತು ನಬಿಯ ನಡುವೆ ಯಾವುದೇ ವ್ಯತ್ಯಾಸವಿರುವುದಿಲ್ಲ. ಆದ್ದರಿಂದ ನಬಿಗಳ ಆಯ್ಕೆಯನ್ನು ಅಲ್ಲಾಹನು ಸ್ವಯಂ ತನ್ನ ಹೊಣೆಯನ್ನಾಗಿಸಿರುವನು ಮತ್ತು ಖ಼ಲೀಫರನ್ನು ಮನುಷ್ಯರ ಮುಖಾಂತರವಾಗಿರಿಸಿರುವನು. ಆದರೆ ಮನುಷ್ಯರ ಮುಖಾಂತರ ತನ್ನ ಇಂಗಿತಕ್ಕನುಸಾರ ಚುನಾಯಿಸುತ್ತಾನೆ ಹಾಗು ಅವರಿಗೆ ತನ್ನ ಸಹಾಯ ಸಹಕಾರದ ವಾಗ್ದಾನಗಳನ್ನು ಕೊಡುತ್ತಾನೆ."

**(ಖಿಲಾಫತ್ ಅಲಾ ಮಿನ್‌ಹಾಜ್‌ನುಬುವ್ವಹ್ ಸಂ. 3, ಪುಟ. 593)**

"ಖಿಲಾಫತ್ ಅಲ್ಲಾಹನ ಒಂದು ಕೊಡುಗೆಯಾಗಿದೆ. ಯಾರಿಂದಲೂ ಅದನ್ನು ತಡೆಯಲು ಸಾಧ್ಯವಿಲ್ಲ. ಅದು ಅಲ್ಲಾಹನ ಪ್ರಕಾಶವನ್ನು ನೆಲೆನಿಲ್ಲಿಸುವ ಒಂದು ಮಾಧ್ಯಮವಾಗಿದೆ. ಅದನ್ನು ಅಳಿಸಲು ಬಯಸುವವರು ಅಲ್ಲಾಹನ ಪ್ರಕಾಶವನ್ನು ಅಳಿಸಲು ಯತ್ನಿಸುತ್ತಾರೆ. ಇದು ನಿಶ್ಚಯವಾಗಿಯೂ ಈಡೇರಿಸಲ್ಪಡುವ ಒಂದು ವಾಗ್ದಾನವಾಗಿದೆ. ಆದರೆ ಅದರ ಕಾಲಾವಧಿ ಸತ್ಯವಿಶ್ವಾಸಿಗಳ ನಿಷ್ಠೆಯೊಂದಿಗೆ ಅವಲಂಬಿತವಾಗಿರುತ್ತದೆ."

**(ಖಿಲಾಫತ್ ಅಲಾ ಮಿನ್‌ಹಾಜ್ ನುಬುವ್ವಹ್ ಸಂ. 3 ಪುಟ. 420–421)**

"ಖ಼ಲೀಫರು ಅಲ್ಲಾಹನ ನಿಯೋಗಿತರ ಪ್ರತಿನಿಧಿಗಳಾಗಿರುವುದರಿಂದ ಅವರನ್ನು ನಿರಾಕರಿಸುವುದು ಹಾಗೂ ಅವರನ್ನು ಅಪಹಾಸ್ಯಮಾಡುವುದು ಒಂದು ಮಾಮೂಲಿ ಸಂಗತಿಯಲ್ಲ. ಅದು ಸತ್ಯವಿಶ್ವಾಸಿಗಳನ್ನು ಕೂಡ (ಫಾಸಿಖ್) ಧಿಕ್ಕಾರಿಗಳನ್ನಾಗಿಸುತ್ತದೆ. ಆದ್ದರಿಂದ ನಿಮ್ಮ ನಾಲಿಗೆಗಳನ್ನೂ ಲಿಖಿತಗಳನ್ನೂ ಹತೋಟಿಯಲ್ಲಿಡದಿರುವುದು ಒಳ್ಳೆಯ ಪರಿಣಾಮವನ್ನು

ಉಂಟುಮಾಡಬಹುದೆಂದು ನೀವು ಭಾವಿಸದಿರಿ. 'ನಾನು ಅಂತವರನ್ನು ನನ್ನ ಜಮಾಅತಿನಿಂದ ಬೇರ್ಪಡಿಸುವನೆಂದು' ಅಲ್ಲಾಹನು ಹೇಳುತ್ತಾನೆ. 'ಫಾಸಿಖ್'ನ ಅರ್ಥ ಅಲ್ಲಾಹನೊಂದಿಗೆ ಯಾವುದೇ ಸಂಬಂಧವಿಲ್ಲದಿರುವುದಾಗಿದೆ. ಆದ್ದರಿಂದ ಇದನ್ನು ಚೆನ್ನಾಗಿ ನೆನಪಿಟ್ಟುಕೊಳ್ಳಿರಿ! ಅಲ್ಲಾಹನ ಕಡೆಯಿಂದ ಒಂದು ವ್ಯವಸ್ಥೆ ಇದ್ದೂ ಅದನ್ನು ಯಾರು ಪರಿಗಣಿಸದವರು, ಆ ವ್ಯವಸ್ಥೆಗೆದುರಾಗಿ ಮನಬಂದಂತೆ ಆಕ್ಷೇಪಣೆ ಮಾಡುವವರು ಹಾಗೂ ಅದರ ಕುರಿತು ಹೇಳುವಾಗ ತಮ್ಮ ಮಾತುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸದವರು ಸತ್ಯವಿಶ್ವಾಸಿಗಳಾಗಿದ್ದರೂ ಕಾಫಿರ್‌ಗಳಾಗಿ ಮರಣ ಹೊಂದುವರು ಎಂದು ಅವರು ನೆನಪಿಡಲಿ."

**(ಖಿಲಾಫತ್ ಅಲಾ ಮಿನ್‌ಹಾಜುನ್ನುಬುವ್ವಹ್ ಸಂ. 3 ಪುಟ. 8–9)**

ಹಝ್ರ‍ತ್ ಖ಼ಲೀಫತುಲ್ ಮಸೀಹ್ ಸಾಲಿಸ್[ರಹ್] ಹೇಳುತ್ತಾರೆ:

"ಆಯಾಕಾಲದ ಖಲೀಫರು ಇಡೀ ಪ್ರಪಂಚದ ಗುರು ಆಗಿರುತ್ತಾರೆ. ಒಂದು ವೇಳೆ ಇದು ಸತ್ಯವಾಗಿದ್ದರೆ, ಖಂಡಿತವಾಗಿಯೂ ಇದು ಸತ್ಯವಾಗಿದೆ, ಭೌತಿಕ ಪ್ರಪಂಚದ ಪಂಡಿತರು ಹಾಗೂ ಭೌತಿಕ ಲೋಕದ ತತ್ವಜ್ಞಾನಿಗಳು ಶಿಷ್ಯರಂತೆ ಅವರ ಮುಂದೆ ಬರುವರು. ಪಂಡಿತರೆಂಬ ನೆಲೆಯಲ್ಲಿ ಬರಲಿಕ್ಕಿಲ್ಲ." **(ಅಲ್‌ಫಝ್ಲ್ ಡಿಸೆಂಬರ್ 21, 1966)**.

ಹಝ್ರ‍ತ್ ಖ಼ಲೀಫತುಲ್ ಮಸೀಹ್ ಖಾಮಿಸ್[ಅಯ್ಯದಹುಲ್ಲಾಹು] ಹಝ್ರ‍ತ್ ಮುಸ್ಲಿಹ್ ಮೌಊದರ[ರ] ಉದ್ಧರಣೆಯನ್ನು ಉಲ್ಲೇಖಿಸಿಕೊಂಡು ಹೇಳುತ್ತಾರೆ: "....ಕಾಲದ ಖ಼ಲೀಫರಿಂದ ವೈಯಕ್ತಿಕ ಕಾರ್ಯಗಳಲ್ಲಿ ತಪ್ಪುಗಳುಂಟಾಗಬಹುದು. ಆದರೆ ಜಮಾಅತಿನ ಆಧ್ಯಾತ್ಮಿಕ ಹಾಗೂ ಭೌತಿಕವಾದ ಪ್ರಗತಿಯ ಕಾರ್ಯಗಳಿಗೆ ಸಂಬಂಧಪಟ್ಟು ಯಾವುದೇ ತಪ್ಪುಗಳು ಸಂಭವಿಸಿದರೂ ಅಲ್ಲಾಹನು ತನ್ನ ಜಮಾಅತನ್ನು ಕಾಪಾಡುತ್ತಾನೆ ಮತ್ತು ಯಾವುದಾದರೊಂದು ರೀತಿಯಲ್ಲಿ ಆ ತಪ್ಪುಗಳ ಬಗ್ಗೆ ಅವರಿಗೆ ಮಾಹಿತಿಯನ್ನು ನೀಡುತ್ತಾನೆ. ಸೂಫಿಗಳ ಪಾರಿಭಾಷಿಕದಲ್ಲಿ ಅದನ್ನು **ಇಸ್ಮತೆ ಸುಗ್‌ರಾ** (ಲಘುವಾದ ಸಂರಕ್ಷಣೆ) ಎಂದು ಹೇಳಲಾಗುತ್ತದೆ. ಅಂದರೆ, ಪ್ರವಾದಿಗಳಿಗೆ **ಇಸ್ಮತೆ ಕುಬ್‌ರಾ** (ಶ್ರೇಷ್ಠ ಸಂರಕ್ಷಣೆ)

ದೊರೆತಿದ್ದ ಹಾಗೆಯೇ ಖಲೀಫರಿಗೆ ಇಸ್ಮತೆ ಸುಗ್‌ರಾ ದೊರೆತಿರುತ್ತದೆ. ಅವರಿಂದ ಜಮಾಅತಿನ ವಿನಾಶಕ್ಕೆ ಹೇತುವಾಗುವಂತಹ ದೊಡ್ಡ ತಪ್ಪುಗಳು ಸಂಭವಿಸದಂತೆ ಅಲ್ಲಾಹನು ನೋಡಿಕೊಳ್ಳುತ್ತಾನೆ. ಅವರ ತೀರ್ಮಾನಗಳಲ್ಲಿ ಸಣ್ಣಪುಟ್ಟ ತಪ್ಪುಗಳು ಸಂಭವಿಸಬಹುದು. ಆದರೆ ಅದರ ಕೊನೆಯ ಫಲಿತಾಂಶವು ಇಸ್ಲಾಮಿಗೆ ವಿಜಯವೂ ಶತ್ರುಗಳಿಗೆ ಅಪಜಯವೂ ಆಗಿರುತ್ತದೆ. ಅವರಿಗೆ ಇಸ್ಮತೆ ಸುಗ್‌ರಾ ಲಭಿಸಿರುವ ಕಾರಣ ಅಲ್ಲಾಹನ ಮತ್ತು ಅವರ (ಖಲೀಫರ) ಕಾರ್ಯನೀತಿಯು ಒಂದೇ ಆಗಿರುತ್ತದೆ. ನಿಸ್ಸಂದೇಹವಾಗಿಯೂ ನಾಲಗೆಯೂ ಮಾತುಗಳೂ ಅವರದ್ದಾಗಿರಬಹುದು, ಹಸ್ತವು ಅವರದ್ದೇ ಚಲಿಸುತ್ತಿರಬಹುದು, ಬುದ್ಧಿಮತ್ತೆಯು ಅವರದ್ದೇ ಪ್ರವರ್ತಿಸುತ್ತಿರಬಹುದು. ಆದರೆ ಅವುಗಳೆಲ್ಲವುಗಳ ಹಿಂದೆ ಅಲ್ಲಾಹನ ಹಸ್ತ ಪ್ರವರ್ತಿಸುತ್ತಿರುತ್ತದೆ. ಅವರಿಂದ ಸಾಮಾನ್ಯವಾದ ಸಣ್ಣಪುಟ್ಟ ತಪ್ಪುಗಳು ಸಂಭವಿಸಬಹುದು. ಕೆಲವೊಮ್ಮೆ ಅವರ ಆಪ್ತ ಸಲಹೆಗಾರರು ಕೂಡ ಅವರಿಗೆ ತಪ್ಪಾದ ಸಲಹೆಗಳನ್ನು ಕೊಡಬಹುದು. ಆದರೆ ಎಡೆಯಲ್ಲಿರುವ ಈ ಎಲ್ಲ ಅಡೆತಡೆಗಳು ನಿವಾರಣೆಯಾಗಿ ಯಶಸ್ಸು ಅವರಿಗೇ ಲಭಿಸುವುದು. ಎಲ್ಲ ಕೊಂಡಿಗಳು ಸೇರಿ ಅದು ನೇರವಾದ ಮತ್ತು ಪ್ರಬಲವಾದ ಒಂದು ಸರಪಳಿಯಾಗುವುದು. ಮತ್ತೆ ಅದನ್ನು ಯಾವುದೇ ಶಕ್ತಿಗೂ ಮುರಿಯಲಿಕ್ಕೆ ಸಾಧ್ಯವಾಗಲಿಕ್ಕಿಲ್ಲ."

**(ಖುತ್ಬಾತ್ ಮಸ್‌ರೂರ್ ಸಂ. 1, ಪುಟ 341–343;**
**ಉದ್ಧರಣಿ ತಫ್‌ಸೀರ್ ಕಬೀರ್ ಪುಟ 376–377)**

ಖಿಲಾಫತ್ ವ್ಯವಸ್ಥೆಯೊಂದಿಗೆ ಹೃತ್ಪೂರ್ವಕ ಸ್ನೇಹಸಂಬಂಧ ಹಾಗೂ ಕಾಲದ ಖಲೀಫರನ್ನು ಬೇಷರತ್ತಾಗಿ ಅನುಸರಿಸುವುದಾಗಿದೆ ಖಿಲಾಫತಿನ ಈ ವ್ಯವಸ್ಥೆಯ ಅತ್ಯಂತ ಶ್ರೇಷ್ಠವೂ ಉನ್ನತವೂ ಆದ ಸ್ಥಾನಮಾನದ ಸಂಬಂಧದಲ್ಲಿ ಸತ್ಯವಿಶ್ವಾಸಿಗಳಿಗೆ ಅತ್ಯಂತ ಮುಖ್ಯವೂ ಮೂಲಭೂತವೂ ಆದ ಜವಾಬ್ದಾರಿ. ಖಲೀಫರನ್ನು ಅಲ್ಲಾಹನು ನೇಮಿಸುತ್ತಾನೆಂಬುದು ಖಚಿತವೂ ಖಂಡಿತವೂ ಆಗಿರುವಾಗ ಮತ್ತು ಯಾರನ್ನು ಅಲ್ಲಾಹನು ಖಲೀಫರನ್ನಾಗಿಸುತ್ತಾನೋ ಅವರು ಅಲ್ಲಾಹನ ಪ್ರತಿನಿಧಿಯೂ ಅಲ್ಲಾಹನಿಗೆ ಅತ್ಯಂತ ಪ್ರಿಯರೂ ಆಗಿರುವಾಗ,

ಅವರನ್ನು ಪ್ರಾಣಕ್ಕೆ ತುಲ್ಯವಾಗಿ ಪ್ರೀತಿಸುವುದು ಮತ್ತು ಅವರಿಗಾಗಿ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸುವುದು ಕಡ್ಡಾಯವಾಗುತ್ತದೆ. ಈ ವಿಷಯವು "ಸೂರತ್ತುನ್ನೂರ್"ನಲ್ಲಿ ಖಿಲಾಫತ್ ಕುರಿತಿರುವ ವಚನದಿಂದ ಸುವ್ಯಕ್ತವಾಗುತ್ತದೆ. ಅದರಲ್ಲಿ ಖಿಲಾಫತಿನ ವಿಷಯಕ್ಕೆ ಮುಂಚಿತವಾಗಿ ಪೈಗಂಬರ್‌ರನ್ನು[ಸ] ಅನುಸರಿಸಬೇಕೆಂಬುದರ ಬಗ್ಗೆ ಅಲ್ಲಾಹನು ಆದೇಶ ನೀಡಿ, ಖಿಲಾಫತ್ತಿನ ಬಗ್ಗೆ ವಿವರಿಸಿದ ತಕ್ಷಣ ಪುನಃ ಪೈಗಂಬರ್‌ರನ್ನು[ಸ] ಅನುಸರಿಸುವುದರ ಕುರಿತು ಪ್ರಸ್ತಾಪಿಸಲಾಗಿದೆ. ಇದು ಆಕಸ್ಮಿಕವಾದ ಸಂಗತಿಯಲ್ಲ. ಇದರಲ್ಲಿ ಅತ್ಯಂತ ಮುಖ್ಯವಾದ ಒಂದು ವಿಷಯವು ಅಡಗಿದೆ. ಅದೇನೆಂದರೆ ಖಲೀಫರನ್ನು ಅನುಸರಿಸುವುದು ರಸೂಲರನ್ನು ಅನುಸರಿಸುವುದಕ್ಕೆ ತುಲ್ಯವಾಗಿದೆಯೆಂದಾಗಿದೆ. ಅಂದರೆ, ಯಾವ ವಿಧದಲ್ಲಿ ರಸೂಲರನ್ನು ಅನುಸರಿಸಬೇಕಾದ ಕರ್ತವ್ಯವಿದೆಯೋ ಅದೇ ವಿಧೇಯತೆಯಿಂದಲೂ ಪ್ರಾಮಾಣಿಕತೆಯಿಂದಲೂ ಖಲೀಫರನ್ನು ಅನುಸರಿಸಬೇಕೆಂಬುದಾಗಿದೆ. ಆಯಾಕಾಲದ ಖಲೀಫರೊಂದಿಗೆ ಹೃತ್ಪೂರ್ವಕ ಸಂಬಂಧವಿರಿಸಬೇಕೆಂಬುದರ ಪ್ರಾಧಾನ್ಯತೆಯ ಬಗ್ಗೆ ಹಝ್ರತ್ ಪೈಗಂಬರ್[ಸ] ತಾಕೀತುಪಡಿಸಿಕೊಂಡು ಅರುಹಿದ ಈ ಹದೀಸ್ ಸದಾ ಗಮನದಲ್ಲಿರಿಸಬೇಕಾಗಿದೆ:

**"ಫಇನ್ ರಐತ ಯೌಮಇಝಿನ್ ಖಲೀಫತಲ್ಲಾಹಿ ಫಿಲ್‌ಅರ್‌ಝಿ ಫಅಲ್‌ಝಿಮ್‌ಹು ವಇನ್ ನುಹಿಕ ಜಿಸ್ಮುಕ ವ ಉಖಿಝ ಮಾಲುಕ."**

"ಅಲ್ಲಾಹನ ಖಲೀಫ ಭೂಮಿಯಲ್ಲಿ ಉಪಸ್ಥಿತರಿರುವುದನ್ನು ನೀವು ಕಾಣುವ ದಿನದಿಂದಲೇ ಅವರೊಂದಿಗೆ ಸಂಬಂಧವಿರಿಸಿಕೊಳ್ಳಿರಿ. ನಿಮ್ಮ ದೇಹವನ್ನು ತುಂಡು ತುಂಡು ಮಾಡಲ್ಪಟ್ಟರೂ, ನಿಮ್ಮ ಸಂಪತ್ತನ್ನು ಲೂಟಿ ಹೊಡೆದರೂ"

**(ಮುಸ್ನದ್ ಅಹ್ಮದ್ ಹಂಬಲ್ ಹದೀಸ್ 22333)**

ನಿಜವಾಗಿಯೂ ಲೋಕದಲ್ಲಿ ಅತ್ಯಂತ ಅಮೂಲ್ಯವಾದ ಖಜಾನೆ ಖಿಲಾಫತ್ ಆಗಿದೆ ಎಂದು ಈ ಹದೀಸಿನಿಂದ ಸ್ಪಷ್ಟವಾಗುತ್ತದೆ. ಜೀವ ಮತ್ತು ಸಂಪತ್ತಿಗಿಂತಲೂ ಅಮೂಲ್ಯವಾದ ಸ್ವತ್ತಾಗಿದೆ ಇದು. ಆದ್ದರಿಂದ ಈ ಸಂಪತ್ತು ಯಾವುದಾದರೂ ಜಮಾಅತಿಗೆ ಅಲ್ಲಾಹನ ಕಡೆಯಿಂದ ದಯಪಾಲಿಸಲ್ಪಟ್ಟಿದ್ದರೆ ಅದರೊಂದಿಗೆ ಅಂಟಿಕೊಳ್ಳಬೇಕಾದದ್ದು ಜೀವ ಕಾಪಾಡಿಕೊಳ್ಳಲಿಕ್ಕಿರುವ ಭರವಸೆಯಾಗಿದೆ.

## ಖಿಲಾಫತ್ತಿನ ಅನುಗ್ರಹಗಳು

* ದೀನಿನ ದೃಢತೆ

* ಶಾಂತಿಯ ಸ್ಥಾಪನೆ

* ದೇವಾರಾಧನೆಯನ್ನು ಸರಿಯಾದ ರೀತಿಯಲ್ಲಿ ನೆಲೆನಿಲ್ಲಿಸುವುದು

* ಪರಿಶುದ್ಧ ತೌಹೀದಿನ ಸ್ಥಾಪನೆ

* ಮಾನವ ಕುಲದ ಸೇವೆ

* ಇಸ್ಲಾಮ್ ಧರ್ಮದ ಪ್ರಚಾರ

* ಅಭಿವೃದ್ಧಿ

* ಏಕತೆ ಮತ್ತು ಒಗ್ಗಟ್ಟು

* ದೈವಿಕ ಸಹಾಯ

* ಜಮಾಅತಿನ ಸತ್ಯವಿಶ್ವಾಸಿಗಳಿಗೆ ಹೃತ್ಪೂರ್ವಕವಾಗಿ ಹಾಗೂ ಮನಸಾರೆ ಪ್ರಾರ್ಥಿಸುವ ಒಂದು ವ್ಯಕ್ತಿತ್ವದ ಸಾನ್ನಿಧ್ಯ.

* ಶಾಶ್ವತವಾದ ಆಧಾತ್ಮಿಕ ಜೀವನ

ಖಿಲಾಫತಿನ ಅನುಗ್ರಹದ ಕುರಿತು ಪವಿತ್ರ ಖುರ್‌ಆನಿನಲ್ಲಿ ಹಲವಾರು ಕಡೆಯಲ್ಲಿ ಪ್ರಸ್ತಾಪಿಸಲಾಗಿದೆ. ಸೂರಃ ನೂರ್‌ನ 56ನೇ ವಚನದಲ್ಲಿ ಸಂಕ್ಷೇಪವಾಗಿ ಖಿಲಾಫತಿನ ಅಸಾಧಾರಣವಾದ ಅನುಗ್ರಹಗಳಲ್ಲಿ ವಿವರಿಸಿರುವುದರಲ್ಲಿ ಕೆಲವು ಏನೆಂದರೆ, ಅದರ ಮೂಲಕ ಧರ್ಮಕ್ಕೆ ದೃಢತೆಯುಂಟಾಗುವುದು, ಸತ್ಯವಿಶ್ವಾಸಿಗಳ ಭಯದ ಸನ್ನಿವೇಶವು ಸಮಾಧಾನಕ್ಕೆ ಮಾರ್ಪಡುವುದು, ದೇವಾರಾಧನೆ ಹಾಗೂ ಪರಿಶುದ್ಧವಾದ ತೌಹೀದಿನ (ದೇವನ ಏಕತ್ವ) ಅಡಿಪಾಯ ಪ್ರಬಲವಾಗುವುದು, ಯಥಾರ್ಥ ನೆಲೆಯಲ್ಲಿ ಅದು ಸ್ಥಾಪಿಸಲ್ಪಡುವುದು, ಧರ್ಮಕ್ಕೆ ಸಂಬಂಧಿಸಿದ ಎಲ್ಲ ವಿಭಾಗಗಳಲ್ಲೂ ನವೀನವಾದ ಚೈತನ್ಯ ಉಂಟಾಗುವುದು. ಪ್ರಗತಿಯ ನವೀನವಾದ ದಾರಿಗಳು ತೆರೆಯಲ್ಪಡುವುವು, ಆಧ್ಯಾತ್ಮಿಕ ನಾಯಕತ್ವವು ವಿಶ್ವಾಸಿಗಳಿಗೆ ಯಥಾರ್ಥವಾದ ಜೀವಿತೋದ್ದೇಶವನ್ನು ಗಳಿಸುವುದರ ಕಡೆಗೆ

ತೀವ್ರವಾದ ಪ್ರಯತ್ನವನ್ನು ಮಾಡುವರೆ ಪ್ರೇರೇಪಿಸುವುದು, ಎಲ್ಲ ಅಡಚಣೆಗಳನ್ನು ನೀಗಿಸುವ ದಾರಿಯನ್ನು ತೋರಿಸಿಕೊಡುವುದು, ಎಲ್ಲ ತರಹದ ಕ್ಲೇಶ, ದುಃಖ ಹಾಗು ನೋವುಗಳನ್ನು ನಿರ್ನಾಮ ಮಾಡುವುದು, ಎಲ್ಲಕ್ಕಿಂತಲೂ ಮಿಗಿಲಾಗಿ ಸಮುದಾಯದ ಏಕತೆಯನ್ನು ನೆಲೆನಿಲ್ಲಿಸುವುದು ಹಾಗೂ ಭಿನ್ನತೆಯನ್ನು ಹೋಗಲಾಡಿಸುದರಲ್ಲಿ ಸದಾ ಕಾರ್ಯಪ್ರವೃತ್ತವಾಗಿರುವುದು. ಅಲ್ಲಾಹನ ಆರಾಧನೆ ಹಾಗೂ ಅವನ ಗುಣವಿಶೇಷಗಳ ಪ್ರತಿಬಿಂಬವಾದ ಒಂದು ಉದಾತ್ತ ಮಾದರಿ ಸತ್ಯವಿಶ್ವಾಸಿಗಳ ಮುಂದೆ ಸದಾ ಇರುವುದು. ಅವರ (ಖ಼ಲೀಫರ) ಆದೇಶಾನುಜ್ಞೆಗಳಿಗನುಸಾರವಾಗಿ ಸತ್ಯವಿಶ್ವಾಸಿಗಳು ಮುನ್ನಡೆಯಲು ಶ್ರಮಿಸುತ್ತಾರೆ. ಆ ಆಧ್ಯಾತ್ಮಿಕ ನೇತೃತ್ವವು ಸತ್ಯವಿಶ್ವಾಸಿಗಳಿಗೆ ಸತ್ಕರ್ಮಗಳ ಹಾಗು ಒಳಿತುಗಳ ಮಟ್ಟ ಹಾಗೂ ಅವುಗಳನ್ನು ಮಾಡಲು ಸಮರ್ಪಕವಾದ ಸಂದರ್ಭವನ್ನು ಸೂಚಿಸುತ್ತವೆ, ಅದರಿಂದ 'ತಖ್ವ'ದ (ದೇವಭಕ್ತಿಯ) ಹೊಲವು ನಳನಳಿಸುತ್ತವೆ. ಅಲ್ಲಾಹನಿಂದ ಸ್ಥಾಪಿತವಾದ ಖಿಲಾಫತ್ ದೇವೇಚ್ಛೆಯನ್ನು ಅರಿತು ಸತ್ಯವಿಶ್ವಾಸಿಗಳನ್ನು ಅಲ್ಲಾಹನ ಕರೆಗೆ ಓಗೊಡುವವರನ್ನಾಗಿ ಮಾಡುತ್ತದೆ.

ಇದೊಂದು ದೈವಿಕ ವ್ಯವಸ್ಥೆಯಾಗಿದೆ. ಇದು ಸೃಷ್ಟಿಗಳ ಯೋಗಕ್ಷೇಮ ಮತ್ತು ಕ್ಷೇಮಾಭ್ಯುದಯಕ್ಕಾಗಿ ಸತ್ಯವಿಶ್ವಾಸಿಗಳ ಗಮನಹರಿಸುತ್ತದೆ. ಮಾತ್ರವಲ್ಲ, ಮನುಕುಲದ ಸೇವೆಗೈಯ್ಯುವುದಕ್ಕಾಗಿ ವ್ಯವಸ್ಥಿತವಾದ ಪ್ರತಿಷ್ಠಾಪನೆಯನ್ನು ಮಾಡುವುದರ ಬಗ್ಗೆಯೂ ಅವರನ್ನು ಗಮನಹರಿಸುವಂತೆ ಮಾಡುತ್ತಲಿರುತ್ತದೆ.

ಈ ಆಧ್ಯಾತ್ಮಿಕವಾದ ನೇತೃತ್ವವು ವಿಸ್ಮಯಕರವಾಗಿದೆ, ಅದರ ವೈಶಿಷ್ಟ್ಯಗಳು, ಅದರ ಪ್ರಯೋಜನಗಳು, ಅದರ ಅನುಗ್ರಹಗಳ ಬಗ್ಗೆ ಲೆಕ್ಕ ಹಾಕುವುದು ಸಾಧ್ಯವೇ ಇಲ್ಲ. ಖ಼ಲೀಫರ ಹೃದಯವು ಮನುಕುಲಕ್ಕಾಗಿ ಮಿಡಿಯುತ್ತದೆ. ತನ್ನ ಅನುಯಾಯಿಗಳೊಡನೆ ಖ಼ಲೀಫರಿಗೆ ಇರುವ ಪ್ರೀತಿ ಮತ್ತು ವಾತ್ಸಲ್ಯವನ್ನು ಯಾವುದೇ ಲೌಕಿಕವಾದ ಸಂಬಂಧದೊಂದಿಗೆ ಹೋಲಿಸುವುದು ಮೂಢತನವಾಗಬಹುದು. ಖ಼ಲೀಫರು ತನ್ನ ಅನುಯಾಯಿಗಳ ಸಂಕಷ್ಟಗಳಲ್ಲಿ ದುಃಖವನ್ನು ಅನುಭವಿಸಿ ಅವರಿಗಾಗಿ ಹೃದಯ ಮಿಡಿಯುತ್ತಾರೆ; ಇದು ತಾಯಿಯ ಮಮತೆಗಿಂತಲೂ ಮಿಗಿಲಾದುದಾಗಿದೆ. ಲೋಕವು ನಿರಾಳವಾಗಿ ನಿದ್ರಿಸುತ್ತಿರುವಾಗ

ಖಲೀಫರು ಅವರ ಅಭಿವೃದ್ಧಿಗಾಗಿ ಯೋಜನೆಗಳನ್ನು ಮಾಡುತ್ತಿರುತ್ತಾರೆ. ಆ ಯೋಜನೆಗಳು ಕಾರ್ಯಗತಗೊಳ್ಳಲು ಪ್ರಾರ್ಥಿಸುತ್ತಿರುತ್ತಾರೆ. ನಿಷ್ಠಾವಂತರಾದ ಅನುಯಾಯಿಗಳ ಅಸ್ತವ್ಯಸ್ತಗೊಂಡ ಕಾರ್ಯಗಳನ್ನು ಸರಿಪಡಿಸುವುದು ಖಲೀಫರ ಈ ಪ್ರಾರ್ಥನೆಗಳೇ ಆಗಿವೆ. ಸರ್ವಸಾಧಾರಣವಾದ ಅವರ ಕಾರುಣ್ಯದ ಕಾರಣದಿಂದ ಪ್ರತಿದಿನ ಅವರು ಲೋಕದ ಜನರನ್ನು ಗಮನದಲ್ಲಿಟ್ಟುಕೊಂಡು ಪ್ರತಿಯೊಬ್ಬರಿಗಾಗಿಯೂ ತಲ್ಲಣಗೊಳ್ಳುತ್ತಾರೆ (ಅವರಿಗಾಗಿ ಪ್ರಾರ್ಥಿಸುತ್ತಾರೆ). ಪ್ರತಿಯೊಬ್ಬರ ಸನ್ಮಾರ್ಗ ಹಾಗೂ ಹಿತವನ್ನು ಕಾಂಕ್ಷಿಸುವವರಾಗಿರುತ್ತಾರೆ. ಆದ್ದರಿಂದ ಅವರ ಸಾಂಗತ್ಯವೊಂದರಿಂದ ಮಾತ್ರ ಲೆಕ್ಕವಿಲ್ಲದಷ್ಟು ಅನುಗ್ರಹಗಳು ಸಮ್ಮಿಳಿತಗೊಂಡು ಅಸಂಖ್ಯಾತ ಜನರು ಅದರಿಂದ ಪ್ರಯೋಜನ ಪಡೆಯುತ್ತಾರೆ. ಈ ಅನುಗ್ರಹಗಳು ಪ್ರವಾದಿತ್ವದ ಅನುಗ್ರಹಗಳ ಪ್ರತಿರೂಪವಾಗಿರುತ್ತವೆ. ಹಝ್ರತ್ ಮಸೀಹ್ ಮೌಊದ್[ಅ] ಹಾಗೂ ಖಲೀಫರ ಸಂಕ್ಷಿಪ್ತವಾದ ಉಲ್ಲೇಖಗಳ ಬೆಳಕಲ್ಲಿ ಖಿಲಾಫತಿನ ಅನುಗ್ರಹಗಳ ಕುರಿತು ಕೆಳಗೆ ಒಂದು ಮಿಂಚುನೋಟವನ್ನು ಬೀರಲಾಗಿದೆ:

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ:

"ನಮ್ಮ ಪೈಗಂಬರರ[ಸ] ನಿಧನದ ನಂತರ ಅತ್ಯಂತ ಅಪಾಯಕರವಾದ ಕಾಲಘಟ್ಟವು ಬಂದೊದಗಿತ್ತು. ಅರಬಸ್ಥಾನದ ಹಲವಾರು ಪಂಗಡಗಳು ಧರ್ಮಪರಿತ್ಯಾಗ ಮಾಡಿದ್ದರು. ಹಲವರು ಝಕಾತ್ ಕೊಡಲು ನಿರಾಕರಿಸಿದ್ದರು. ಹಲವು ಕಳ್ಳಪ್ರವಾದಿಗಳು ತಲೆ ಎತ್ತಿದ್ದರು. ಅಂತಹ ಸಮಯದಲ್ಲಿ ಅತ್ಯಂತ ಪ್ರಬಲ, ನಿಷ್ಠಾವಂತ, ದೃಢವಿಶ್ವಾಸದ, ಕೆಚ್ಚೆದೆಯ ಧೈರ್ಯಶಾಲಿಯಾದ ಒಬ್ಬ ಖಲೀಫರ ಆವಶ್ಯಕತೆ ಇತ್ತು. ಆಗ ಹಝ್ರತ್ ಅಬೂಬಕರ್[ರ] ಆ ಸ್ಥಾನಕ್ಕೆ ನಿಯಮಿಸಲ್ಪಟ್ಟರು. ಅವರು ಆ ಸ್ಥಾನಕ್ಕೇರಿದಾಗಲೇ ಅವರಿಗೆ ಅತ್ಯಂತ ದುಃಖದ ಸನ್ನಿವೇಶವನ್ನು ಎದುರಿಸಬೇಕಾಯಿತು. ಹಝ್ರತ್ ಆಯಿಶಾ[ರ] ಹೇಳುತ್ತಾರೆ, ನನ್ನ ತಂದೆಯವರು ಹಝ್ರತ್ ಪೈಗಂಬರರ[ಸ] ಖಲೀಫರಾಗಿ ಆಯ್ಕೆಗೊಂಡಾಗ ಮರಳುಗಾಡು ಅರಬರ ಹಲವು ತರದ ಪಿತೂರಿಗಳ ಮತ್ತು ಬಂಡಾಯಗಳ ಹಾಗೂ ಕಳ್ಳಪ್ರವಾದಿಗಳ ಕಾರಣ ಬಹಳ ಸಂಕಷ್ಟಗಳನ್ನು ಎದುರಿಸಬೇಕಾಯಿತು.

ಅವರ ಹೃದಯ ಅನುಭವಿಸಿದ ದುಃಖಗಳು ಒಂದು ವೇಳೆ ಒಂದು ಪರ್ವತಕ್ಕೆ ಬಡಿಯುತ್ತಿದ್ದರೆ ಅದು ಧೂಳೀಪಟವಾಗಿ ನೆಲಸಮವಾಗುತ್ತಿತ್ತು. ಅಲ್ಲಾಹನ ನೈಸರ್ಗಿಕವಾದ ನಿಯಮದಂತೆ ಅಲ್ಲಾಹನ ಪ್ರವಾದಿಯ ಮರಣದ ನಂತರ ಯಾರಾದರೂ ಖಲೀಫರಾಗಿ ನಿಯಮಿಸಲ್ಪಟ್ಟರೆ, ಅಲ್ಲಾಹನು ಅವರಲ್ಲಿ ಕೆಚ್ಚೆದೆಯ ಧೈರ್ಯದ, ದೃಢ ನಿಷ್ಠೆಯ, ಅಸಾಮಾನ್ಯ ಜ್ಞಾನದ, ಗಟ್ಟಿ ಹೃದಯದ ಅವಸ್ಥೆಯನ್ನು ಉಂಟುಮಾಡುತ್ತಾನೆ. ಇದೇ ಸ್ಥಿತಿ ದೇವವಿಧಿಯಂತೆ, ಕಾನೂನುಸಂಹಿತೆಯಂತೆ ಅಲ್ಲ, ಹಝ್ರತ್ ಅಬೂಬಕರರ(ರ) ಹೃದಯದಲ್ಲೂ ಉಂಟಾಯಿತು."

**(ರೂಹಾನೀ ಖಝಾಇನ್ ಸಂ. 17, ಪುಟ 185–186 – ತುಹಫೆ ಗೋಲ್ಡವಿಯಾ)**

"ಪ್ರವಾದಿಗಳು ಅಥವಾ ಆಧ್ಯಾತ್ಮಿಕ ನೇತಾರರು ಮರಣ ಹೊಂದುವಾಗ ಲೋಕದಲ್ಲಿ ಒಂದು ರೀತಿಯ ಭೂಕಂಪನದ ಸ್ಥಿತಿ ಉಂಟಾಗುತ್ತದೆ. ಅದೊಂದು ಅತ್ಯಂತ ಆಘಾತಕರವಾದ ಸಮಯವಾಗಿರುತ್ತದೆ. ಆದರೆ ಅಲ್ಲಾಹನು ಅವನ ಖಲೀಫರ ಮೂಲಕ ಆ ಸನ್ನಿವೇಶವನ್ನು ನೀಗಿಸುತ್ತಾನೆ. ಹೀಗೆ ಆ ಖಲೀಫರ ಮೂಲಕ ಆ ಅವಸ್ಥೆಯನ್ನು ಸ್ಥಿರತೆ ಹಾಗೂ ಸುಸ್ಥಿತಿಗೆ ತರುತ್ತಾನೆ."

**(ಮಲ್‌ಫೂಝಾತ್ ಸಂ. 4 ಪುಟ. 384)**

ಹಝ್ರತ್ ಮುಸ್ಲಿಹ್ ಮೌಊದ್(ರ) ಅರುಹುತ್ತಾರೆ:

"ದೇವದೂತರಿಂದ ಒಳಿತನ್ನು ಗಳಿಸಲಿಕ್ಕಿರುವ ಒಂದು ಮಾರ್ಗವು ಅಲ್ಲಾಹನಿಂದ ನಿಯೋಗಿತರಾದ ಖಲೀಫರನ್ನು ಅನುಸರಿಸುವುದು ಹಾಗೂ ಅವರೊಂದಿಗೆ ನಿಷ್ಠಾವಂತ ಸಂಬಂಧ ಹೊಂದುವುದಾಗಿದೆ... ನಿಮಗೆ ಅಲ್ಲಾಹನಿಂದ ಸಮಾಧಾನಕರವಾದ ಒಂದು ಹೊಸ ಹೃದಯವು ದೊರಕುವುದು. ಅಲ್ಲಾಹನ ದೇವದೂತರು ಆ ಹೃದಯಗಳನ್ನು ಎತ್ತಿ ಹಿಡಿಯುವರು... ಅವರೊಂದಿಗೆ (ಖಲೀಫರೊಂದಿಗೆ) ಸಂಬಂಧವಿರಿಸಿದ ಕಾರಣದಿಂದ ನಿಮ್ಮಲ್ಲೊಂದು ಮಹತ್ತರವಾದ ಪರಿವರ್ತನೆಯುಂಟಾಗುವುದು. ನಿಮ್ಮಲ್ಲಿ ಉನ್ನತವಾದ ಆತ್ಮವಿಶ್ವಾಸ ಉಂಟಾಗುವುದು. ನಿಮ್ಮ ವಿಶ್ವಾಸದಲ್ಲಿ ಮತ್ತು ದೃಢತೆಯಲ್ಲಿ ವರ್ಧನೆಯುಂಟಾಗುವುದು. ದೇವದೂತರು ನಿಮ್ಮ ಸಹಾಯಕ್ಕಾಗಿ

ಸನ್ನದ್ಧರಾಗಿ ನಿಲ್ಲುವರು ಮತ್ತು ಅವರು ನಿಮ್ಮ ಹೃದಯಗಳಲ್ಲಿ ಸ್ಥಿರತೆಯ ಹಾಗು ತ್ಯಾಗದ ಚೈತನ್ಯವನ್ನು ತುಂಬುತ್ತಿರುವರು. ಆದ್ದರಿಂದ ಖಲೀಫರೊಂದಿಗೆ ನಿಜವಾದ ಸಂಬಂಧವಿರಿಸುವುದು ದೇವದೂತರೊಂದಿಗೆ ಸಂಬಂಧವಿರಿಸುವಂತೆ ಮಾಡುತ್ತದೆ ಮತ್ತು ದೈವಿಕ ಪ್ರಕಾಶವನ್ನು ತನ್ನೆಡೆಗೆ ಆಹ್ವಾನಿಸುವವನನ್ನಾಗಿ ಮನುಷ್ಯನನ್ನು ಮಾಡುತ್ತದೆ."

(ಖಿಲಾಫತ್ ಅಲಾ ಮಿನ್‌ಹಾಜುನ್ನುಬುವ್ವಹ್ ಸಂ. 3 ಪುಟ 392)

"ಅಲ್ಲಾಹನು ನಿಮಗೆ ಖಿಲಾಫತಿನ ಅನುಗ್ರಹವನ್ನು ದಯಪಾಲಿಸಿರುವನು. ಅದರಿಂದ ಅವರು (ಇತರ ಮುಸಲ್ಮಾನರು) ವಂಚಿತರಾಗಿದ್ದಾರೆ. ಈ ಖಿಲಾಫತ್ ಕಡಿಮೆ ಸಂಖ್ಯೆಯಲ್ಲಿರುವ ಅಹ್ಮದಿಗಳನ್ನು ಒಟ್ಟುಗೂಡಿಸಿ ಅಪರಿಮಿತ ಶಕ್ತಿಯನ್ನು ನೀಡಿರುವನು. ಅವರು ಬೇರೆ ಬೇರೆಯಾಗಿರುತ್ತಿದ್ದರೆ ಎಂದಿಗೂ ಇಂತಹ ಶಕ್ತಿಯನ್ನು ಗಳಿಸಲು ಸಾಧ್ಯವಿರಲಿಲ್ಲ. ಎಲ್ಲ ಸಂಘಟನೆಯಲ್ಲೂ ದುರ್ಬಲರು ಇರುತ್ತಾರೆ. ಅದೇ ರೀತಿಯಲ್ಲಿ ಎಲ್ಲ ಭಾರವನ್ನು ಏಕಾಂಗಿಯಾಗಿ ವಹಿಸುವ ಬಲಿಷ್ಟರೂ ಇರುತ್ತಾರೆ. ಆದರೆ ಎಲ್ಲರನ್ನೂ ಒಂದೇ ಹಗ್ಗದಿಂದ ಕಟ್ಟುವಂತಹ ಕೆಲಸ ಒಂದು ಕೇಂದ್ರಬಿಂದುವಿನಿಂದ ಮಾತ್ರವೇ ಸಾಧ್ಯ. ಕೇಂದ್ರದಿಂದಿರುವ ಒಂದು ಪ್ರಯೋಜನವೇನೆಂದರೆ ಅದು ದುರ್ಬಲರನ್ನು ಬೀಳಲು ಬಿಡುವುದಿಲ್ಲ. ಅದೇ ರೀತಿ ಅದು ದುರ್ಬಲರು ಕೀಳಾಗುವಂತಾಗಲು ಶಕ್ತಿವಂತರನ್ನು ಅನಿಯಂತ್ರಿತವಾಗಿ ಮುನ್ನಡೆಯಲು ಸಹ ಬಿಡುವುದಿಲ್ಲ. ಒಂದು ಕೇಂದ್ರವಿಲ್ಲದಿರುತ್ತಿದ್ದರೆ, ದುರ್ಬಲರು ಬೀಳುವರು ಮತ್ತು ಪ್ರಬಲರು ಬಹಳ ಮುಂದಕ್ಕೆ ಗಮಿಸುವರು. ಅವರು ಗಗನದಲ್ಲಿದ್ದಾರೆ, ಆದರೆ ನಾವು ಭೂಮಿಯಲ್ಲಿದ್ದೇವೆ, ನಮ್ಮ ಮತ್ತು ಶಕ್ತಿವಂತರ ಎಡೆಯಲ್ಲಿ ಸಂಬಂಧವಾದರೂ ಏನು ಎಂದು ದುರ್ಬಲರು ಭಾವಿಸುವರು. ಆದರೆ ಇಸ್ಲಾಮಿನ ವ್ಯವಸ್ಥೆಗೊಳಪಟ್ಟು ಅವರು ಎಲ್ಲರೂ ಸಮಾನರಾಗುತ್ತಾರೆ. ಶ್ರೀಮಂತರು ಬಡವರೆಂಬ ಬೇಧ ಭಾವವೇ ಇರುವುದಿಲ್ಲ."

(ಖಿಲಾಫತ್ ಅಲಾ ಮಿನ್‌ಹಾಜ್ ನುಬುವ್ವಹ್ ಸಂ. 3 ಪುಟ. 358–359)

"ಖಿಲಾಫತಿನ ಹಾಗೂ ಸಂಘಟನೆಯ ಅನುಗ್ರಹದಿಂದ ಮಾತ್ರವೇ

ಜಮಾಅತಿಗೆ ವಿವಿಧ ಭಾಷೆಗಳಲ್ಲಿ ಪವಿತ್ರ ಖುರ್‌ಆನನ್ನು ಭಾಷಾಂತರಿಸಿ ವಿತರಿಸಲು ಸಾಧ್ಯವಾಗಿರುವುದು. ಹಾಗಿಲ್ಲದಿದ್ದರೆ ಜಮಾಅತಿನಲ್ಲಿ ಯಾವುದಾದರೊಂದು ಭಾಷೆಯಲ್ಲಿ ಕೂಡ ಪವಿತ್ರ ಖುರ್‌ಆನಿನ ತರ್ಜುಮೆಯನ್ನು ಪ್ರಕಟಿಸಲು ಸಾಧ್ಯವಿರುವ ಶ್ರೀಮಂತರು ಇಲ್ಲ. ಪ್ರತ್ಯೇಕವಾಗಿ ಪವಿತ್ರ ಖುರ್‌ಆನಿನ ತರ್ಜುಮೆಯನ್ನು ಯಾವುದಾದರೂ ಒಂದು ಭಾಷೆಯಲ್ಲಿ ಕೂಡ ಪ್ರಕಟಿಸಲು ವೈಯಕ್ತಿಕವಾಗಿ ಯಾರಿಗೂ ಸಾಧ್ಯವಿಲ್ಲ. ಆದರೆ ಸಂಘಟಿತರಾಗಿ ನಾವು ಈಗ ಇಂಗ್ಲೀಷ್, ಡಚ್, ರಶ್ಯಾ, ಸ್ಪಾನಿಷ್, ಪೋರ್ಚುಗಲ್, ಇಟಾಲಿಯನ್, ಜರ್ಮನ್ ಮತ್ತು ಫ್ರಾನ್ಸ್ ಭಾಷೆಯಲ್ಲಿ ಪವಿತ್ರ ಖುರ್‌ಆನನ್ನು ಭಾಷಾಂತರಿಸಿಯಾಗಿದೆ... ಪವಿತ್ರ ಖುರ್‌ಆನಿನಿಂದ ಪ್ರಯೋಜನ ಪಡೆಯಲು ಸಾಧ್ಯವಾಗದ ಯಾರೂ ಇರಬಾರದೆಂಬ ನೆಲೆಯಲ್ಲಿ ಎಲ್ಲ ಪ್ರಮುಖವಾದ ಭಾಷೆಗಳಲ್ಲಿ ಪವಿತ್ರ ಖುರ್‌ಆನಿನ ತರ್ಜುಮೆಯನ್ನು ಪ್ರಕಟಿಸಬೇಕೆಂಬುದು ನಮ್ಮ ಲಕ್ಷ್ಯವಾಗಿದೆ."

**(ಖಿಲಾಫತ್ ಅಲಾ ಮಿನ್‌ಹಾಜುನ್ನುಬುವ್ವಹ್ ಸಂ. 3 ಪುಟ. 569)**

"74 ಪ್ರಮುಖ ಭಾಷೆಗಳಲ್ಲಿ ಈಗಾಗಲೇ ಪವಿತ್ರ ಖುರ್‌ಆನಿನ ತರ್ಜುಮೆ ಪ್ರಕಟಗೊಂಡಿದೆಯೆಂಬ ವಿಷಯವನ್ನು ಇಲ್ಲಿ ಸ್ಪಷ್ಟಪಡಿಸುತ್ತೇನೆ. 2015ರಲ್ಲಿ ಸಿಂಹಳ ಹಾಗು ಬರ್ಮಾ ಭಾಷೆಯಲ್ಲಿ ಪವಿತ್ರ ಖುರ್‌ಆನಿನ ಸಂಪೂರ್ಣ ತರ್ಜುಮೆಯು ಪ್ರಕಟಗೊಂಡಿವೆ."

**(ಅಲ್‌ಫಝ್ಲ್ ಇಂಟರ್‌ನ್ಯಾಷನಲ್, 25 ಸೆಪ್ಟಂಬರ – 1 ಅಕ್ಟೋಬರ್ 2015)**

ಹಝ್ರತ್ ಖ಼ಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೇಳುತ್ತಾರೆ:

"ಖುದ್ರತೆ ಸಾನಿಯಾ (ಎರಡನೆಯ ಶಕ್ತಿಪ್ರಭಾವ) ಅಲ್ಲಾಹನ ಕಡೆಯಿಂದಿರುವ ಅತ್ಯಂತ ದೊಡ್ಡ ಕೊಡುಗೆಯಾಗಿದೆ. ಅದರ ಉದ್ದೇಶ ಸಮುದಾಯವನ್ನು ಏಕೀಕೃತಗೊಳಿಸಿ ವಿಂಗಡನೆಯಿಂದ ಕಾಪಾಡುವುದಾಗಿರುತ್ತದೆ. ಜಮಾಅತ್ ಎಂಬುದು ಖಿಲಾಫತ್ ಎಂಬ ದಾರದಿಂದ ಪೋಣಿಸಲ್ಪಟ್ಟ ಮುತ್ತುಗಳಿಗೆ ಸಮ. ಮುತ್ತುಗಳು ಚದುರಿ ಹೋದರೆ ಅವುಗಳಿಗೆ ಸೌಂದರ್ಯವೂ ಸುರಕ್ಷಿತತೆಯೂ

ಇಲ್ಲವಾಗುವುದು. ಒಂದು ದಾರದಿಂದ ಪೋಣಿಸಿದ ಮುತ್ತುಗಳು ಮಾತ್ರ ಸುಂದರವೂ ಸುರಕ್ಷಿತವೂ ಆಗಿರುವುದು. ಖುದ್ರತೆ ಸಾನಿಯಾ (ಎರಡನೇ ಶಕ್ತಿಪ್ರಭಾವ) ಇಲ್ಲವಾದರೆ ಸತ್ಯ ಧರ್ಮ ಎಂದೂ ಅಭಿವೃದ್ಧಿ ಪ್ರಾಪ್ತಿಸಲು ಸಾಧ್ಯವಿಲ್ಲ. ಆದ್ದರಿಂದ ಈ ದೈವಿಕ ಶಕ್ತಿ ಪ್ರಭಾವದೊಂದಿಗೆ ಸಂಪೂರ್ಣವಾದ ಆತ್ಮೀಯತೆ, ಪ್ರೀತಿ, ನಿಷ್ಠೆ, ಭಕ್ತಿಯ ಸಂಬಂಧವನ್ನಿರಿಸಿರಿ ಮತ್ತು ಖಿಲಾಫತಿನ ಅನುಸರಣೆಯ ಆವೇಶವನ್ನು ಸ್ಥಿರಗೊಳಿಸಿರಿ. ಇತರ ಎಲ್ಲ ರೀತಿಯ ಸಂಬಂಧಗಳಿಗಿಂತ ಹೆಚ್ಚಿನ ಸಂಬಂಧವನ್ನು ಖಿಲಾಫತಿನೊಂದಿಗೆ ಇರಿಸಿರಿ. ಇಮಾಮರೊಂದಿಗಿನ ಸಂಬಂಧದಿಂದ ಮಾತ್ರವೇ ಎಲ್ಲ ಅನುಗ್ರಹಗಳು ಸಿದ್ಧಿಸುವುವು. ಖಿಲಾಫತ್ ನಿಮ್ಮನ್ನು ಎಲ್ಲ ತರದ ಕಲಹಗಳಿಂದ ಮತ್ತು ವಿಪತ್ತುಗಳಿಂದ ರಕ್ಷಿಸುವ ಗುರಾಣಿಯಾಗಿದೆ."

**(ಮಶ್ಅಲೆ ರಾಹ್ ಸಂ. 5, ಭಾಗ 1, ಪುಟ 4–5**
**ಪ್ರಕಾಶನ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ ಮೇ 2007)**

"ಈ ದೈವಿಕ ಶಕ್ತಿ ಅಥವಾ ಖಿಲಾಫತಿನ ವ್ಯವಸ್ಥೆ ಇನ್ನು ಇನ್ಶಾಅಲ್ಲಾಹ್ ನೆಲೆನಿಲ್ಲಲಿರುವುದು. ಇದಕ್ಕೆ ಹಝ್ರತ್ ಪೈಗಂಬರರ[ಸ] ಖಲೀಫರೊಂದಿಗೆ ಯಾವುದೇ ಸಂಬಂಧವಿಲ್ಲ ಮತ್ತು ಅದು ಕೇವಲ 30 ವರ್ಷದ ಅವಧಿಯವರೆಗೆ ಮಾತ್ರವಾಗಿತ್ತು ಎಂದು ಅರ್ಥಮಾಡುವುದಾದರೆ ಅದು ಸರಿಯಲ್ಲ. ಏಕೆಂದರೆ, ಆ 30 ವರ್ಷವು ಹಝ್ರತ್ ಪೈಗಂಬರರ[ಸ] ಭವಿಷ್ಯವಾಣಿಯ ಪ್ರಕಾರವಾಗಿತ್ತು. ಹಾಗೆಯೇ ಈ ಸ್ಥಾಯಿಯಾದ ಕಾಲಘಟ್ಟವೂ ಹಝ್ರತ್ ಪೈಗಂಬರರ[ಸ] ಭವಿಷ್ಯವಾಣಿಯ ಪ್ರಕಾರವೇ ಆಗಿದೆ. ಅಂತ್ಯ ದಿನದವರೆಗೆ ಏನಾಗಬಹುದೆಂದು ಅಲ್ಲಾಹನೇ ಬಲ್ಲ. ಆದರೆ ಈ ಖಿಲಾಫತಿನ ಅವಧಿಯು ಅಲ್ಲಾಹನು ಇಚ್ಛಿಸುವನಾದರೆ, ನಿಮ್ಮ ಸಂತತಿಗಳಿಂದ ಹಿಡಿದು ಹಲವಾರು ಪೀಳಿಗೆಯವರೆಗೆ ಹೋಗಲಿದೆ ಎಂದು ಹೇಳುತ್ತೇನೆ. ಆದರೆ ನಿಮ್ಮಲ್ಲಿ ಒಳಿತು ಹಾಗೂ ದೇವಭಕ್ತಿ ನೆಲೆನಿಲ್ಲಬೇಕೆಂಬುದಾಗಿದೆ ಅದಕ್ಕಿರುವ ನಿಬಂಧನೆ.

**(ಖುತ್ಬ ಜುಮುಅ 27 ಮೇ 2005 – ಬದರ್ ಪತ್ರಿಕೆ;**
**ಖಿಲಾಫತ್ ಅಹ್ಮದಿಯಾ ಜುಬಿಲಿ ಆವೃತ್ತಿ, 2008 ಪುಟ 17–18)**

ಅಲ್ಲಾಹನು ಸದಾ ಅಹ್ಮದಿಯಾ ಖಿಲಾಫತಿನ ನೇತೃತ್ವದಲ್ಲಿ ಜಮಾಅತನ್ನು ಭೀತಿಯ ಅವಸ್ಥೆಯಿಂದ ಸಮಾಧಾನದ ಅವಸ್ಥೆಗೆ ಮಾರ್ಪಡಿಸಿರುವನು ಹಾಗೂ ಆ ಸಂಕಷ್ಟಾವಸ್ಥೆಯಲ್ಲಿ ಸತ್ಯಧರ್ಮಕ್ಕೆ ಮೊದಲಿಗಿಂತ ಹೆಚ್ಚಿನ ಬಲವನ್ನೂ ದೃಢತೆಯನ್ನೂ ಪ್ರದಾನಿಸಿರುವನು. ಅಲ್ಲಾಹನಿಂದ ನಿಯುಕ್ತವಾದ ಖಿಲಾಫತ್ ವ್ಯವಸ್ಥೆಯ ನೆರಳಿನಡಿಯಲ್ಲಿರುವ ಜಮಾಅತನ್ನು ನಿರ್ನಾಮ ಮಾಡಲು ಹೊರಟಂತಹ ಅಗ್ನಿಯ ಜ್ವಾಲೆಯು ಜಮಾಅತಿಗೆ ಎಳ್ಳಷ್ಟು ಕೇಡು ಬಗೆಯಲು ಸಾಧ್ಯವಿಲ್ಲವೆಂಬುದು ಈ ಲೋಕವು ಈಗಲೂ ಕಾಣುತ್ತಿದೆ, ಇನ್ನು ಮುಂದೆಯೂ ಕಾಣುವುದು. ಅವರ ಯೋಜನೆಯ ಬೂದಿಯನ್ನು ಅವರ ತಲೆಯ ಮೇಲೆಯೇ ಸಿಂಪಡಿಸುವನು. ಅದೇ ಅಗ್ನಿಯಲ್ಲಿ ಅವರ ಹಂಬಲಗಳನ್ನು ಧ್ವಂಸಗೊಳಿಸುವನು. ಇದಕ್ಕೆ ಮೊದಲೂ ಇದೇ ಬಯಕೆಯನ್ನು ತಮ್ಮ ಹೃದಯಗಳಲ್ಲಿ ಹೊತ್ತು ನಡೆದವರು ಮಣ್ಣಿನಡಿಯಲ್ಲಿ ಅದುಮಲ್ಪಟ್ಟರು. ಇವರು ಸಹ ಮಣ್ಣಿನಡಿಯಲ್ಲಿ ಹೂಳಲ್ಪಡುವರು. ಆದರೆ ಯಾರಿಗೂ ಅಹ್ಮದಿಯತಿನ ಅಭಿವೃಧಿಯನ್ನು ಒಂದು ಕ್ಷಣಕ್ಕೂ ತಡೆಯಲು ಸಾಧ್ಯವಿಲ್ಲ. ಅಲ್ಲಾಹನು ಯಾವಾಗಲೂ ಅವರನ್ನು ನಾಶಪಡಿಸಿಕೊಂಡು ದೈವಿಕ ಸಂಘಟನೆಗಳ ಮೇಲೆ ಯಾವಾಗಲೂ ತನ್ನ ಅತಿ ಶಕ್ತವಾದ ಸಹಾಯ ಹಸ್ತವನ್ನು ಚಾಚುತ್ತಾನೆ. ಸದಾ ಜೀವಂತನೂ ಎಲ್ಲವನ್ನು ನಿಲ್ಲಿಸುವವನೂ ಶಕ್ತನೂ ಆದ ಅವನೇ ಅಹ್ಮದಿಯಾ ಖಿಲಾಫತಿಗೆ ಬೆಂಬಲ ನೀಡುವವನು ಎಂದು ಲೋಕಕ್ಕೆ ತೋರಿಸಿತ್ತಾನೆ. ಈ ರೀತಿಯ ದೈವಿಕ ಸಹಾಯ ಮತ್ತು ನೆರವಿನ ಕುರಿತು ಹಝ್ರತ್ ಮಸೀಹ್ ಮೌಊದ್[ಅ] ವಿವರಿಸುತ್ತಾರೆ:

"ಲೋಕವು ನನ್ನನ್ನು ಗುರುತಿಸುವುದಿಲ್ಲ. ಆದರೆ ಯಾರು ನನ್ನನ್ನು (ಈ ಲೋಕಕ್ಕೆ) ಕಳುಹಿಸಿರುವನೋ ಅವನು ನನ್ನನ್ನು ಅರಿಯುತ್ತಾನೆ. ನನ್ನ ನಾಶವನ್ನು ಆಶಿಸುವವರು ತಪ್ಪು ಮಾಡುತ್ತಿದ್ದಾರೆ ಮತ್ತು ಅದು ಅವರ ದೌರ್ಭಾಗ್ಯವಾಗಿದೆ. ನಾನು ಯಥಾರ್ಥ ಒಡೆಯನ ಸ್ವಂತ ಕೈಗಳಿಂದ ನೆಡಲ್ಪಟ್ಟ ವೃಕ್ಷವಾಗಿದ್ದೇನೆ. ಎಲೈ ಜನರೇ! ಕೊನೆಯವರೆಗೂ ನನ್ನೊಂದಿಗೆ ನಿಷ್ಠಾವಂತನಾಗಿರುವವನ ಹಸ್ತ ನನ್ನೊಂದಿಗೆ ಇದೆ ಎಂದು ಚೆನ್ನಾಗಿ ತಿಳಿಯಿರಿ."

**(ಝಮೀಮ್ ಎ ತೌಫ ಎ ಗೋಲ್ಡವಿಯಾ, ರೂಹಾನೀ ಖಝಾಇನ್ ಸಂ. 17, ಪುಟ 49–50)**

"ವಿರೋಧಿಗಳು ಅಹ್ಮದಿಯತನ್ನು ಲೋಕದ ಕೆಲವು ಪ್ರದೇಶಗಳಲ್ಲಿ ವಿಸ್ತರಿಸುವುದನ್ನು ತಡೆಯಲು ವಿಫಲ ಶ್ರಮ ನಡೆಸಿದರು. ಆದರೆ ಅಲ್ಲಾಹನು ಅವನ ವಾಗ್ದತ್ತ ಮಸೀಹರ ಪುತ್ರನ ಕೈಗಳಿಂದ ಇಸ್ಲಾಮ್ ಧರ್ಮವನ್ನು, ವಾಗ್ದತ್ತ ಮಹ್‌ದಿಯ ಮಾತುಗಳನ್ನು ಲೋಕದ ಮೂಲೆ ಮೂಲೆಗಳಲ್ಲಿ ತಲುಪಿಸಲು ತಹ್‌ರೀಕ್ ಜದೀದಿನ ರೂಪದಲ್ಲಿ ಮಹತ್ವಪೂರ್ಣವಾದೊಂದು ಯೋಜನೆಯನ್ನು ಆರಂಭಿಸಿದ್ದನು. ಅದರ ಒಂದು ಹೃದಯಸ್ಪರ್ಶಿ ವರದಾನ ನಮಗೆ ಇಂದು ಎಂ.ಟಿ.ಎ.ಯ ರೂಪದಲ್ಲಿ ಲಭಿಸಿದೆ. ಅಲ್ಲಾಹನು ಈ ಅನುಗ್ರಹವನ್ನು ದಯಪಾಲಿಸಿ ಕಾಲದ ಖಲೀಫರ ಶಬ್ದವನ್ನು ಲೋಕದೆಲ್ಲೆಡೆ ಸಾರ್ವತ್ರಿಕಗೊಳಿಸಿರುವನು."

**(ಕೃಪೆ: ಖಿಲಾಫತ್ ಅಹ್ಮದಿಯಾ ಜುಬಿಲಿ ಆವೃತ್ತಿ 2008;**
**ತಹ್‌ರೀಕ್ ಜದೀದ್ ಅಂಜುಮನ್ ಅಹ್ಮದಿಯಾ ಪಾಕಿಸ್ತಾನ ಪುಟ xv)**

"ಇಂದು ಅಲ್ಲಾಹನ ಅನುಗ್ರಹದಿಂದ ಜಮಾಅತ್ ಮತ್ತು ಕಾಲದ ಖಲೀಫರ ನಡುವೆ ಪ್ರೀತಿಯ ಅನಶ್ವರ ಸಂಬಂಧ ನೆಲೆನಿಂತಿದೆ. ಅಹ್ಮದೀ ಸ್ತ್ರೀ ಪುರುಷರು, ಮಕ್ಕಳು, ಮುದುಕರು, ಯುವಕರು ಎಲ್ಲರೂ ಕಾಲದ ಖಲೀಫರ ಸಮೀಪವಾಗಿದ್ದಾರೆ. ಅದು ಅಲ್ಲಾಹನ ಸಹಾಯವಿಲ್ಲದಿರುತ್ತಿದ್ದರೆ ಸಾಧ್ಯವಾಗುತ್ತಿರಲಿಲ್ಲ. ಖಿಲಾಫತಿನ ಪ್ರೇಮಿಗಳು ಮತ್ತು ವಿಧೇಯರು ಲೋಕದೆಲ್ಲೆಡೆ ಹರಡಿರುವರು. ಅವರು ಖಿಲಾಫತಿನ ರೂಪದಲ್ಲಿ ಅನುಗ್ರಹಿಸಲ್ಪಟ್ಟಂತಹ ಅಲ್ಲಾಹನ ಪಾಶವನ್ನು ಹಿಡಿದು ಇಸ್ಲಾಮಿನ ಮನೋಹರವಾದ ಪ್ರೀತಿ ಹಾಗು ಶಾಂತಿಯ ಅಧ್ಯಾಪನೆಯ ಪತಾಕೆಯನ್ನು ಎತ್ತಿಹಿಡಿದಿರುವರು. ಅಲ್ಲಾಹನು ಖಿಲಾಫತಿನ ಅನುಗ್ರಹದಿಂದ ಅಹ್ಮದಿಯಾ ಜಮಾಅತನ್ನು ಒಂದು ನೇತೃತ್ವದಡಿಯಲ್ಲಿ ಏಕೀಕೃತಗೊಳಿಸಿರುವನು. ದೈವಿಕ ಸಹಾಯ ಲಭಿಸಿರುವ ಈ ಸಂಘಟನೆಯು ಲೋಕದ ಎಲ್ಲ ನವೀನ ಸಾಧನ ಸಲಕರಣೆಗಳನ್ನು ಉಪಯೋಗಿಸುತ್ತಾ ಪ್ರತಿಯೊಂದು ಧರ್ಮ, ಸಮುದಾಯ, ಬಣ್ಣ, ಪೀಳಿಗೆಯ ಜನರಿಗೆ ಸತ್ಯ ಧರ್ಮದ ಸಂದೇಶವನ್ನು ಮುಟ್ಟಿಸುತ್ತಿದೆ. ಖಿಲಾಫತಿನ ಸೇವಾಳುಗಳ ಈ ತಂಡವು ಪ್ರತಿ ಕ್ಷಣವು ಸತ್ಯ ಧರ್ಮದ ಪ್ರಚಾರದಲ್ಲಿ ನಿರತವಾಗಿದೆ. ಉದಯಿಸುವ ಪ್ರತಿಯೊಂದು

ದಿನವು ಅಹ್ಮದಿಯತ್ ಅಥವಾ ನೈಜ ಇಸ್ಲಾಮಿನ ವಿಜಯಗಾಥೆಯ ಸಂತೋಷದ ವಾರ್ತೆಗಳನ್ನು ನೀಡುತ್ತಾ ಉದಯಿಸುತ್ತದೆ. ಇದನ್ನೇ ಧರ್ಮದ ದೃಢತೆ ಎನ್ನಲಾಗುತ್ತದೆ. ಅಲ್ಲಾಹನು ಸತ್ಯವಿಶ್ವಾಸಿಗಳಿಗೆ ಖಿಲಾಫತಿನ ಸ್ಥಾಪನೆ, ಭಯದ ನಂತರ ಸಮಾಧಾನ, ಧರ್ಮದ ದೃಢತೆಯ ವಾಗ್ದಾನಗಳನ್ನು ಮಾಡಿರುವನು. ಅಹ್ಮದಿಯಾ ಜಮಾಅತ್ ಇವುಗಳ ಈಡೇರುವಿಕೆಯ ಪ್ರತ್ಯಕ್ಷ ಸಾಕ್ಷಿಯಾಗಿದೆ. ಆದ್ದರಿಂದ ಈ ಅನುಗ್ರಹಗಳಿಂದ ಸ್ಥಾಯಿಯಾದ ಪಾಲು ಪಡೆಯಲು, ತಮ್ಮ ಮುಂಬರುವ ಪೀಳಿಗೆಗಳನ್ನು ಕಾಪಾಡುವುದಕ್ಕಾಗಿ ಖಿಲಾಫತಿನೊಂದಿಗೆ ಅಂಟಿಕೊಂಡಿರಬೇಕಾದುದು ಅನಿವಾರ್ಯವಾಗಿದೆ. ಯಾವಾಗಲೂ ಖಿಲಾಫತಿ ನೊಂದಿಗೆ ಸಂಬಂಧವಿರಿಸಿಕೊಳ್ಳಿರಿ ಹಾಗು ತಮ್ಮ ಸಂತಾನಗಳಿಗೂ ಈ ಶಿಕ್ಷಣವನ್ನು ನೀಡುತ್ತಾ ಇರಿ. ತಮ್ಮ ಪ್ರಾರ್ಥನೆಗಳ, ಪ್ರಾಮಾಣಿಕತೆಯ ಹಾಗೂ ನಿಷ್ಠೆಯ ಮೂಲಕ ಕಾಲದ ಖಲೀಫರ ಸಹಾಯಿಗಳಾಗಿರಿ. ಅಲ್ಲಾಹನು ನಿಮಗೆಲ್ಲರಿಗೂ ಅದಕ್ಕಿರುವ ತೌಫೀಕ್ ನೀಡುವಂತಾಗಲಿ" – ಆಮೀನ್."

**ಕೃಪೆ: ಖಿಲಾಫತ್ ಅಹ್ಮದಿಯಾ ಜುಬಿಲಿ ಆವೃತ್ತಿ 2008;**
**ತಹ್‌ರೀಕ್ ಜದೀದ್ ಅಂಜುಮನ್ ಅಹ್ಮದಿಯಾ ಪಾಕಿಸ್ತಾನ ಪುಟ. XVI**

"ಖಲೀಫರನ್ನು ಅಲ್ಲಾಹನು ಸ್ವಯಂ ನಿಯೋಗಿಸುತ್ತಾನೆಂಬುದು ನಮ್ಮ ವಿಶ್ವಾಸವಾಗಿದೆ. ಅವನ ಆಯ್ಕೆಯಲ್ಲಿ ಯಾವುದೇ ಲೋಪಗಳುಂಟಾಗುವುದಿಲ್ಲ. ಯಾರಿಗೆ ಈ ಪೋಷಾಕನ್ನು ಅಲ್ಲಾಹನು ತೊಡಿಸುತ್ತಾನೋ ಅದರ ನಂತರ ಯಾರಿಂದಲೂ ಆ ಪೋಷಾಕನ್ನು ಕಳಚಲೋ ಕಸಿದುಕೊಳ್ಳಲೋ ಸಾಧ್ಯವಿಲ್ಲ. ಅವನು ತನ್ನೊಬ್ಬ ದುರ್ಬಲ ದಾಸನನ್ನು ಆಯ್ಕೆ ಮಾಡುತ್ತಾನೆ. ಜನರು ಕೆಲವೊಮ್ಮೆ ಆ ವ್ಯಕ್ತಿಯನ್ನು ತುಚ್ಛವಾಗಿ ಕಾಣುತ್ತಾರೆ. ಆದರೆ ಅಲ್ಲಾಹನು ಅವರನ್ನು ಆಯ್ಕೆ ಮಾಡಿ ತನ್ನ ಮಹತ್ವದ ಮತ್ತು ವೈಭವದ ಒಂದು ತೇಜಸ್ಸನ್ನು ಅವರಿಗೆ ನೀಡುತ್ತಾನೆ. ಆಗ ಆ ವ್ಯಕ್ತಿಯ ಅಸ್ತಿತ್ವವೇ ಲೋಕದಿಂದ ಕಣ್ಮರೆಯಾಗಿ ಅಲ್ಲಾಹನ ಓಜಸ್ಸಿನಲ್ಲಿ ಮರೆಯಾಗುತ್ತದೆ. ಆಗ ಅಲ್ಲಾಹನು ಅವರನ್ನು ಎತ್ತಿ ತನ್ನ ಮಡಿಲಲ್ಲಿರುಸುತ್ತಾನೆ ಮತ್ತು ಸದಾ ಸಮಯ ತನ್ನ ಸಹಾಯ ಮತ್ತು ನೆರವನ್ನು ನೀಡುತ್ತಾ ಅವರನ್ನು ಸಹಚಾರಿಯನ್ನಾಗಿಸುತ್ತಾನೆ. ಅಲ್ಲಾಹನು ಅವರ ಹೃದಯದಲ್ಲಿ ಜಮಾಅತಿನವರ ಬಗ್ಗೆಯಿರುವ ನೋವನ್ನು ಸ್ವಂತ ನೋವಿಗಿಂತಲೂ

ಹೆಚ್ಚಾಗಿ ಗ್ರಹಿಸುವಂತೆ ಮಾಡುವನು. ಅದರಿಂದಾಗಿ ಜಮಾಅತಿನ ಪ್ರತಿಯೊಬ್ಬನು ತನ್ನ ನೋವಿನ ಬಗ್ಗೆ ಕನಿಕರವಿರುವ, ಸಹಾನುಭೂತಿಯುಳ್ಳ ಒಬ್ಬರು ಅಸ್ತಿತ್ವದಲ್ಲಿರುವರೆಂದು ಅರಿಯತೊಡಗುತ್ತಾನೆ."

**(ಅಲ್‌ಫಝಲ್ ದಿನಪತ್ರಿಕೆ 30 ಮೇ 2003;**
**ಬದರ್ ಪತ್ರಿಕೆಯ ಜುಬಿಲಿ ಆವೃತ್ತಿ 2008 ಪುಟ 17)**

".....ಖಿಲಾಫತಿನೊಂದಿಗೆ ಅಹ್ಮದಿಯಾ ಜಮಾಅತಿನ ವ್ಯಕ್ತಿಗಳ ಸಂಬಂಧ ಹಾಗೂ ಕಾಲದ ಖಲೀಫರಿಗೆ ಜಮಾಅತಿನ ಪ್ರಿಯ ಜನರೊಂದಿಗಿರುವ ಸಂಬಂಧ ಭೌತಿಕ ಜನರ ಕಲ್ಪನೆಗೆ ನಿಲುಕದ ಸಂಗತಿಯಾಗಿದೆ. ಅವರಿಗೆ ಅದನ್ನು ಊಹಿಸಲು ಕೂಡ ಸಾಧ್ಯವಿಲ್ಲ. **'ಜಮಾಅತ್ ಮತ್ತು ಖಲೀಫರು ಒಂದೇ ಅಸ್ತಿತ್ವದ ಎರಡು ನಾಮಗಳಾಗಿವೆ'** ಎಂದು ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್ಮಹುಲ್ಲಾಹ್) ತಆಲಾರವರು ಹೇಳಿದ್ದು ಎಷ್ಟು ಸತ್ಯವಾದ ಸಂಗತಿಯಾಗಿದೆ! ಈ ಸಂಬಂಧವು ಜಲ್ಸದ ಸಮಯದಲ್ಲಿ ಸ್ಪಷ್ಟವಾಗಿ ಕಾಣಬಹುದಾಗಿದೆ. ಅಲ್‌ಹಮ್ದುಲಿಲ್ಲಾಹ್. ಅಲ್ಲಾಹನ ಅನುಗ್ರಹದಿಂದ ಜಮಾಅತ್ ಅಹ್ಮದಿಯಾ ಕೆನಡವು ಪ್ರಾಮಾಣಿಕತೆ ಮತ್ತು ನಿಷ್ಠಾವಂತಿಕೆಯಲ್ಲಿ ಬಹಳ ಮುಂದಿದೆ ಎಂಬುದು ನನಗೆ ಸಂತೋಷ ನೀಡುತ್ತಿದೆ. ಅಲ್ಲಾಹನು ಅವರ ಈ ಸಂಬಂಧವನ್ನು ಇನ್ನಷ್ಟು ವರ್ಧಿಸಲಿ. ಇದು ಬರೇ ಕ್ಷಣಿಕ ಆವೇಶ ಹಾಗೂ ಭಾವೋದ್ವೇಗದ ಸಂಬಂಧವಾಗದಿರಲಿ. ನೀವು ಸದಾ ಪ್ರೀತಿ ಹಾಗೂ ನಿಷ್ಠಾವಂತಿಕೆಯನ್ನು ತೋರಿಸಿದ್ದೀರಿ. ದಿನಾಂಕ 27 ಮೇ ತಿಂಗಳಲ್ಲಿ ನಾನು ಖಿಲಾಫತಿನ ವಿಷಯದಲ್ಲಿ ಖುತ್‌ಬ ನೀಡಿದಾಗ ನನಗೆ ಜಮಾಅತಿಯಾದ ರೀತಿಯಲ್ಲೂ ವಿಭಿನ್ನ ಸ್ಥಳಗಳಿಂದ ವೈಯಕ್ತಿಕವಾಗಿಯೂ ಬಂದ ನಿಷ್ಠೆಯ ಪತ್ರಗಳಲ್ಲಿ ಎಲ್ಲರಿಗಿಂತ ಮೊದಲು ಮತ್ತು ಎಲ್ಲರಿಗಿಂತ ಹೆಚ್ಚಿನವು ನನಗೆ ಕೆನಡಾದಿಂದ ಬಂದಿದ್ದವು. ಈ ಪ್ರೀತಿ ಮತ್ತು ನಿಷ್ಠಾವಂತಿಕೆಯ ಪ್ರಕಟನೆಗಳು ಮತ್ತು ವಾದಗಳು ಬರೇ ಕ್ಷಣಿಕ ಆವೇಶ ಹಾಗೂ ಭಾವೋದ್ವೇಗದ ಕಾರಣದಿಂದ ಆಗದಿರಲಿ. ಅಲ್ಲಾಹನು ಅದನ್ನು ಸದಾ ಇರುವಂತಹದ್ದೂ ಸ್ಥಾಯಿಯೂ ಆಗಿ ಮಾಡಲಿ ಮತ್ತು ನಿಮ್ಮ ಸಂತಾನಗಳಲ್ಲಿಯೂ ಶಾಶ್ವತವಾಗಿರುವಂತೆ ಮಾಡಲಿ."

**(ಖುತ್ಬಾತ್ ಮಸ್ರೂರ್ ಸಂ. 3 ಪುಟ 388-389 - ಖಾದಿಯಾನದಿಂದ 2005ರಲ್ಲಿ ಪ್ರಕಟಿತ)**

ಖಿಲಾಫತಿನ ಅನುಗ್ರಹದ ಕುರಿತು ನೈಜೀರಿಯಾ ಜಮಾಅತನ್ನು ಉಲ್ಲೇಖಿಸುತ್ತಾ ಹಝ್ರ್‌ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಯ್ಯದಹುಲ್ಲಾಹ್) ಅರುಹುತ್ತಾರೆ:

"ನೈಜೀರಿಯಾ ಜಮಾಅತ್ ಖಿಲಾಫತಿನ ಅನುಗ್ರಹದ ನೇರ ಸಾಕ್ಷಿಯಾಗಿದೆ. ಈ ಅನುಗ್ರಹಕ್ಕೆ ನೀವು ಅತ್ಯಂತ ಹೆಚ್ಚಾಗಿ ಪ್ರಾಧಾನ್ಯತೆಯನ್ನು ನೀಡಬೇಕಾಗಿದೆ. ಮಸೀದಿಯ ಸಮೇತವಾಗಿ ಖಿಲಾಫತಿನಿಂದ ದೂರವಾಗಿದ್ದ ಇಲ್ಲಿನ ಕೆಲವರ ಸ್ಥಿತಿ ಏನಾಯಿತು ಎಂದು ನಿಮಗೆ ಗೊತ್ತಿದೆ. ಎಲ್ಲವೂ ಇಲ್ಲವಾಯಿತು. ಆದರೆ ಖಿಲಾಫತಿನ ಅನುಗ್ರಹದೊಂದಿಗೆ ಅಂಟಿಕೊಂಡವರಿಗೆ ಮತ್ತು ತಮ್ಮ ಬೈಅತಿನ ಶರತ್ತುಗಳನ್ನು ನಿಭಾಯಿಸಲು ಯತ್ನಿಸಿದವರಿಗೆ ಅಲ್ಲಾಹನು ಲೆಕ್ಕವಿಲ್ಲದಷ್ಟು ಅನುಗ್ರಹಗಳನ್ನು ಪ್ರದಾನಿಸಿದನು. ಇಂದು ಇಲ್ಲಿಯ ಎಲ್ಲ ಪಟ್ಟಣಗಳಲ್ಲಿ ಜಮಾಅತಿನ ಅಭಿವೃದ್ದಿಯ ದೃಶ್ಯವನ್ನು ನೋಡುತ್ತಿರುವಿರಿ. ಇಂದು ನೀವು ಇಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸೇರಿರುವುದು ಕೂಡ ಖಿಲಾಫತಿನೊಂದಿಗೆ ಮಾತ್ರ ಅನುಗ್ರಹವಿದೆಯೆಂಬುವುದಕ್ಕೆ ಪುರಾವೆಯಾಗಿದೆ. ಆದ್ದರಿಂದ ನೀವು ನಿಮ್ಮ ಜವಾಬ್ದಾರಿಗಳನ್ನು ಚೆನ್ನಾಗಿ ಅರಿತುಕೊಳ್ಳಿರಿ. ಅಲ್ಲಾಹನು ನಿಮಗೆ ಅದಕ್ಕಿರುವ ತೌಫೀಕ್ ನೀಡಲಿ ಹಾಗೂ ಈ ಅನುಗ್ರಹದಿಂದ ಪ್ರಯೋಜನಗಳನ್ನು ಗಳಿಸುತ್ತಿರುವಂತಾಗಲಿ." (ಆಮೀನ್).

**(ತಾಸೂರಾತೆ ಖಿಲಾಫತ್, ಜುಬಿಲಿ ಆವೃತ್ತಿ 2008 ಪುಟ 76–77)**

ಹಝ್ರ್‌ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಯ್ಯದಹುಲ್ಲಾಹ್) ಯಶಸ್ವಿಯಾಗಿ ಪಶ್ಚಿಮ ಆಫ್ರಿಕಾದ ಯಾತ್ರೆ ಮುಗಿಸಿ ಹಿಂತಿರುಗಿದಾಗ ಮೇ 1, 2008ರಂದು ಲಜ್‌ನ ಇಮಾಇಲ್ಲಾಹ್ ಯು.ಕೆ.ಯವರು ಒಂದು ಸತ್ಕಾರ ಕೂಟವನ್ನು ಆಯೋಜಿಸಿದ ಸಂದರ್ಭದಲ್ಲಿ ಹಝ್ರ್‌ರತ್ ಮಸೀಹ್ ಮೌಊದರ(ಅ) ಪುಸ್ತಕವಾದ 'ಅಲ್ ವಸಿಯ್ಯತ್'ನಿಂದ ಒಂದು ಭಾಗವನ್ನು ವಿವರಿಸುತ್ತಾ ಹೇಳುತ್ತಾರೆ:

"ಹಝ್ರ್‌ರತ್ ಮಸೀಹ್ ಮೌಊದರ(ಅ) ಉದ್ಧರಣೆಯಿಂದ ಆಯ್ದ

ಒಂದು ಭಾಗವನ್ನು ನಿಮ್ಮ ಮುಂದಿಡುತ್ತೇನೆ. 'ನಿಮ್ಮ ಹಿಂತಿರುಗುವ ಸಮಯ ಸನ್ನಿಹಿತವಾಗಿದೆ, ಒಂದು 'ಮಖ್ಬರ'(ಸ್ಮಶಾನ) ನಿರ್ಮಿಸಬೇಕಾಗಿದೆ, ಅದರಲ್ಲಿ (ಆಧ್ಯಾತ್ಮಿಕವಾಗಿ) ಉನ್ನತರಾದವರನ್ನು ಹಾಗೂ ತ್ಯಾಗಿಗಳಾದವರನ್ನು (ಅವರ ಮರಣಾನಂತರ) ದಫನ ಮಾಡಬೇಕಾಗಿದೆ' ಎಂದು ಅಲ್ಲಾಹನು ಹಝ್ರತ್ ಮಸೀಹ್ ಮೌಊದ್‌ರಿಗೆ ಹೇಳಿಕೊಟ್ಟಾಗ ಅವರು "ಅಲ್‌ವಸಿಯ್ಯತ್" ಎಂಬ ಪುಸ್ತಕವನ್ನು ಬರೆದರು. ಅದರಲ್ಲಿ ಅವರು ಅರುಹುತ್ತಾರೆ:

"ಪ್ರಿಯರೇ, ಅಲ್ಲಾಹನ ಪುರಾತನ ಕಾಲದಿಂದಲೇ ನಡೆದುಕೊಂಡು ಬಂದಿರುವ ನಡವಳಿಕೆ ಕ್ರಮ ಇದೇ ಆಗಿದೆ, ಅಲ್ಲಾಹನು ಎರಡು ಶಕ್ತಿ ಪ್ರಕಟಣೆಗಳನ್ನು ತೋರಿಸುತ್ತಾನೆ. ಹೀಗೆ ಶತ್ರುಗಳ ಎರಡು ಹುಸಿ ಖುಷಿಗಳನ್ನು ಅವನು ಧ್ವಂಸ ಮಾಡಿ ತೋರಿಸುತ್ತಾನೆ. ಆದ್ದರಿಂದ ಅಲ್ಲಾಹನು ಆ ಪುರಾತನವಾದ ನಡವಳಿಕೆಯನ್ನು ಈಗ ವರ್ಜಿಸಲು ಸಾಧ್ಯತೆಯಿಲ್ಲ. ಆದ್ದರಿಂದ ನಾನು ನಿಮ್ಮಲ್ಲಿ ಹೇಳಿದ ವಿಷಯದ ಬಗ್ಗೆ ನೀವು ದುಃಖಿತರಾಗದಿರಿ. ನಿಮ್ಮ ಹೃದಯವು ವ್ಯಾಕುಲಗೊಳ್ಳದಿರಲಿ. ಯಾಕೆಂದರೆ ಎರಡನೇ ಶಕ್ತಿ ಪ್ರಕಟಣೆ ಕಾಣಬೇಕಾದದ್ದು ನಿಮಗೆ ಅಗತ್ಯವಾಗಿದೆ. ಅದರ ಬರುವಿಕೆ ನಿಮಗೆ ಉತ್ತಮವಾಗಿದೆ. ಯಾಕೆಂದರೆ ಅದು ಶಾಶ್ವತವಾಗಿದೆ.... ನಾನು ದೇವನ ಕಡೆಯಿಂದ ಒಂದು ಶಕ್ತಿಯ ಪ್ರಕಟಣೆಯ ರೂಪದಲ್ಲಿ ಅವತರಿಸಿರುವೆನು. ನಾನು ಅಲ್ಲಾಹನ ಒಂದು ಸಾಕಾರ ದಿವ್ಯಶಕ್ತಿ ಪ್ರಕಟಣೆಯಾಗಿದ್ದೇನೆ. ನನ್ನ ನಂತರ ಬೇರೆಯೂ ವ್ಯಕ್ತಿತ್ವಗಳು ಬರುವರು. ಅವರು ಅಲ್ಲಾಹನ ಎರಡನೇ ದಿವ್ಯಶಕ್ತಿ ಪ್ರಭಾವದ ಪ್ರಕಟಣೆಯಾಗಿರುವರು. ಆದ್ದರಿಂದ ಅಲ್ಲಾಹನ ಎರಡನೇ ದಿವ್ಯಶಕ್ತಿ ಪ್ರಭಾವದ ಆವಿರ್ಭಾವದ ನಿರೀಕ್ಷೆಯಲ್ಲಿ ನೀವೆಲ್ಲರೂ ಒಟ್ಟಾಗಿ ಪ್ರಾರ್ಥಿಸುತ್ತಿರಿ. ಎರಡನೇ ದಿವ್ಯಶಕ್ತಿ ಪ್ರಭಾವದ ಆವಿರ್ಭಾವಕ್ಕಾಗಿ ಸಾತ್ವಿಕರ ಪ್ರತಿಯೊಂದು ಜಮಾಅತ್ ಪ್ರತಿಯೊಂದು ದೇಶದಲ್ಲಿ ಒಟ್ಟು ಸೇರಿ ಪ್ರಾರ್ಥನೆಯಲ್ಲಿ ನಿರತರಾಗಬೇಕಾಗಿದೆ. ಹೀಗೆ ಎರಡನೇ ದಿವ್ಯಶಕ್ತಿ ಪ್ರಕಟಣೆ ಆಕಾಶದಿಂದ ಇಳಿಯಲಿ ಮತ್ತು ನಿಮ್ಮ ಒಡೆಯನು ಅತ್ಯಂತ ಶಕ್ತಿಶಾಲಿ ಎಂದು ಕಾಣುವಂತಾಗಲಿ......"

**(ಅಲ್‌ವಸಿಯ್ಯತ್; ರೂಹಾನೀ ಖಝಾಇನ್ ಸಂ. 20, ಪುಟ 305)**

"ಕಳೆದ ನೂರು ವರ್ಷಗಳಿಂದ ಹಝ್ರತ್ ಮಸೀಹ್ ಮೌಊದರ(ಅ) ಈ ಸುವಾರ್ತೆ ಸತ್ಯವಾಗಿ ಈಡೇರುವುದನ್ನು ನಾವು ಕಂಡಿದ್ದೇವೆ ಹಾಗೂ ಮುಂದಕ್ಕೆ ಕಾಣುವೆವು. ಹಝ್ರತ್ ಮಸೀಹ್ ಮೌಊದ್(ಅ) ನಿಧನರಾದಾಗ, ಅಹ್ಮದಿಯ್ಯತ್ ಇನ್ನು ಕೆಲವು ದಿನಗಳ ಅತಿಥಿ ಮಾತ್ರವಾಗಿದೆಯೆಂದು ಪ್ರಥಮ ಖಿಲಾಫತಿನ ಸಮಯದಲ್ಲಿ ಜನರು ನೆನಸಿದ್ದರು. ನಂತರ ದ್ವಿತೀಯ ಖಿಲಾಫತಿನ ಸಮಯದಲ್ಲಿ ಆಂತರಿಕ ಕಲಾಪವು ತಲೆದೋರಿದಾಗ, ಜಮಾಅತಿನ ವ್ಯವಸ್ಥೆಯನ್ನು ನಡೆಸಲು ಇನ್ನು ಮುಂದೆ 'ಅಂಜುಮನ್' ಹಕ್ಕುದಾರರಾಗಬೇಕು ಮತ್ತು ಖಿಲಾಫತಿನ ಯಾವುದೇ ಅಗತ್ಯವಿಲ್ಲವೆಂದು "ಲಾಹೋರಿ" ಮತ್ತು "ಪೈಗ್ಹಾಮಿ" ಎಂದು ಕರೆಯಲ್ಪಡುವ ಖಿಲಾಫತಿನ ವಿರೋಧಿಗಳು ಒತ್ತಾಯಿಸಲು ತೊಡಗಿದರು. ಹಝ್ರತ್ ಮುಸ್ಲಿಹ್ ಮೌಊದ್‌ರ(ರ) ಪ್ರಾಯ ಆಗ ಬರೇ 24 ವರ್ಷವಾಗಿತ್ತು. ಆಗಿನ ದೊಡ್ಡ ದೊಡ್ಡ ಮಹಾಪಂಡಿತರಾದವರು, ಇಸ್ಲಾಮಿನ ಹಾಗೂ ಅಹ್ಮದಿಯತಿನ ಆಧಾರಸ್ತಂಭವೆಂದು ಕರೆಯಲ್ಪಟ್ಟವರು ಜಮಾಅತಿನಿಂದ ಬೇರ್ಪಟ್ಟರು. ಕೆಲವರು ಹಝ್ರತ್ ಖಲೀಫತುಲ್ ಮಸೀಹ್ ಸಾನಿಯರೊಂದಿಗೆ(ರ) ನಿಂತರು. ಆದರೆ ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) 52 ವರ್ಷದ ಖಿಲಾಫತಿನ ಕಾಲವು ಪ್ರತಿದಿನ ಅಭಿವೃದ್ಧಿಯ ಹೊಸ ಹೊಸ ಮಜಲುಗಳನ್ನು ದಾಟುತ್ತಾ ಮುಂದೆ ಸಾಗಿರುವುದನ್ನು ನಾವು ಕಂಡಿದ್ದೇವೆ. ಅವರ ಖಿಲಾಫತಿನ ಕಾಲದಲ್ಲಿ ಆಫ್ರಿಕಾ ಮತ್ತು ಯುರೋಪಿನಲ್ಲಿ ಮಿಶನ್ ಹೌಸ್ ತೆರೆಯಲಾಯಿತು. ಅವರ ಖಿಲಾಫತಿನ 10 ವರ್ಷಗಳ ತರುವಾಯ ಲಂಡನಿನಲ್ಲಿ ಮಸೀದಿಯ ಶಂಕುಸ್ಥಾಪನೆ ಮಾಡಲಾಯಿತು."

"ನಂತರ ತೃತೀಯ ಖಿಲಾಫತಿನ ಕಾಲ ಬಂತು, ಆಗ ಆಫ್ರಿಕದಲ್ಲಿ ವಿಶೇಷವಾಗಿ ಒಂದು ಕಾಲದಲ್ಲಿ ಬ್ರಿಟಿಷರ ಕಾಲನಿಯಾಗಿದ್ದ ಆಫ್ರಿಕಾದ ದೇಶಗಳಲ್ಲಿ ಅಹ್ಮದಿಯಾ ಸಂಘಟನೆ ಚೆನ್ನಾಗಿ ಹರಡಿತು ಹಾಗೂ ಸಾಕಷ್ಟು ಪ್ರತಿಷ್ಠಾಪಿತವಾಯಿತು. ನಂತರ ಚತುರ್ಥ ಖಿಲಾಫತಿನ ಕಾಲ ಬಂದಾಗ ನಾವು ಪ್ರತಿದಿನ ಅಭಿವೃದ್ಧಿಯ ಒಂದು ಹೊಸ ಆವೃತ್ತಿಯನ್ನೇ ನೋಡಿದೆವು. ಆಫ್ರಿಕದಲ್ಲೂ ಯೂರೋಪಿನಲ್ಲೂ ಮತ್ತು ಏಶ್ಯಾದಲ್ಲೂ ಬರೇ ಎಂ.ಟಿ.ಎ. ಸಹಾಯದಿಂದ

ಲೋಕದ ಮೂಲೆ ಮೂಲೆಗಳಲ್ಲೂ ಜಮಾಅತಿನ ಸಂದೇಶವು ಹರಡಿತು."

"ಆದ್ದರಿಂದ ಈ ಅಭಿವೃದ್ಧಿಗಳಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದಂತೆ, ಎರಡನೇ ಶಕ್ತಿಪ್ರಕಟಣೆ (ಖುದ್ರತ್) ಬರಬೇಕಾದದ್ದು ಅನಿವಾರ್ಯವಾಗಿದೆ, ಯಾಕೆಂದರೆ ಅದು ಚಿರಂತನವೂ ಸದಾ ನೆಲೆನಿಲ್ಲುವಂತದ್ದೂ ಆಗಿದೆ. ತನ್ನ ಅಭಿವೃದ್ಧಿಯ ಮಜಲನ್ನು ದಾಟುತ್ತಾ ಮುಂದಕ್ಕೆ ಸಾಗುವಂತಹದ್ದು ಮಾತ್ರವೇ ಸದಾ ನೆಲೆನಿಲ್ಲುವಂತಹದ್ದಾಗಿದೆ. ಆದ್ದರಿಂದ ಅಲ್ಲಾಹನ ಅನುಗ್ರಹದಿಂದ ಖಿಲಾಫತಿನೊಂದಿಗೆ ಇರುವ ಸಂಬಂಧದ ಫಲವಾಗಿ ಜಮಾಅತ್ ಅಭಿವೃದ್ಧಿಯನ್ನು ಹೊಂದುತ್ತಾ ಹೋಯಿತು. ಹಝ್ರತ್ ಖಲೀಫತುಲ್ ಮಸೀಹ ರಾಬಿಅ್ರ(ರಹಮತುಲ್ಲಾಹ್) ನಿಧನದ ನಂತರ ಅಲ್ಲಾಹನು ನನಗೆ ಈ ಸ್ಥಾನವನ್ನು ವಹಿಸಿದಾಗ, ಹೇಗೆ ಈ ಜಮಾಅತ್ ಮುನ್ನಡೆಯುವುದೆಂದು ನನ್ನ ಹೃದಯದಲ್ಲಿ ಭಯವಿತ್ತು. ಆದರೆ ಅಲ್ಲಾಹನು ಸ್ವಯಂ ಎಲ್ಲವನ್ನು ತನ್ನ ಹತೋಟಿಯಲ್ಲಿ ತೆಗೆದುಕೊಂಡು ಎಲ್ಲ ವಿಧದಲ್ಲೂ ಸಮಾಧಾನಪಡಿಸಿದನು. ಅಭಿವೃದ್ಧಿ ನಡೆಯುತ್ತಿದ್ದ ಅದೇ ವೇಗದಲ್ಲಿ ಮುಂದುವರಿಯುತ್ತಲೇ ಹೋಯಿತು ಮತ್ತು ಮುನ್ನಡೆಯುತ್ತಾ ಇದೆ. 'ನಾನು ನಿನ್ನ ಸಂದೇಶವನ್ನು ಲೋಕದ ಮೂಲೆ ಮೂಲೆಗಳಲ್ಲಿ ಮುಟ್ಟಿಸುವೆನು.' ಎಂಬುದು ಹಝ್ರತ್ ಮಸೀಹ್ ಮೌಊದ್‌ರಿಗೆ(ಅ) ಅಲ್ಲಾಹನ ವಾಗ್ದಾನವಾಗಿದೆ. ಅಲ್ಲಾಹನ ಅನುಗ್ರಹದಿಂದ ಲೋಕದ ಎಲ್ಲೆಗಳಲ್ಲಿ ಈ ಸಂದೇಶವು ತಲುಪುತ್ತಿದೆ. ಜನರು ಗುಂಪಾಗಿ ಬಂದು ಈ ಜಮಾಅತಿನಲ್ಲಿ ಸೇರುತ್ತಿದ್ದಾರೆ. ಅಲ್ಲಾಹನಿಗೆ ತನ್ನ ವರಿಷ್ಠರ ಗೌರವದ ಬಗ್ಗೆ ಅತ್ಯಂತ ಹೆಚ್ಚಾಗಿ ಕಾಳಜಿಯಿರುತ್ತದೆ. ನಿಜವೆಂದರೆ ಅಲ್ಲಾಹನು ತನ್ನ ಕೆಲವು ಕಾರ್ಯಗಳನ್ನು ಕೆಲವು ನಿರ್ದಿಷ್ಟ ವ್ಯಕ್ತಿಗಳಿಂದ ಮಾಡಿಸುತ್ತಾನೆ. ಅಲ್ಲಾಹನ ವರಿಷ್ಠ ದಾಸರಾದ ಪ್ರವಾದಿಗಳನ್ನು ಲೋಕಕ್ಕೆ ಕಳುಹಿಸಿ ಅವರ ಮುಖಾಂತರ ತನ್ನ ಶಿಕ್ಷಣವನ್ನೂ ತನ್ನ ವ್ಯವಸ್ಥೆಯನ್ನೂ ಈ ಲೋಕದಲ್ಲಿ ಸ್ಥಾಪಿಸಲು ಇಚ್ಛಿಸುತ್ತಾನೆ. ಪ್ರವಾದಿಗಳ ನಂತರ ಅವರ ಅನುಯಾಯಿಗಳ ಮುಖಾಂತರ ಹಾಗೂ ಅವರ ಖಿಲಾಫತಿನ ಮುಖಾಂತರ ಆ ವ್ಯವಸ್ಥೆಯು ಜಾರಿಯಲ್ಲಿರುತ್ತದೆ ಮತ್ತು ಪ್ರಗತಿ ಪಡೆಯುತ್ತಾ ಹೋಗುತ್ತದೆ."

**(ಅಲ್ ಫಝಲ್ ಇಂಟರ್‌ನ್ಯಾಷನಲ್ – ಖಿಲಾಫತ್ ಅಹ್ಮದಿಯಾ ಜುಬಿಲಿ ಆವೃತ್ತಿ ಜುಲೈ 25 – 7 ಆಗಸ್ಟ್ 2008 ಪುಟ 16; ತಾಸೂರಾತೆ ಖಿಲಾಫತ್, ಜುಬಿಲಿ ಆವೃತ್ತಿ 2008 ಪುಟ 59–91)**

ಹಝ್ರತ್ ಖ಼ಲೀಫತುಲ್ ಮಸೀಹ್ ಖ಼ಾಮಿಸ್(ಅಯ್ಯದಹುಲ್ಲಾಹು) ಅಹ್ಮದಿಯಾ ಜಮಾಅತಿಗೆ ಸುವಾರ್ತೆ ನೀಡುತ್ತಾ ಹೇಳುತ್ತಾರೆ:

"ಹೊಸ ಶತಮಾನವನ್ನು ಪ್ರವೇಶಿಸುತ್ತಿರುವ ಐದನೇ ಖಿಲಾಫತಿನ ಈ ಕಾಲಘಟ್ಟವು ಅಹ್ಮದಿಯ್ಯತಿನ ಅಭಿವೃದ್ಧಿಯ ಮತ್ತು ವಿಜಯದ ಕಾಲಘಟ್ಟವಾಗಿದೆ. ಇನ್‌ಶಾ ಅಲ್ಲಾಹ್. ಮುಂಬರುವ ಪ್ರತಿದಿನ ಜಮಾಅತಿನ ವಿಜಯದ ದಿನವನ್ನು ಸಮೀಪಗೊಳಿಸಿ ತೋರಿಸುತ್ತಿರುವ ಅಲ್ಲಾಹನ ಸಹಾಯದ ದ್ವಾರವು ತೆರೆಯಲ್ಪಟ್ಟಿದೆ ಮತ್ತು ತೆರೆಯುತ್ತಿದೆ. ನಾನು ನನ್ನ ಬಗ್ಗೆ ಆತ್ಮಾವಲೋಕನ ಮಾಡುವಾಗ ಲಜ್ಜಿತನಾಗುತ್ತೇನೆ. ನಾನೊಬ್ಬ ಸಾಮಾನ್ಯ, ಅಸಮರ್ಥ, ಅನರ್ಹ ಪಾಪಿಯಾದ ವ್ಯಕ್ತಿಯಾಗಿದ್ದೇನೆ. ಅಲ್ಲಾಹನು ನನ್ನನ್ನು ಈ ಸ್ಥಾನದಲ್ಲಿ ಇರಿಸಿದುದರ ಯುಕ್ತಿಯಾದರೂ ಏನೆಂದು ನನಗೆ ಗೊತ್ತಿಲ್ಲ. ಆದರೆ, ಅಲ್ಲಾಹನ ಅಪರಿಮಿತವಾದ ಸಹಾಯ ಸಹಕಾರದಿಂದ ಅಭಿವೃದ್ಧಿಯ ರಾಜಮಾರ್ಗವನ್ನು ಈ ಕಾಲವು ಕ್ರಮಿಸುತ್ತಾ ಹೋಗುವುದು ಎಂದು ಸ್ಪಷ್ಟಪಡಿಸುತ್ತಾನೆ. ಇನ್‌ಶಾಅಲ್ಲಾಹ್. ಅಹ್ಮದಿಯತಿನ ಅಭಿವೃದ್ಧಿಯನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ ಹಾಗೂ ಮುಂದೆಯೂ ಈ ಅಭಿವೃದ್ಧಿ ಸ್ಥಗಿತಗೊಳ್ಳುವಂತಹದ್ದಲ್ಲ. ಖ಼ಲೀಫರ ಪರಂಪರೆಯು ಮುಂದುವರಿಯುತ್ತಲೇ ಹೋಗುವುದು ಹಾಗೂ ಅಹ್ಮದಿಯತ್ ಮುನ್ನಡೆಯುತ್ತಲೇ ಇರುವುದು."

**(ಅಲ್ ಫಝಲ್ ಇಂಟರ್‌ನ್ಯಾಷನಲ್ – ಖಿಲಾಫತ್ ಅಹ್ಮದಿಯಾ ಜುಬಿಲಿ ಆವೃತ್ತಿ ಜುಲೈ 25– ಆಗಸ್ಟ್ 7, 2008 ಪುಟ 12; ತಾಸೂರಾತೆ ಖಿಲಾಫತ್, ಜುಬಿಲಿ ಆವೃತ್ತಿ 2008 ಪುಟ 112–113)**

ಹಝ್ರತ್ ಖ಼ಲೀಫತುಲ್ ಮಸೀಹ್ ಖ಼ಾಮಿಸ್(ಅಯ್ಯದಹುಲ್ಲಾಹು) ಹೇಳುತ್ತಾರೆ: "ಜಮಾಅತಿನ ವ್ಯಕ್ತಿಗಳು ಖ಼ಲೀಫರನ್ನು ತುಂಬಾ ಪ್ರೀತಿಸುತ್ತಾರೆ ಹಾಗೂ ಖ಼ಲೀಫ ಅವರನ್ನು ಪ್ರೀತಿಸುತ್ತಾರೆ. ಪ್ರೀತಿಯ ಈ ಪರಸ್ಪರ ಸಂಬಂಧವು ಸದಾ ನೆಲೆನಿಲ್ಲುವುದು. ಇನ್‌ಶಾಅಲ್ಲಾಹ್"

**(ಅಲ್ ಫಝಲ್ ಇಂಟರ್‌ನ್ಯಾಷನಲ್ – ಖಿಲಾಫತ್ ಅಹ್ಮದಿಯಾ ಜುಬಿಲಿ ಆವೃತ್ತಿ 7 11 ಜುಲೈ 2008 ಪುಟ 10). (ತಾಸೂರಾತೆ ಖಿಲಾಫತ್, ಜುಬಿಲಿ ಆವೃತ್ತಿ 2008 ಪುಟ 127)**

ಖಿಲಾಫತಿನ ಮಹತ್ತರವಾದ ಅನುಗ್ರಹದ ಸಂಬಂಧವಾಗಿ ಹುಝೂ಼ರ್ ಹೇಳುತ್ತಾರೆ:

"ದೇವಾನುಗ್ರಹದಿಂದ 1400 ವರ್ಷಗಳ ನಂತರ ಪುನಃ ಅಲ್ಲಾಹನು ತನ್ನ ಅನುಗ್ರಹವನ್ನು (ಪ್ರವಾದಿತ್ವ) ಅವತೀರ್ಣಗೊಳಿಸಿದ್ದಾನೆ. ಅದು ಕೊನೆಯವರನ್ನು ಆದಿಯವರೊಟ್ಟಿಗೆ ಸೇರಿಸಿತು. ಆದ್ದರಿಂದ ಅಲ್ಲಾಹನ ಈ ಅನುಗ್ರಹಕ್ಕೆ ಪ್ರಾಧಾನ್ಯತೆಯನ್ನು ನೀಡಿ, ಅವನ ಈ ಅನುಗ್ರಹವನ್ನು ಸದಾ ಸ್ಮರಿಸಿ, ಅದರಿಂದ ಪ್ರಯೋಜನವನ್ನು ಪಡೆಯುತ್ತಿರಬೇಕಾದುದು ಪ್ರತಿಯೊಬ್ಬ ಅಹ್ಮದಿಯ ಕರ್ತವ್ಯವಾಗಿದೆ. ಈ ಅನುಗ್ರಹದ ನಂತರ ಅಲ್ಲಾಹನು ಖ಼ಿಲಾಫತಿನ ಅನುಗ್ರಹವನ್ನೂ ಜಾರಿಗೊಳಿಸಿದನು. ಅದರೊಂದಿಗೆ ನಿಷ್ಠಾವಂತಿಕೆಯ ಸಂಬಂಧವನ್ನಿರಿಸಬೇಕಾದುದು ಸಹ ಆವಶ್ಯಕ. ಬೈಅತಿನ ನಿಬಂಧನೆಗೆ ಅನುಸಾರವಾಗಿ ದೇವಭಯದೊಂದಿಗೆ ಜೀವನ ಸಾಗಿಸಬೇಕಾದುದು ಹಝ್ರ಼ತ್ ಮಸೀಹ್ ಮೌಊದ್‌ರಲ್ಲಿ(ಅ) ನಂಬಿಕೆಯನ್ನಿರಿಸಿದ್ದೇವೆಂದು ವಾದಿಸುವ ನಮ್ಮ ಕರ್ತವ್ಯವಾಗಿದೆ. ಎರಡನೇ ಖುದ್ರತ್ (ಶಕ್ತಿ ಪ್ರಕಟಣೆ) ಆಗಮನ ಆವಶ್ಯಕವೆಂದು ಹಝ್ರ಼ತ್ ಮಸೀಹ್ ಮೌಊದ್‌ರು(ಅ) ಅರುಹಿದ್ದರು. ಹಝ್ರ಼ತ್ ಮಸೀಹ್ ಮೌಊದ್‌ರಲ್ಲಿ(ಅ) ಮಾತ್ರ ವಿಶ್ವಾಸವಿರಿಸಿದರೆ ಸಾಕೆಂದೂ ಖ಼ಿಲಾಫತಿನೊಂದಿಗೆ ಬೈಅತ್ ಮಾಡುವ ಅಗತ್ಯವಿಲ್ಲವೆಂದೂ ಹೇಳುವವರು ಹಝ್ರ಼ತ್ ಮಸೀಹ್ ಮೌಊದ್‌ರೊಡನೆ(ಅ) ಮಾಡಿದ ವಾಗ್ದಾನದಿಂದ ಹೊರಗೆ ಹೋಗುವವರಾಗಿದ್ದಾರೆ...... ಖ಼ಿಲಾಫತಿನೊಂದಿಗೆ ಬೈಅತ್ ಮಾಡಲು ಸೌಭಾಗ್ಯ ದೊರೆತ ನೀವು ಭಾಗ್ಯಶಾಲಿಗಳಾಗಿದ್ದೀರಿ. ಆದರೆ ಅದಕ್ಕೋಸ್ಕರ ದೇವಭಕ್ತಿಯ ಅಗತ್ಯವೂ ಇದೆ. ಇಂದು ನಾವು ಖ಼ಿಲಾಫತಿನ 100 ವರ್ಷಗಳನ್ನು ಪೂರ್ತಿಯಾಗುವುದನ್ನು ಮಾತ್ರ ಕಾಣುತ್ತಿಲ್ಲ, ಅದರೊಂದಿಗೆ ಅಲ್ಲಾಹನ ಅನುಗ್ರಹಗಳ ಸಾಕ್ಷ್ಯ ವಹಿಸುತ್ತಾ ಯಶಸ್ಸಿನ ಹಾಗೂ ಅಭ್ಯುದಯದ ಮುಂಚೂಣಿಯಲ್ಲಿರುವುದಾಗಿ ನಾವು ಕಾಣುತ್ತಿದ್ದೇವೆ."

**(ತಾಸೂರಾತೆ ಖಿಲಾಫತ್, ಜುಬಿಲಿ ಆವೃತ್ತಿ 2008 ಪುಟ 180–181)**

ಹಝ್ರ಼ತ್ ಖ಼ಲೀಫತುಲ್ ಮಸೀಹ್ ಖ಼ಾಮಿಸ್(ಅಯ್ಯದಹುಲ್ಲಾಹು ಹೇಳುತ್ತಾರೆ:

"ಲೋಕದ ಯಾವುದೇ ದೇಶದಲ್ಲಿ ವಾಸಿಸುವ ಅಹ್ಮದಿಯರಲ್ಲಿ ಇಂದು

ನಾನು ಕಾಣುತ್ತಿರುವ ಒಂದು ಸಾಮಾನ್ಯ ಅಂಶವೆಂದರೆ, ಅದು ಅಹ್ಮದಿಯಾ ಖಿಲಾಫತಿನೊಂದಿನ ನಿಷ್ಠೆ ಮತ್ತು ಸಮರ್ಪಣೆಯ ಸಂಬಂಧವಾಗಿದೆ. ಅದು ಪಾಕಿಸ್ತಾನದ ಯಾ ಹಿಂದುಸ್ತಾನದ ಅಹ್ಮದಿಯಾಗಿರಲಿ, ಇಂಡೊನೇಶ್ಯಾದ ಅಥವಾ ಅಲ್ಜೀರಿಯದ, ಬಂಗ್ಲಾದೇಶದ ಯಾ ಆಸ್ಟ್ರೇಲಿಯಾದ, ಯೂರೋಪ್ ಹಾಗೂ ಅಮೇರಿಕಾದ, ಆಫ್ರಿಕಾದ ವಿದೂರ ಪ್ರದೇಶಗಳಲ್ಲಿ ವಾಸಿಸುವ ಅಹ್ಮದಿಯಾಗಿರಲಿ, ಕಾಲದ ಖಲೀಫರನ್ನು ನೋಡಿದಾಕ್ಷಣ ಒಂದು ವಿಶೇಷವಾದ ಪ್ರೀತಿ, ಒಂದು ವಿಶೇಷವಾದ ಸಂಬಂಧ, ಒಂದು ವಿಶೇಷವಾದ ಹೊಳಪು ಅವರ ಮುಖಗಳಲ್ಲಿ ಹಾಗೂ ಕಣ್ಣುಗಳಲ್ಲಿ ಕಾಣಲ್ಪಡುತ್ತವೆ. ಇದು ಹಝ್ರತ್ ಮಸೀಹ್ ಮೌಊದ್‌ರೊಂದಿಗಿರುವ[ಅ] ಬೈಅತಿನ ಮತ್ತು ನಿಷ್ಠೆಯ ನೈಜವಾದ ಸಂಬಂಧದ ಕಾರಣದಿಂದಲೇ ಆಗಿದೆ. ಹಾಗೆಯೇ ಹಝ್ರತ್ ಪೈಗಂಬರರೊಂದಿಗೆ[ಸ] ಪರಿಪೂರ್ಣವಾದ ಅನುಸರಣೆಯ ಹಾಗೂ ಪ್ರೀತಿಯ ಸಂಬಂಧದ ಕಾರಣದಿಂದಾಗಿದೆ. ಅಂದರೆ, ಅಲ್ಲಾಹನು ಹಝ್ರತ್ ಪೈಗಂಬರರನ್ನು[ಸ] ಸಮಸ್ತ ಮನುಕುಲಕ್ಕೆ ಮೋಕ್ಷದಾತನಾಗಿ ಕಳುಹಿಸಿರುವನು ಮತ್ತು ಅಹ್ಮದಿಯಾ ಖಿಲಾಫತ್ ಹಝ್ರತ್ ಪೈಗಂಬರರಲ್ಲಿಗೆ[ಸ] ತಲುಪಲು ಇರುವ ಒಂದು ಕೊಂಡಿಯಾಗಿದೆಯೆಂಬ ಸಂಪೂರ್ಣ ಅರಿವು ಮತ್ತು ಜ್ಞಾನದ ಕಾರಣದಿಂದಾಗಿದೆ. ಏಕದೇವನ ಚರಣದಲ್ಲಿ ಸಮರ್ಪಣೆಗೊಳ್ಳಲು ಸದಾ ನಿರತವಾಗಿರುವುದು ಈ ಐಕ್ಯತೆಯ ದೃಷ್ಟಾಂತವಾಗಿದೆ. ಇಂತಹ ಉತ್ಸಾಹಭರಿತ ವ್ಯಕ್ತಿಗಳನ್ನು ಯಾವುದಾದರೂ ಸಮುದಾಯಕ್ಕೆ ಸೋಲಿಸಲು ಸಾಧ್ಯವೇ? ಖಂಡಿತವಾಗಿಯೂ ಸಾಧ್ಯವಿಲ್ಲ. ಯಶಸ್ಸಿನ ತಾಣಗಳನ್ನು ದಾಟುತ್ತಾ ಹೋಗುವುದು ಮತ್ತು ಸಮಸ್ತ ಜನಾಂಗವನ್ನು ಹಝ್ರತ್ ಪೈಗಂಬರರ[ಸ] ಪತಾಕೆಯಡಿಯಲ್ಲಿ ಒಟ್ಟುಸೇರಿಸುವುದಾಗಿದೆ ಈಗ ಜಮಾಅತಿನ ವಿಧಿ. ಇದು ಈ ಕಾಲದ ಇಮಾಮರೊಂದಿಗೆ ಅಲ್ಲಾಹನ ವಾಗ್ದಾನವಾಗಿದೆ. ಅವನು ಎಂದಿಗೂ ತನ್ನ ವಾಗ್ದಾನವನ್ನು ಸುಳ್ಳಾಗಿಸುವುದಿಲ್ಲ."

**(ಅಲ್‌ಫಝಲ್ ಇಂಟರ್‌ನ್ಯಾಷನಲ್ – ಖಿಲಾಫತ್ ಅಹ್ಮದಿಯಾ ಜುಬಿಲಿ ಆವೃತ್ತಿ 31 ಅಕ್ಟೋಬರ್–7 ನವೆಂಬರ್ 2008 ಪುಟ 12; ತಾಸೂರಾತೆ ಖಿಲಾಫತ್, ಜುಬಿಲಿ ಆವೃತ್ತಿ 2008 ಪುಟ 195)**

ಇದಾಗಿದೆ ಖಿಲಾಫತಿನ ಅನುಗ್ರಹದ ಸಂಕ್ಷೇಪ. ನಿಜವೆಂದರೆ, ಖಿಲಾಫತಿನ ಅನುಗ್ರಹಗಳ ವ್ಯಾಪ್ತಿಯು ನಮ್ಮ ಗ್ರಹಿಕೆಗೆ ನಿಲುಕದ್ದಾಗಿದೆ. ಇದನ್ನು ವಿಸ್ತಾರವಾಗಿ ಬರೆಯಲು ನಮ್ಮ ಲೇಖನಿಯು ಅಪರ್ಯಾಪ್ತವಾಗಿದೆ. ಆದರೆ ಸಂಕ್ಷೇಪವಾಗಿ ಹೇಳುವುದಾದರೆ, ಪ್ರವಾದಿತ್ವದ ನಂತರ ಎಲ್ಲ ವಿಧದ ಅನುಗ್ರಹಗಳು ಈ **'ಹಬುಲುಲ್ಲಾಹ್'**ದೊಂದಿಗೆ (ದೈವಿಕ ಪಾಶ) ಸಂಯೋಜಿತವಾಗಿದೆ. ಎಲ್ಲ ಒಳಿತುಗಳ ಆರ್ಜನೆಯು ಇದರಿಂದಾಗಿದೆ. ಎಲ್ಲ ಅನುಗ್ರಹಗಳು ಖಿಲಾಫತಿನ ಮುಖಾಂತರವೇ ಸಾಧ್ಯವೆಂದು ಸತ್ಯವಿಶ್ವಾಸಿಗಳು ಸಮ್ಮತಿಸುತ್ತಾರೆ. ಖಿಲಾಫತಿನ ಅನುಗ್ರಹಗಳನ್ನು ಆರ್ಜಿಸಲು ಖಿಲಾಫತಿನ ಅನುಗ್ರಹಗಳನ್ನು ಸ್ಮರಿಸುವುದು ಆವಶ್ಯ. ಇದರ ಕುರಿತು ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

"ಖಿಲಾಫತಿನ ಅನುಗ್ರಹಗಳ ಬಗ್ಗೆ ಸ್ಮರಿಸಬೇಕೆಂದು ನಾನು ಉಪದೇಶಿಸುತ್ತೇನೆ. ಒಂದು ವಿಷಯದ ಬಗ್ಗೆ ಸ್ಮರಿಸುತ್ತಿರಲು ವರ್ಷದ ಒಂದು ದಿನವನ್ನು ನಿರ್ಣಯಿಸಿ ಆಚರಿಸುವುದು ಪುರಾತನ ಸಮುದಾಯಗಳ ಒಂದು ರೀತಿಯಾಗಿದೆ. ಉದಾಹರಣೆಗೆ **'ಶಿಯಾ'** ಪಂಗಡದವರು ವರ್ಷದಲ್ಲಿ ಒಂದು ದಿನವನ್ನು ಹಝ್ರತ್ ಹುಸೈನ್‌ರ(ರ) ಶಹಾದತನ್ನು (ಜೀವತ್ಯಾಗ) ಸ್ಮರಿಸಲು ಶೋಕಾಚರಣೆಗಾಗಿ ಮೀಸಲಿಟ್ಟಿರುವುದನ್ನು ಕಾಣಬಹುದಾಗಿದೆ. ಅದೇ ರೀತಿಯಲ್ಲಿ ವರ್ಷದಲ್ಲಿ ಒಂದು ದಿವಸವನ್ನು **'ಖಿಲಾಫತ್ ಡೇ'**ಯಾಗಿ ಆಚರಿಸಲು ನಾನು "ಖುದ್ದಾಮ್"ರನ್ನು ಉಪದೇಶಿಸುತ್ತೇನೆ. ಅದರಲ್ಲಿ ಅವರು ಖಿಲಾಫತಿನ ಸ್ಥಾಪನೆಗೊಂಡದ್ದಕ್ಕೆ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಲಿ ಹಾಗೂ ತಮ್ಮ ಹಳೆಯ ಚರಿತ್ರೆಯನ್ನು ಸ್ಮರಿಸಲಿ. ಅದೇ ರೀತಿಯಲ್ಲಿ, ಈಡೇವುರುದಕ್ಕೆ ಮುಂಚಿತವಾಗಿ ಅಲ್ಲಾಹನು ನನಗೆ ತೋರಿಸಿ ಕೊಟ್ಟ ದಿವ್ಯದರ್ಶನಗಳನ್ನು ಮತ್ತು ಅವುಗಳನ್ನು ಈಡೇರಿಸಿ ಈಗಲೂ ಅವನ ಅನುಗ್ರಹಗಳು ಖಿಲಾಫತಿನೊಂದಿಗೆ ಸಂಯೋಜಿಸಲ್ಪಟ್ಟಿದೆಯೆಂದು ಅಲ್ಲಾಹನು ಸಾಬೀತುಪಡಿಸಿದನ್ನೆಲ್ಲ ವಿವರಿಸಿರಿ."

**(ಅಲ್‌ಫಝಲ್ 1 ಮೇ 1957)**

# ಕಾಲದ ಖ಼ಲೀಫರೊಂದಿಗಿನ ಬಾಂಧವ್ಯ, ಅನುಸರಣೆ ಮತ್ತು ನಮ್ಮ ಹೊಣೆಗಾರಿಕೆಗಳು

ಖಲೀಫರೊಂದಿಗಿನ ಬಾಂಧವ್ಯ ಮತ್ತು ಅವರೊಂದಿಗಿನ ನಿಷ್ಠಾವಂತಿಕೆ ಮತ್ತು ಪ್ರೀತಿ ಎಂಬುದು ಕಾಲದ ಖ಼ಲೀಫರ ಪ್ರತಿಯೊಂದು ಆದೇಶಗಳನ್ನು ಸೂಕ್ತ ಸಮಯದಲ್ಲಿ ಕೂಡಲೆ ಪಾಲನೆ ಮಾಡುವುದಾಗಿದೆ. ಅವರ ಪ್ರತಿಯೊಂದು ಸಂದೇಶಗಳಿಗೆ ಓಗೊಡುವುದು ಮತ್ತು ಅವರ ಹೆಜ್ಜೆಗೆ ಹೆಜ್ಜೆಯನ್ನಿರಿಸಿ ಗುರಿ ಸಾಧಿಸುವುದಾಗಿದೆ. ಈ ದೈವಿಕ ವ್ಯವಸ್ಥೆಯ ವಿರೋಧಿಗಳು, ಇದರಿಂದ ಬೇರ್ಪಟ್ಟವರು ಮತ್ತು ಅನುಸರಣೆಯಿಂದ ದೂರವಾದವರನ್ನು ಪವಿತ್ರ ಖುರ್‌ಆನ್ 'ಫಾಸಿಖ್' (ಧಿಕ್ಕಾರಿ) ಎಂದು ಹೇಳಿದೆ. ಹಝ್ರತ್ ಪೈಗಂಬರ್(ಸ) ಅರುಹಿರುವರು: "ತನ್ನ ಕಾಲದ 'ಇಮಾಮ್'ರ ಬೈಅತ್ ಮಾಡದವನ ಮರಣವು ಜಾಹಿಲಿಯ್ಯತ್‌ನ (ಅಜ್ಞಾನದ) ಮರಣವಾಗಿದೆ."

(ಮುಸ್ಲಿಂ–ಕಿತಾಬುಲ್ ಅಮಾರ)

ಖ಼ಲೀಫರ ಬೈಅತ್ ಮಾಡಿದ ನಂತರ ಅವರ ಆದೇಶ ಹಾಗೂ ಉಪದೇಶಗಳಿಗೆ ಅನುಸಾರವಾಗಿ ನಡೆಯದವನು ಕೂಡ ಬೈಅತ್ ಮಾಡದವನಂತೆ ಅಥವಾ ವಿರೋಧಿಯಂತೆ ಆಗಿದ್ದಾನೆ. ಬದಲಾಗಿ ಆತನು ಅದಕ್ಕಿಂತಲೂ ಹೆಚ್ಚು ಭಾಗ್ಯಹೀನನೂ ಅಲ್ಲಾಹನ ಹಿಡಿತಕ್ಕೆ ಒಳಗಾಗುವವನೂ ಆಗಿದ್ದಾನೆ.

ಖಿಲಾಫತಿನಿಂದಲೇ ಜಮಾಅತಿನ ವ್ಯವಸ್ಥೆಯು ಶಿಸ್ತುಬದ್ಧವಾಗಿರುವುದು. ಯಾಕೆಂದರೆ ಜಮಾಅತಿನ ವ್ಯವಸ್ಥೆಯು ಖ಼ಲೀಫರಿಂದ ನಿಯೋಜಿತವಾದ ವ್ಯವಸ್ಥೆಯಾಗಿದೆ. ಅದು ವಹಿಸಲ್ಪಟ್ಟ ಕಾರ್ಯಗಳನ್ನು ಸುಲಭದಲ್ಲಿ ವ್ಯವಸ್ಥೆಗೊಳಿಸಲು ಮಾಡಲಾಗಿದೆ. ಈ ವ್ಯವಸ್ಥೆಯ ಸಂಪೂರ್ಣವಾದ ಅನುಸರಣೆಯೂ ಅಗತ್ಯವಾಗಿದೆ. ಅದರೊಂದಿಗೆ ಅಂಟಿಕೊಂಡಿರಬೇಕಾದುದು ಆವಶ್ಯಕ. ಇದರಿಂದ ಬೇರ್ಪಟ್ಟು ಅನುಸರಣೆಯುಳ್ಳವರೂ ನಿಷ್ಠಾವಂತರೂ ಎಂದು ಸ್ವತಃ ಭಾವಿಸುವುದು ವ್ಯರ್ಥವಾಗಿದೆ. ಅಲ್ಲಾಹನ ದೃಷ್ಟಿಯಲ್ಲಿ ಅದು ಸ್ವೀಕಾರಾರ್ಹವಲ್ಲ; ಬದಲಾಗಿ ಅದು ಧಿಕ್ಕಾರದ ಒಂದು ಕೊಂಡಿಯಾಗಿದೆ. ಅನುಸರಣೆಯ ಪ್ರಥಮ ಹಂತವು ಖ಼ಲೀಫರು

ಹೇಳುವುದನ್ನು ಗಮನವಿಟ್ಟು ಕೇಳುವುದಾಗಿದೆ. ಅದರ ಅನ್ವೇಷಣೆಯಲ್ಲಿ ಸದಾ ಇರಬೇಕು. ಪವಿತ್ರ ಖುರ್‌ಆನಿನಲ್ಲಿ ಸತ್ಯವಿಶ್ವಾಸಿಗಳ ಜಮಾಅತಿನ ಒಂದು ವೈಶಿಷ್ಟ್ಯ **'ಸಮಿಅ್‌ನಾ ವಅತಅ್‌ನಾ'**ದ ಪದದಲ್ಲಿ ವಿವರಿಸಲಾಗಿದೆ. ಸತ್ಯವಿಶ್ವಾಸಿಗಳು ಸದಾ ಒಳಿತಿನ ವಿಷಯಗಳನ್ನು ಗಮನವಿಟ್ಟು ಆಲಿಸಿ, ಗ್ರಹಿಸಿ, ನೆನಪಿನಲ್ಲಿಟ್ಟುಕೊಂಡು ಹೃತ್ಪೂರ್ವಕವಾಗಿ ಅವುಗಳನ್ನು ಕಾರ್ಯರೂಪಕ್ಕೆ ತರುತ್ತಾರೆ. ಆಲಿಸದವನು ಅದರಂತೆ ನಡೆಯುವುದಾದರೂ ಹೇಗೆ? ಹದೀಸ್ ಶರೀಫಿನಲ್ಲಿ ಬಂದಿರುತ್ತದೆ. ಹಝ್ರತ್ ಪೈಗಂಬರ್(ಸ) ಅರುಹಿದರು:

أُوْصِيْكُمْ بِتَقْوَى اللهِ وَالسَّمْعِ وَالطَّاعَةِ

ಅಂದರೆ, "ನಾನು ನಿಮಗೆ ಅಲ್ಲಾಹನ ಭಯಭಕ್ತಿ ಕೈಗೊಳ್ಳುವರೆ ಹಾಗೂ ಆಲಿಸುವರೆ ಹಾಗೆಯೇ ಅನುಸರಿಸುವರೆ ವಸಿಯ್ಯತ್ (ಉಯಿಲು) ಮಾಡುತ್ತೇನೆ."

**(ತಿರ್ಮಿಧಿ ಕಿತಾಬುಲ್ ಈಮಾನ್ ಕಿತಾಬುಲ್ ಅಖ್ಝ್ರುಝು ಬಿಸ್ಸಿನ್ನ)**

ಇದರಿಂದ ತಿಳಿಯುವುದೇನಂದರೆ, ತಖ್ವ ಪ್ರಾಪ್ತಿಗಾಗಿ ಎರಡು ದೊಡ್ಡ ಮೆಟ್ಟಿಲುಗಳಿವೆ. ಕಿವಿಗೊಟ್ಟು ಆದೇಶವನ್ನು ಆಲಿಸುವುದು ನಂತರ ಅದನ್ನು ಕಾರ್ಯರೂಪಕ್ಕೆ ತರುವುದಾಗಿದೆ (ಅನುಸರಿಸುವುದು). ಇನ್ನೊಂದು ವರದಿ ಹೀಗಿದೆ: ಹಝ್ರತ್ ಪೈಗಂಬರ್(ಸ) ಅರುಹುತ್ತಾರೆ:

اِسْمَعُوْا وَاَطِيْعُوا

ಅಂದರೆ, "ಆಲಿಸಿರಿ ಮತ್ತು ಅನುಸರಿಸಿರಿ."

**(ಬುಖಾರಿ ಕಿತಾಬುಲ್ ಅಹ್ಕಾಮ್, ಬಾಬುಸ್ಸಮೀಅ್ ವತ್ತಾಅತ್)**

ಹಝ್ರತ್ ಅನಸ್ ಬಿನ್ ಮಾಲಿಕರಿಂದ ವರದಿಯಾಗಿದೆ – ಹಝ್ರತ್ ಪೈಗಂಬರ್(ಸ) ಅರುಹುತ್ತಾರೆ: "ಒಣ ದ್ರಾಕ್ಷೆಯ ಹಾಗೆ ಚಿಕ್ಕ ತಲೆಯಿರುವ ಕಪ್ಪು ವರ್ಣದ ಗುಲಾಮನನ್ನು ನಿಮ್ಮ ಅಧಿಕಾರಿಯನ್ನಾಗಿಸಿದರೂ ನೀವು ಆಲಿಸಿರಿ ಮತ್ತು ಅನುಸರಿಸಿರಿ."

**(ಸಹೀಹ್ ಬುಖಾರಿ, ಕಿತಾಬುಲ್ ಅಹ್ಕಾಮ್, ಬಾಬುಸ್ಸಮೀಅ್ ವತ್ತಾಅತ್ ಲಿಲ್ ಇಮಾಮ್, ಮಾಲಂ ತಕುನ್ ಮಅ್‌ಸಿಯ್ಯತ್)**

ಹಝ್ರತ್ ಇಬ್ನು ಉಮರ್ ವರದಿ ಮಾಡುತ್ತಾರೆ: ನಾನು ಹಝ್ರತ್ ಪೈಗಂಬರ್[ಸ] ಹೇಳುವುದಾಗಿ ಕೇಳಿದ್ದೇನೆ: "ಯಾರು ಅಲ್ಲಾಹನ ಅನುಸರಣೆಯಿಂದ ತನ್ನ ಕೈಯನ್ನು ಎಳೆದನೋ ಅವನು (ಅಂತ್ಯ ದಿನದಂದು) ಅಲ್ಲಾಹನ ಸನ್ನಿಧಿಯಲ್ಲಿ ಭೇಟಿಯಾಗುವಾಗ ಅವನಲ್ಲಿ ಯಾವುದೇ ಪುರಾವೆ ಇರಲಿಕ್ಕಿಲ್ಲ ಹಾಗೂ ಅವನ ಯಾವುದೇ ನೆಪ ಸ್ವೀಕಾರಾರ್ಹವಾಗಲಿಕ್ಕಿಲ್ಲ. ಕಾಲದ ಇಮಾಮರ ಬೈಅತ್ ಮಾಡದ ಅವಸ್ಥೆಯಲ್ಲಿ ಮರಣ ಹೊಂದಿದವನು ಜಾಹಿಲಿಯತ್ (ಅಜ್ಞತೆಯ) ಹಾಗೂ ಮಾರ್ಗಚ್ಯುತಿಯ ಮರಣವನ್ನು ವರಿಸಿದನು."

**(ಸಹೀಹ್ ಮುಸ್ಲಿಂ, ಕಿತಾಬ್ ಬಾಬ್ ವಜೂಬ್ ಮುಲಾಝಿಮತಿ ಜಮಾಅತುಲ್ ಮುಸ್ಲಿಮೀನ್)**

ಇನ್ನೊಂದು ಹದೀಸಿನಲ್ಲಿ ಹಝ್ರತ್ ಅಬೂಹುರೈರ[ರ] ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್[ಸ] ಅರುಹಿದರು – "ಸೌಲಭ್ಯದಲ್ಲಿಯೂ ಸಂಕಷ್ಟದಲ್ಲಿಯೂ ಸಂತೋಷದಲ್ಲಿಯೂ ಸಂತಾಪದಲ್ಲಿಯೂ ನಿಮ್ಮ ಹಕ್ಕುಗಳಿಂದ ವಂಚಿತರಾಗುವಾಗಲೂ ಇತರರೊಂದಿಗೆ ನಿಮಗಿಂತ ಉತ್ತಮವಾಗಿ ನಡೆದುಕೊಳ್ಳುವಾಗಲೂ ಒಟ್ಟಾರೆ ಎಲ್ಲ ಪರಿಸ್ಥಿತಿಗಳಲ್ಲೂ ಆಯಾಕಾಲದ ಆಡಳಿತಾಧಿಕಾರಿಯ ಆಜ್ಞೆಯನ್ನು ಆಲಿಸಿ ಅದನ್ನು ಅನುಸರಿಸುವುದು ಅವಶ್ಯ."

**(ಸಹೀಹುಲ್ ಮುಸ್ಲಿಂ. ಕಿತಾಬುಲ್ ಅಮಾರ)**

ನಂತರ ಹಝ್ರತ್ ಉಬಾದಾ ಬಿನ್ ವಲೀದ್ ತನ್ನ ಪಿತಾಮಹಾರಿಂದ ವರದಿಯಾದುದನ್ನು ಅವರ ತಂದೆಯ ಮಾತುಗಳಲ್ಲಿ ವಿವರಿಸುತ್ತಾರೆ: ನಾವು ಹಝ್ರತ್ ರಸೂಲುಲ್ಲಾಹ್‌ರ[ಸ] ಬೈಅತ್ ಈ ಕೆಳಗಿನ ಆಧಾರದಲ್ಲಿ ಮಾಡಿದೆವು– "ನಾವು ಆಲಿಸುವೆವು ಮತ್ತು ಅನುಸರಿಸುವೆವು, ಕಷ್ಟತೆಯಲ್ಲಿ, ನೆಮ್ಮದಿಯ ವೇಳೆ, ಸಂತೋಷದ ಸಮಯದಲ್ಲಿ, ದುಃಖದ ಸಂದರ್ಭದಲ್ಲಿ ಮತ್ತು ನಮ್ಮ ಹಕ್ಕುಗಳ ಬಗ್ಗೆ ಪರಿಗಣಿಸದಿರುವಾಗಲೂ ನಾವು ಜಗಳವಾಡಲಿಕ್ಕಿಲ್ಲ. ನಾವು ಎಲ್ಲಿದ್ದರೂ ಸತ್ಯವನ್ನೇ ನುಡಿಯುವೆವು. ಅಲ್ಲಾಹನ ಮಾರ್ಗದಲ್ಲಿ ನಾವು ಯಾರೊಬ್ಬರ ತೆಗಳಿಕೆಗೂ ಹೆದರಲಾರೆವು."

**(ಸಹೀಹ್ ಮುಸ್ಲಿಂ, ಕಿತಾಬುಲ್ ಅಮಾರ – ಬಾಬ್ ವಜೂಬತ್ತಾಅತಿಲ್ ಅಮ್‌ರಿ ಫೀ ಗೈರಿ ಮಅ್‌ಸಿಯ್ಯತಿ ವ ತಹ್‌ರೀಮುಹಾ ಫಿಲ್ ಮಅ್‌ಸಿಯ್ಯತಿ)**

ಒಂದು ಹದೀಸಿನಲ್ಲಿ ಬರುತ್ತದೆ, ಹಝ್ರತ್ ಅಬ್ದುಲ್ಲಾಹ್ ವಿವರಿಸುತ್ತಾರೆ: ಹಝ್ರತ್ ಪೈಗಂಬರ್[ಸ] ಅರುಹಿದರು– "ಆಲಿಸುವುದು ಮತ್ತು ಅನುಸರಿಸುವುದು ಪ್ರತಿಯೊಬ್ಬ ಮುಸ್ಲಿಮನಿಗೆ ಕಡ್ಡಾಯವಾಗಿದೆ. ಅದು ಅವನಿಗೆ ಇಷ್ಟವಿದ್ದರೂ ಇಲ್ಲದಿದ್ದರೂ. ಆದರೆ ಪಾಪ ಮಾಡಲು ಆದೇಶಿಸುವುದಾದರೆ ಅನುಸರಣೆ ಮಾಡುವ ಅಗತ್ಯವಿಲ್ಲ."

**(ಸಹೀಹುಲ್ ಬುಖಾರಿ ಕಿತಾಬುಲ್ ಅಹ್ಕಾಮ್ ಬಾಬುಸ್ಸಮೀಅ್ ವತ್ತಾಅತುಲ್ ಇಮಾಮಿ)**

ಹಝ್ರತ್ ಅಬುಹುರೈರರಿಂದ[ರ] ವರದಿಯಾಗಿದೆ: ಹಝ್ರತ್ ಪೈಗಂಬರ್[ಸ] ಅರುಹಿದರು – "ನನ್ನನ್ನು ಅನುಸರಿಸುವವನು ಅಲ್ಲಾಹನನ್ನು ಅನುಸರಿಸಿದನು. ನನ್ನನ್ನು ನಿರಾಕರಿಸಿದವನು ಅಲ್ಲಾಹನನ್ನು ನಿರಾಕರಿಸಿದನು. ನನ್ನ ಅಮೀರನನ್ನು (ನಿಯೋಜಿತ ನೇತಾರ) ಅನುಸರಿಸಿದವನು ನನ್ನನ್ನು ಅನುಸರಿಸಿದನು. ನನ್ನ ಅಮೀರನನ್ನು ನಿರಾಕರಿಸಿದವನು ನನ್ನನ್ನು ನಿರಾಕರಿಸಿದನು."

**(ಸಹೀಹ್ ಮುಸ್ಲಿಂ, ಕಿತಾಬುಲ್ ಅಮಾರ – ಬಾಬ್ ವಜೂಬತ್ತಾಅತಿಲ್ ಅಮ್‌ರಿ ಫೀ ಗೈರಿ ಮಅ್‌ಸಿಯ್ಯತಿ ವ ತಹ್‌ರೀಮುಹಾ ಫಿಲ್ ಮಅ್‌ಸಿಯ್ಯತಿ)**

ಒಬ್ಬ ಯಥಾರ್ಥ ಸತ್ಯವಿಶ್ವಾಸಿಯ ವೈಶಿಷ್ಟ್ಯವೆಂದರೆ, ಅವನು ಅಲ್ಲಾಹನ ನಿಯೋಗಿತರ ಹಾಗೂ ಅವರ ಖಲೀಫರ ಮಾರ್ಗದರ್ಶನವನ್ನು ಆಲಿಸಿದ ತಕ್ಷಣ ಅದನ್ನು ಅನುಸರಿಸುತ್ತಾನೆ ಮತ್ತು ಅದನ್ನು ಆಚರಣೆಗೆ ತರುತ್ತಾನೆ.

ಖಿಲಾಫತ್ ಮತ್ತು ಜಮಾಅತಿನ ವ್ಯವಸ್ಥೆಯ ಅನುಸರಣೆ ಮತ್ತು ನಮ್ಮ ಹೊಣೆಗಾರಿಕೆಗಳಿಗೆ ಸಂಬಂಧಿಸಿ ಖಲೀಫರ ಕೆಲವು ಮಾರ್ಗದರ್ಶನಗಳನ್ನು ಕೆಳಗೆ ವಿವರಿಸಿಲಾಗಿದೆ. ಇವುಗಳು ಈ ವಿಷಯದ ಬಗ್ಗೆ ಸಾಕಷ್ಟು ಬೆಳಕು ಚೆಲ್ಲುತ್ತವೆ:

ಹಝ್ರತ್ ಖಲೀಫತುಲ್ ಮಸೀಹ್ ಸಾನಿ[ರ] ಹೇಳುತ್ತಾರೆ:

"ಮತ್ತೊಮ್ಮೆ ಅಲ್ಲಾಹನು ತನ್ನ ಅನುಗ್ರಹದಿಂದ ಮುಸ್ಲಿಮರನ್ನು ಪುನರುಜ್ಜೀವಂತಗೊಳಿಸಲು ಹಝ್ರತ್ ಮಸೀಹ್ ಮೌಊದ್‌ರ[ಅ]

ಮುಖಾಂತರ ಜಮಾಅತ್ ಅಹ್ಮದಿಯಾದಲ್ಲಿ ಖಿಲಾಫತನ್ನು ಸ್ಥಾಪಿಸಿದ್ದಾನೆ. ಆದ್ದರಿಂದ ನೀವು ಸದಾ ತಮ್ಮನ್ನು ಖಿಲಾಫತಿನೊಂದಿಗೆ ಸಂಯೋಜಿಸಿಕೊಂಡಿರಿ ಹಾಗೂ ಖಿಲಾಫತನ್ನು ನೆಲೆನಿಲ್ಲಿಸಲು ತ್ಯಾಗವನ್ನು ಮಾಡುತ್ತಾ ಹೋಗಿರಿ ಎಂದು ನಾನು ನನ್ನ ಜಮಾಅತನ್ನು ಉದ್ದೇಶಿಸಿ ಹೇಳುತ್ತೇನೆ. ಹಾಗಾದರೆ, ಖಿಲಾಫತ್ ನಿಮ್ಮಲ್ಲಿ ಶಾಶ್ವತವಾಗಿರುವುದು. ನೀವು ಇಚ್ಛಿಸುತ್ತಿದ್ದರೆ ನಿಮ್ಮ ಕೈಯಲ್ಲಿ ನೀಡಲ್ಪಟ್ಟ ಖಿಲಾಫತನ್ನು ನೆಲೆನಿಲ್ಲಿಸಬಹುದಾಗಿತ್ತು ಎಂದು ಹೇಳಲಿಕ್ಕಾಗಿ ಅಲ್ಲಾಹನು ಖಿಲಾಫತನ್ನು ನಿಮ್ಮ ಕೈಯಲ್ಲೇ ನೀಡಿರುವನು. ಅಲ್ಲಾಹನು ಇಚ್ಛಿಸುತ್ತಿದ್ದರೆ ಅದನ್ನು ದಿವ್ಯವಾಣಿಯ ಮುಖಾಂತರವೂ ನೆಲೆನಿಲ್ಲಿಸಬಹುದಾಗಿತ್ತು. ಆದರೆ ಅವನು ಹಾಗೆ ಮಾಡಲಿಲ್ಲ. ಬದಲಾಗಿ ನೀವು ಖಿಲಾಫತನ್ನು ನೆಲೆನಿಲ್ಲಿಸಲು ಇಚ್ಛಿಸುವಿರಾದರೆ, ನಾನು ಸಹ ಅದನ್ನು ನೆಲೆನಿಲ್ಲಿಸುವೆನು ಎಂದು ಅಲ್ಲಾಹನು ಹೇಳಿದನು. ಎಂದರೆ, ನಿಮಗೆ ಖಿಲಾಫತ್ ಬೇಕೋ ಬೇಡವೋ ಎಂದು ನಿಮ್ಮ ಬಾಯಿಂದಲೇ ಹೇಳಿಸುತ್ತಿದ್ದಾನೆ. ಈಗ ನೀವು ನಿಮ್ಮ ಬಾಯಿಯನ್ನು ಮುಚ್ಚಿಟ್ಟರೆ ಅಥವಾ ಖಿಲಾಫತಿನ ಚುನಾವಣೆಯಲ್ಲಿ ಅರ್ಹತೆಯನ್ನು ಪರಿಗಣಿಸದಿದ್ದರೆ ಈ ಅನುಗ್ರಹವನ್ನು ಕಳಕೊಳ್ಳುವಿರಿ. ಆದ್ದರಿಂದ ಮುಸ್ಲಿಮರ ವಿನಾಶದ ಕಾರಣದ ಕುರಿತು ಯೋಚಿಸಿರಿ ಮತ್ತು ಮರಣಕ್ಕೆ ತುತ್ತಾಗುವುದರಿಂದ ಸ್ವತಃ ತಪ್ಪಿಸಿಕೊಳ್ಳಿರಿ. ನಿಮ್ಮ ವಿವೇಚನಾಶಕ್ತಿ ತೀಕ್ಷ್ಣವಾಗಿರಬೇಕು ಹಾಗೂ ಮನೋದಾರ್ಢ್ಯವು ಉನ್ನತವಾಗಿರಬೇಕು. ನೀವು ನದಿಯ ನೀರಿನ ಪ್ರವಾಹದ ದಿಕ್ಕನ್ನು ಬದಲಿಸುವಂತಹ ಬಂಡೆಕಲ್ಲಿನಂತಾಗಿರಬಾರದು. ಬದಲಾಗಿ ನೀವು ನೀರನ್ನು ಸುಲಭದಲ್ಲಿ ಹರಿಯಲು ಬಿಡುವಂತಹ ಕಾಲುವೆಯಂತಾಗಬೇಕು. ಹಝ್ರತ್ ಪೈಗಂಬರರ(ಸ) ಮುಖಾಂತರ ನಿಮಗೆ ದೊರೆತಂತಹ ಅಲ್ಲಾಹನ ಅನುಗ್ರಹಗಳನ್ನು ಸರಾಗವಾಗಿ ಮುಂದಕ್ಕೆ ಸಾಗಿಸುವ ಸುರಂಗದಂತೆ ಕೆಲಸ ನಿರ್ವಹಿಸಿರಿ. ನೀವು ಹೀಗೆ ಮಾಡುವುದರಲ್ಲಿ ಯಶಸ್ಸು ಗಳಿಸುವಿರಾದರೆ ನೀವು ಶಾಶ್ವತವಾಗಿ ಜೀವಿಸುವಂತಹ ಒಂದು ಸಮುದಾಯವಾಗುವಿರಿ. ಆದರೆ ನೀವು ಆ ದೈವಿಕ ಅನುಗ್ರಹಗಳ ಮಾರ್ಗದಲ್ಲಿ ತಡೆಯುಂಟುಮಾಡುವವರಾದರೆ ಅಥವಾ ಅದರ ಹಾದಿಯಲ್ಲಿ ಕಲ್ಲಿನಂತೆ ಎದ್ದು ನಿಲ್ಲುವವರಾದರೆ ಅದು ನಿಮ್ಮ ಸಮುದಾಯದ ವಿನಾಶದ ಸಮಯವಾಗುವುದು. ಅನಂತರ ನಿಮಗೆ ದೀರ್ಘಾಯುಷ್ಯ ಎಂದಿಗೂ

ಲಭಿಸಲಾರದು ಹಾಗೂ ಗತಕಾಲದ ಸಮುದಾಯ ನಿರ್ನಾಮವಾದ ರೀತಿಯಲ್ಲೇ ನೀವೂ ನಿರ್ನಾಮವಾಗುವಿರಿ."

**(ತಫ್ಸೀರ್ ಸೂರತುನ್ನಮ್ಲ್, ತಫ್ಸೀರ್ ಕಬೀರ್ ಸಂ. 7 ಪುಟ 429–430)**

"ಅಲ್ಲಾಹನ ಪ್ರವಾದಿಯ ಧ್ವನಿಯು ನಿಮ್ಮ ಕಿವಿಗೆ ಮುಟ್ಟಿದ ಕೂಡಲೆ ಅದಕ್ಕೆ ಉತ್ತರ ಕೊಡುವುದು ನಿಮ್ಮ ಕರ್ತವ್ಯವಾಗಿದೆ. ಅದರಂತೆ ನಡೆಯಲು ಧಾವಿಸಿರಿ. ಅದರಲ್ಲೇ ನಿಮ್ಮ ಎಲ್ಲ ಪ್ರಗತಿಯು ಅಡಕವಾಗಿರುವುದು. ನೀವು ನಮಾಝ್ ನಿರ್ವಹಿಸುವ ಸಂದರ್ಭದಲ್ಲಿ ಕೂಡ ರಸೂಲರ ಕರೆ ಕೇಳಿಬರುವುದಾದರೆ, ನಮಾಝನ್ನು ಕೊನೆಗೊಳಿಸಿ ಅಲ್ಲಾಹನ ರಸೂಲರ ದನಿಗೆ ಉತ್ತರಿಸುವುದು ನಿಮ್ಮ ಕರ್ತವ್ಯವಾಗಿದೆ. ಈ ಆದೇಶವು ಅದರ ಸ್ಥಾನಕ್ಕನುಸರಿಸಿ ಪ್ರವಾದಿಯ ಖಲೀಫರಿಗೂ ಅನ್ವಯವಾಗುತ್ತದೆ ಮತ್ತು ಅವರ ಕರೆಗೆ ಉತ್ತರಿಸಲು ಒಟ್ಟು ಸೇರುವುದು ಅವಶ್ಯವಾಗುತ್ತದೆ."

**(ತಫ್ಸೀರ್ ಮನ್ಸಬೆ ಖಿಲಾಫತ್ ಉಲ್ಲೇಖ ನಿಝಾಮೆ ಖಿಲಾಫತ್ ಕೆ ಬರಕಾತ್ ಔರ್ ಹಮಾರಿ ಝಿಮೆದಾರಿಯಾಂ ಪುಟ. 42)**

"ಸಂಘಟಿತ ಜಮಾಅತುಗಳಿಗೆ ಕೆಲವು ಜವಾಬ್ದಾರಿಗಳಿರುತ್ತವೆ. ಅದಿಲ್ಲದೆ ಅವುಗಳ ಚಟುವಟಿಕೆಗಳು ಸರಿಯಾಗಿ ನಿರ್ವಹಿಸಲು ಸಾಧ್ಯವಿಲ್ಲ.... ಆ ಷರತ್ತು ಹಾಗೂ ಜವಾಬ್ದಾರಿಗಳಲ್ಲಿ ಒಂದು ಪ್ರಮುಖವಾದ ಷರತ್ತು ಹಾಗೂ ಜವಾಬ್ದಾರಿ ಏನೆಂದರೆ, ಇಮಾಮರ ಕೈಯಲ್ಲಿ ಬೈಅತ್ ಮಾಡಿದ ನಂತರ ಇಮಾಮರು ಏನು ಹೇಳುತ್ತಾರೆಂದು ನೋಡುತ್ತಿರಬೇಕು. ಎಲ್ಲ ಕೆಲಸಗಳು ಅವರಿಗೆ ವಿಧೇಯವಾಗಿ ನಡೆಯಬೇಕು..... ಇಮಾಮ್ ತನ್ನ ಪದವಿಯಲ್ಲಿ ನಿಂತುಕೊಂಡು ಆದೇಶ ನೀಡುವಾಗ ಅನುಯಾಯಿಗಳು ತಮ್ಮ ಸ್ಥಾನದಲ್ಲಿದ್ದುಕೊಂಡು ಅದನ್ನು ಪಾಲಿಸಬೇಕು."

**(ಅಲ್‌ಫಝಲ್, 5 ಜೂನ್ 1937, ನಿಝಾಮೆ ಖಿಲಾಫತ್ ಕೆ ಬರಕಾತ್ ಔರ್ ಹಮಾರಿ ಝಿಮೆದಾರಿಯಾಂ ಎಂಬ ಪುಸ್ತಕದಿಂದ ಉಲ್ಲೇಖಿತ. ಪುಟ 42–43)**

"ಖಿಲಾಫತ್ ಎಂದರೆ **'ಹಬ್‌ಲುಲ್ಲಾಹ್'** (ಅಲ್ಲಾಹನ ಪಾಶವಾಗಿದೆ). ಆ

ಹಗ್ಗವನ್ನು ಹಿಡಿದು ನೀವು ಪ್ರಗತಿಯನ್ನು ಪಡೆಯಬಹುದು ಎಂಬ ವಿಷಯವನ್ನು ಚೆನ್ನಾಗಿ ನೆನಪಿನಲ್ಲಿಡಿರಿ. ಅದನ್ನು ಕೈಬಿಡುವವನು ನಾಶ ಹೊಂದುವನು."

**(ದರ್‌ಸುಲ್ ಖುರ್‌ಆನ್ 1ನೇ ಮಾರ್ಚ್ 1912, ಉಲ್ಲೇಖ: ದರ್‌ಸುಲ್ ಖುರ್‌ಆನ್ ಪುಟ. 67–84, ಖಾದಿಯಾನಿನಿಂದ ಮುದ್ರಿತ ನವೆಂಬರ್ 1912)**

"ನಮ್ಮ ವಿಶ್ವಾಸದ ಪ್ರಕಾರ **'ಖಿಲಾಫತ್'** ಇಸ್ಲಾಮಿನ ಅತ್ಯಂತ ಸುಪ್ರಧಾನವಾದ ಘಟಕವಾಗಿದೆ. ಅದನ್ನು ಧಿಕ್ಕರಿಸುವವನು ಇಸ್ಲಾಮಿನ ವಿರೋಧಿಯಾಗಿದ್ದಾನೆ. ನಮ್ಮ ಈ ಅಭಿಪ್ರಾಯವು ಸಮಂಜಸವಾಗಿದ್ದರೆ, ಈ ವಿಶ್ವಾಸವನ್ನು ಅಂಗೀಕರಿಸುವವರಿಗೆ **'ಅಲ್ ಇಮಾಮು ಜುನ್ನತುನ್ ಯುಖಾತಿಲು ಮಿಂವರಾಯಿಹೀ'** ಎಂಬ ಆದೇಶವು ಅತ್ಯಂತ ಮಹತ್ವಪೂರ್ಣವಾಗುವುದು. ಯಾಕೆಂದರೆ ಖಿಲಾಫತಿನ ಉದ್ದೇಶವು ಮುಸ್ಲಿಮರಲ್ಲಿ ಪರಸ್ಪರ ಐಕ್ಯತೆ ಮತ್ತು ಅಖಂಡತೆಯನ್ನು ರೂಢಿಸುವುದಾಗಿದೆ. ಇದು ಖಿಲಾಫತಿನ ಆದೇಶಗಳನ್ನು ಪರಿಪೂರ್ಣವಾದ ರೀತಿಯಲ್ಲಿ ಅನುಸರಿಸುವುದಾದರೆ ಮಾತ್ರ ಸಾಧ್ಯವಾಗುವುದು. ನಮಾಝಿನಲ್ಲಿ ಇಮಾಮರ ರುಕೂವಿನೊಂದಿಗೆ ರುಕೂಅ್, ಖಿಯಾಮಿನೊಂದಿಗೆ ಖಿಯಾಮ್ ಹಾಗೂ ಸುಜೂದಿನೊಂದಿಗೆ ಸುಜೂದ್ ಮಾಡಲಾಗುವ ರೀತಿಯಲ್ಲಿ ಆಯಾಕಾಲದ ಖಲೀಫರ ನಿರ್ದೇಶನಾನುಸಾರ ಜಮಾಅತಿನ ಎಲ್ಲರೂ ನಡೆಯಬೇಕಾಗಿದೆ. ಅವರ ಆದೇಶಕ್ಕೆ ಮುಂಚಿತವಾಗಿ ದಾಪುಗಾಲು ಹಾಕಲು ಶ್ರಮಿಸಬಾರದು. ಕೆಲವೇ ಹಿಂಬಾಲಕರಿರುವ ಇಮಾಮುಸ್ಸಲಾತ್ (ನಮಾಝಿಗೆ ನೇತೃತ್ವ ನೀಡುವ ವ್ಯಕ್ತಿ) ಕುರಿತು ಹಝ್ರತ್ ಪೈಗಂಬರ್[ಸ] ಹೇಳುವುದನ್ನು ನೋಡಿರಿ: ಇಮಾಮರ ರುಕೂಅ್ ಹಾಗೂ ಸುಜೂದಿಗೆ ಮುಂಚಿತವಾಗಿ ಹಾಗೆ ಮಾಡುವವರು ಅಥವಾ ಇಮಾಮರಿಗೆ ಮುಂಚಿತವಾಗಿ ಸಜದದಿಂದ ತಲೆ ಎತ್ತುವವರು ಪಾಪಿಯಾಗಿದ್ದಾರೆ. ಹೀಗಿರುವಾಗ ಇಡೀ ಸಮುದಾಯದ ಇಮಾಮರಾಗಿರುವವರ ಕೈಯಲ್ಲಿ ಎಲ್ಲರೂ ಬೈಅತ್ ಮಾಡಿರುವಾಗ ಅವರ ಅನುಸರಣೆ ಎಷ್ಟೊಂದು ಮುಖ್ಯವಾಗಿದೆಯೆಂದು ಅರಿಯಬೇಕಾಗಿದೆ..... ಆದ್ದರಿಂದ ನೀವೆಲ್ಲರೂ ಇಮಾಮರ ನಿರ್ದೇಶನಾನುಸಾರ ಚಲಿಸಿರಿ ಅವರ ಮಾರ್ಗದರ್ಶನದಿಂದ ಲವಲೇಶವಾದರೂ ವಿಚಲಿತರಾಗದಿರಿ. ಅವರು ಚಲಿಸಲು

ನಿರ್ದೇಶಿಸುವಾಗ ನಡೆಯಿರಿ. ಅವರು ನಿಲ್ಲಲ್ಲು ಹೇಳುವಾಗ ನಿಲ್ಲಿರಿ! ಅವರು ಎಲ್ಲಿಗೆ ಹೋಗಲು ಹೇಳಿದರೂ ಅಲ್ಲಿಗೆ ಹೋಗಿರಿ. ಅವರು ಹಿಮ್ಮೆಟ್ಟಲು ಹೇಳುವಾಗ ಹಿಂದೆ ಸರಿಯಿರಿ"

**(ಅನ್ವಾರುಲ್ ಉಲೂಂ, ಸಂ. 14, ಪುಟ 515–516 – ಖಿಯಾಮೆ ಅಮನ್ ಓರ್ ಖಾನೂನ್ ಕಿ ಪಾಬಂದಿ ಕೆ ಮುತಅಲ್ಲಿಕ್ ಜಮಾಅತ್ ಅಹ್ಮದಿಯಾ ಕಾ ಫರ್‌ಝ್)**

"ಮರದಲ್ಲಿರುವ ಕೊಂಬೆಯು ಫಲ ನೀಡುತ್ತದೆ, ಆದರೆ ಮರದಿಂದ ವಿಚ್ಛೇದಿಸಲ್ಪಟ್ಟಂತಹ ಕೊಂಬೆಗೆ ಫಲ ನೀಡಲು ಸಾಧ್ಯವಿಲ್ಲ. ಅದೇ ರೀತಿಯಲ್ಲಿ ತಮ್ಮನ್ನು ತಾವು ಖಿಲಾಫತಿನೊಂದಿಗೆ ಸಂಬಂಧವೇರ್ಪಡಿಸುವವರು ಜಮಾಅತಿಗೆ ಪ್ರಯೋಜನಕರವಾಗಿ ಕೆಲಸ ನಿರ್ವಹಿಸುವಂತಾಗುತ್ತಾರೆ. ತನ್ನನ್ನು ಇಮಾಮರೊಂದಿಗೆ ಸಂಬಂಧವೇರ್ಪಡಿಸಿಟ್ಟುಕೊಳ್ಳದವನಲ್ಲಿ ಲೌಕಿಕವಾದ ಎಷ್ಟೇ ಜ್ಞಾನವಿದ್ದರೂ ಅವನಿಂದ ಜಮಾಅತಿಗೆ ಯಾವುದೇ ಪ್ರಯೋಜನವಿಲ್ಲ. ಆದ್ದರಿಂದ ನೀವು ಅಭಿವೃದ್ಧಿಯನ್ನು ಪಡೆಯಬೇಕಿದ್ದರೆ ಹಾಗೂ ಲೌಕಿಕವಾದ ಜಯವನ್ನು ಗಳಿಸಬೇಕಿದ್ದರೆ ನೀವು ಖಿಲಾಫತಿನೊಂದಿಗೆ ಬಾಂಧವ್ಯವನ್ನೇರ್ಪಡಿಸಿಕೊಳ್ಳಿರಿ ಎಂಬುದೇ ನನ್ನ ಉಪದೇಶ ಮತ್ತು ಸಂದೇಶವಾಗಿದೆ. ಈ ಪಾಶವನ್ನು ಗಟ್ಟಿಯಾಗಿ ಹಿಡಿದುಕೊಳ್ಳಿರಿ. ನಮ್ಮ ಎಲ್ಲ ಅಭಿವೃದ್ಧಿಯ ಬೇರು ಖಿಲಾಫತಿನೊಂದಿಗೆ ಸಂಬಂಧವಿರಿಸುವುದರಲ್ಲಿ ಮಾತ್ರವಾಗಿದೆ ಇರುವುದು."

**(ಅಲ್‌ಫಝ್ಲ್ ಇಂಟರ್‌ನ್ಯಾಷನಲ್ 23–30 ಮೇ 2003 ಪುಟ 1)**

"ಖಲೀಫರು ಬೋಧಕರಾಗಿದ್ದಾರೆ. ಜಮಾಅತಿನ ಪ್ರತಿಯೊಬ್ಬರು ಅವರ ಶಿಷ್ಯರಾಗಿದ್ದಾರೆ. ಖಲೀಫರಿಂದ ಹೊರಡುವ ಪ್ರತಿಯೊಂದು ಮಾತನ್ನು ಕಾರ್ಯರೂಪಕ್ಕೆ ತರದೆ ಇರಬಾರದು."

**(ಅಲ್‌ಫಝ್ಲ್ 2 ಮಾರ್ಚ್ 1946)**

"ಸ್ನೇಹಿತರೇ, ಎಚ್ಚರಗೊಳ್ಳಿರಿ. ತಮ್ಮ ಸ್ಥಾನವನ್ನು ಅರಿತುಕೊಳ್ಳಿರಿ. ಲೋಕದ ಯಾವುದೇ ಕಡೆಯಲ್ಲಿ ಕಾಣದಂತಹ ಅನುಸರಣೆಯ ಉದಾತ್ತ ಮಾದರಿಯನ್ನು ತೋರಿಸಿರಿ! ಕನಿಷ್ಠ ಪಕ್ಷ ಮುಂದಕ್ಕಾದರೂ ಪರಿಪೂರ್ಣವಾಗಿ ನೂರರಲ್ಲಿ

ನೂರರಷ್ಟು ಅನುಸರಣೆಯ ಮಾದರಿಯನ್ನು ತೋರಿಸುವರೆ ಪರಿಶ್ರಮಿಸಿರಿ! ಅಲ್ಲಾಹನು ನಿಮ್ಮ ಸುರಕ್ಷೆಗಾಗಿ ನಿರ್ಮಿಸಿದಂತಹ ಈ ರಕ್ಷಾ ಕವಚದ ಹೊರಗೆ ಯಾವುದೇ ಶರೀರವು ಹೋಗದಿರಲಿ. **'ಅಲ್ ಇಮಾಮು ಜುನ್ನತುನ್ ಯುಖಾತಿಲು ಮಿಂವರಾಯಿಹೀ'** (ಇಮಾಮ್ ಗುರಾಣಿಯಾಗಿರುತ್ತಾರೆ, ಅವರ ಹಿಂದೆ ನಿಂತುಕೊಂಡು ಹೋರಾಡಬೇಕು.) ಎಂಬ ನಬಿವಚನ ಪ್ರಕಾರ ಹಝ್ರತ್ ಪೈಗಂಬರರ(ಸ) ಆತ್ಮ ಆನಂದಗೊಳ್ಳುವ ರೀತಿಯಲ್ಲಿ ಕಾರ್ಯನಿರ್ವಹಿಸಿರಿ."

**(ಅನ್ವಾರುಲ್ ಉಲೂಂ, ಸಂ. 14, ಪುಟ 525)**

"ಖಿಲಾಫತಿನ ಅರ್ಥವೇನೆಂದರೆ, ಖಲೀಫರಿಂದ ಯಾವುದೇ ನಿರ್ದೇಶನ ಬಂದ ಕೂಡಲೇ ತಮ್ಮೆಲ್ಲ ಕಾರ್ಯಯೋಜನೆ, ಸಲಹೆ ಸೂಚನೆಗಳನ್ನು ಬದಿಗೊತ್ತಿ ಖಲೀಫರಿಂದ ಆದೇಶಿಸಲ್ಪಟ್ಟಂತಹ ಕಾರ್ಯಯೋಜನೆ, ಸಲಹೆ ಸೂಚನೆಗಳು ಮಾತ್ರ ಪ್ರಯೋಜನಕ್ಕೆ ಬರುವುದೆಂದು ಅರಿಯಬೇಕಾಗಿದೆ. ಜಮಾಅತಿನಲ್ಲಿ ಇಂತಹ ಒಂದು ಅವಸ್ಥೆ ಉಂಟಾಗುವ ವರೆಗೆ ಎಲ್ಲ ತರದ ಧರ್ಮೋಪದೇಶಗಳು, ಕಾರ್ಯಯೋಜನೆಗಳು ಮತ್ತು ಉಪಾಯಗಳು ನಿರರ್ಥಕವೂ ವಿಫಲವೂ ಆಗಿವೆ."

**(ಖುತ್‌ಬ ಜುಮುಅ 24 ಜನವರಿ 1936; ಅಲ್‌ಫಝ್ಲ್ 31 ಜನವರಿ 1936, ಪುಟ 9)**

"ಇಮಾಮರ ಹಾಗೂ ಖಲೀಫರ ಅಗತ್ಯ ಯಾಕೆಂದರೆ, ಸತ್ಯವಿಶ್ವಾಸಿ ತನ್ನ ಹೆಜ್ಜೆಯಿರಿಸುವಾಗ ಖಲೀಫರನ್ನು ಅನುಸರಿಸಿಕೊಂಡು ಅವರ ಇಚ್ಛೆ ಮತ್ತು ಇಂಗಿತಕ್ಕನುಸಾರ ಹೆಜ್ಜೆ ಹಾಕುತ್ತಾನೆ. ತನ್ನ ಕಾರ್ಯಯೋಜನೆಗಳನ್ನು ಖಲೀಫರ ಕಾರ್ಯಯೋಜನೆಗಳ ಅನುಸಾರವಾಗಿಸಲು ಶ್ರಮಿಸುತ್ತಾನೆ. ತನ್ನ ಉದ್ದೇಶವನ್ನು ಅವರ ಉದ್ದೇಶದಂತೆಯೂ ತನ್ನ ಆಕಾಂಕ್ಷೆಯನ್ನು ಅವರ ಆಕಾಂಕ್ಷೆಯಂತೆಯೂ ತನ್ನ ಎಲ್ಲ ಸಾಧನ ಸಲಕರಣೆಗಳನ್ನು ಅವರಿಗೆ ವಿಧೇಯವಾಗಿರಿಸಲು ಶ್ರಮಿಸುತ್ತಾನೆ. ಈ ಒಂದು ಸ್ಥಾನದಲ್ಲಿ ಒಬ್ಬ ಸತ್ಯವಿಶ್ವಾಸಿ ನೆಲೆನಿಲ್ಲುವನಾದರೆ ಅವನಿಗೆ ಯಶಸ್ಸು ಹಾಗೂ ಗೆಲುವು ಸುನಿಶ್ಚಿತವಾಗಿದೆ."

**(ಅಲ್‌ಫಝ್ಲ್ 4 ಸಪ್ಟೆಂಬರ 1937 – ನಿಝಾಮೆ ಖಿಲಾಫತ್ ಕಿ ಬರಕಾತ್ ಔರ್ ಹಮಾರಿ ಝಿಮೆದಾರಿಯಾಂ ಎಂಬ ಪುಸ್ತಕದಿಂದ ಉದ್ಧೃತ ಪುಟ 44–45)**

"ನೆನಪಿಡಿರಿ, ಸತ್ಯವಿಶ್ವಾಸವೆಂದರೆ, ದೇವನಿಯೋಜಿತನಾದ ಪ್ರತಿನಿಧಿಯಿಂದ ಹೊರಡುವ ಪ್ರತಿಯೊಂದು ದನಿಯನ್ನು ಅನುಸರಿಸುವುದು ಹಾಗೂ ಪಾಲಿಸುವುದಾಗಿದೆ."

**(ಅಲ್‌ಫಝಲ್ 15 ಸೆಪ್ಟೆಂಬರ್ 1994 – ನಿಝಾಮೆ ಖಿಲಾಫತ್ ಕಿ ಬರಕಾತ್ ಔರ್ ಹಮಾರಿ ಝಿಮೆದಾರಿಯಾಂ ಎಂಬ ಪುಸ್ತಕದಿಂದ ಉದ್ಧೃತ, ಪುಟ 45)**

"ಅಲ್ಲಾಹನು ಇಸ್ಲಾಮನ್ನು ನೆಲೆನಿಲ್ಲಿಸಲು ನಿಯೋಜಿಸಿದ ವ್ಯಕ್ತಿಯ ಕೈಯಲ್ಲಿ ಬೈಅತ್ ಮಾಡದೆ ಒಬ್ಬ ವ್ಯಕ್ತಿ ತಾನು ಮಸೀಹ್ ಮೌಊದ್‌ರನ್ನು[ಅ] ನಂಬುತ್ತೇನೆಂದೂ ಅಹ್ಮದಿಯತಿನಲ್ಲಿ ವಿಶ್ವಾಸವಿರಿಸುತ್ತೇನೆಂದೂ ಸಾವಿರ ಸಲ ಹೇಳಿದರೂ ಅಲ್ಲಾಹನ ಸನ್ನಿಧಿಯಲ್ಲಿ ಅವನ ಈ ಉದ್ಘೋಷಣೆಗೆ ಯಾವುದೇ ಬೆಲೆ ಇಲ್ಲ. ಜಮಾಅತಿನ ಪ್ರತಿಯೊಬ್ಬನು ಉನ್ಮತ್ತರಂತೆ ಇಮಾಮರನ್ನು ಅನುಸರಿಸಿ ಅವರ ಅನುಸರಣೆಯಲ್ಲಿ ತನ್ನ ಪ್ರತಿಯೊಂದು ಕ್ಷಣವನ್ನು ವಿನಿಯೋಗಿಸುವ ತನಕ ಶ್ರೇಷ್ಠತೆಯನ್ನೂ ಹಿರಿಮೆಯನ್ನೂ ಪಡೆಯಲು ಅರ್ಹನಾಗುವುದಿಲ್ಲ."

**(ಅಲ್‌ಫಝಲ್ 15 ನವೆಂಬರ್ 1946)**

ಹಝ್ರತ್ ಖಲೀಫತುಲ್ ಮಸೀಹ್ ಸಾನಿ[ರ] ಹೇಳುತ್ತಾರೆ: "ನಿಸ್ಸಂದೇಹವಾಗಿಯೂ ನಾನು ನಬಿಯಲ್ಲ; ಆದರೆ ನಾನು ನುಬುವ್ವತಿನ ಹೆಜ್ಜೆಯಲ್ಲಿ ಅವರ ಸ್ಥಾನದಲ್ಲಿ ನಿಂತಿರುವೆನು. ನನ್ನ ಅನುಸರಣೆಯಿಂದ ದೂರವಾಗುವವನು ಖಂಡಿತವಾಗಿಯೂ ನಬಿಯ ಅನುಸರಣೆಯಿಂದ ದೂರವಾಗುತ್ತಾನೆ.... ನನ್ನ ಅನುಸರಣೆ ಹಾಗೂ ವಿಧೇಯತೆಯಲ್ಲಿ ಅಲ್ಲಾಹನ ಅನುಸರಣೆ ಹಾಗೂ ವಿಧೇಯತೆಯಿದೆ."

**(ಅಲ್‌ಫಝಲ್ 4 ಸೆಪ್ಟೆಂಬರ್ 1937)**

"ಖಲೀಫರ ಆದೇಶಗಳನ್ನು ತಿರಸ್ಕರಿಸುವವನು ಅಲ್ಲಾಹನ ಹಾಗೂ ಅವನ ಪ್ರವಾದಿಯನ್ನು ತಿರಸ್ಕರಿಸುವ ಅಪರಾಧಿಗೆ ಸಮವಾಗಿರುತ್ತಾನೆ. ಇದಕ್ಕೆ ಯಾವುದೇ ಶಿಕ್ಷೆಯನ್ನು ಶರೀಅತ್ ನಿಶ್ಚಯಿಸಲಿಲ್ಲವಾದರೂ ಸತ್ಯವಿಶ್ವಾಸಿಯಾದವರ ದೃಷ್ಟಿಯಲ್ಲಿ ಅವಿಧೇಯನಾಗಿರುವುದೇ ಒಂದು ಬಗೆಯ ಶಿಕ್ಷೆಯಾಗಿದೆ. ಖಲೀಫರ

ಆದೇಶಗಳನ್ನು ಪಾಲಿಸಲಿಲ್ಲ ಎಂಬ ಪ್ರಜ್ಞೆಯು ಸ್ವಯಂ ಒಂದು ಶಿಕ್ಷೆಯಾಗಿದೆ. ಬೇರೆ ರೀತಿಯಲ್ಲಿ ಸಂದರ್ಭಕ್ಕನುಸಾರವಾಗಿ ಶಿಕ್ಷಿಸಲಾಗುವುದಾದರೂ ಯಥಾರ್ಥವಾದ ಶಿಕ್ಷೆಯೂ ಇದೇ ಆಗಿದೆ. ಅಲ್ಲಾಹನಿಂದ ನಿಯುಕ್ತವಾದಂತಹ ಜಮಾಅತ್ ಹಾಗೂ ಖ಼ಲೀಫರಿಗೆ ಅವಿಧೇಯನಾಗಿರುವುದಕ್ಕಿಂತ ದೊಡ್ಡ ಶಿಕ್ಷೆ ಬೇರೆ ಏನಿದೆ? ಅಲ್ಲಾಹನ ಹಾಗೂ ಅವನ ಪ್ರವಾದಿಯ ಅತೃಪ್ತಿಯೇ ದೊಡ್ಡ ಶಿಕ್ಷೆಯಾಗಿದೆ. ಅಲ್ಲಾಹನ ಅಸಂತುಷ್ಟಿಯನ್ನೇ ನರಕ ಶಿಕ್ಷೆಯೆಂದು ಹೇಳುವುದು. ಆದೇಶದ ಅವಿಧೇಯತೆಗೆ ಶಿಕ್ಷೆ ನಿಶ್ಚಯಿಸಿಲಾಗಿಲ್ಲ ಎಂಬ ಕಾರಣದಿಂದ ಅದು ಆದೇಶವಲ್ಲವೆಂದು ಹೇಳುವಂತಿಲ್ಲ."

**(ರಿಪೋರ್ಟ್ ಮಜ್ಲಿಸ್ ಮುಶಾವರಾತ್ 1942, ಪುಟ 25;**

**ಖಿಲಾಫತ್ ಅಲಾ ಮಿನ್‌ಹಾಜ್‌ನ್ನುಬುವ್ವತ್ ಸಂ. 3 ಪುಟ 558)**

ಹಝ್ರ಼ತ್ ಖ಼ಲೀಫತುಲ್ ಮಸೀಹ್ ಖಾಮಿಸ್ ಅಯ್ಯದುಹುಲ್ಲಾಹು ತಆಲ ಬಿನಸ್‌ರಿಹಿಲ್ ಅಝೀಝ್ ಹೇಳುತ್ತಾರೆ:

"ಅಲ್ಲಾಹನು ಖ಼ಲೀಫರನ್ನು ನಿಯಮಿಸುತ್ತಾನೆ ಹಾಗೂ ಅವರು ಅವರ (ಜಮಾಅತಿನ ವ್ಯಕ್ತಿಗಳ) ಭಯವನ್ನು ದೂರೀಕರಿಸುತ್ತಾರೆ. ಒಬ್ಬ ವ್ಯಕ್ತಿ ಇತರರ ಇಚ್ಛೆಯನುಸಾರ ಸದಾ ಒಬ್ಬ ನೌಕರನಂತೆ ಕೆಲಸ ಮಾಡುವನಾದರೆ ಅವನಲ್ಲಿ ದೇವಭಯ ಹಾಗು ಏಕದೇವಾರಾಧನೆಯ ವಿಷಯವಾದರೂ ಏನಿದೆ. ಖ಼ಲೀಫರನ್ನು ಅಲ್ಲಾಹನು ಮಾಡುತ್ತಾನೆ ಹಾಗೂ ಅವರ ಭಯವನ್ನು ಶಾಂತಿಯಲ್ಲಿ ಬದಲಿಸುತ್ತಾನೆ. ಅವರು ಅಲ್ಲಾಹನ ಆರಾಧನೆಯನ್ನು ಮಾಡುತ್ತಾರೆ, ಶಿರ್ಕ್ ಮಾಡುವುದಿಲ್ಲ. ಪ್ರವಾದಿಯನ್ನು ಯಾರೂ ನಂಬದಿದ್ದರೂ ಪ್ರವಾದಿಯ ಸ್ಥಾನಕ್ಕೆ ಯಾವುದೇ ಚ್ಯುತಿಯುಂಟಾಗುವುದಿಲ್ಲ, ಅವರು ನಬಿಯಾಗಿಯೇ ಇರುತ್ತಾರೆ. ಖ಼ಲೀಫರ ಸ್ಥಿತಿಯು ಇದೇ ಆಗಿದೆ. ಅವರನ್ನು ಎಲ್ಲರೂ ಕೈಬಿಟ್ಟರೆ ಕೂಡ ಅವರು ಖ಼ಲೀಫರಾಗಿಯೇ ಇರುತ್ತಾರೆ. ಯಾಕೆಂದರೆ ಯಾವೊಂದು ಆದೇಶವು ಮೂಲದ್ದೋ ಅದು ಅದರ ಶಾಖೆಯದ್ದೂ ಆಗಿದೆ. ಚೆನ್ನಾಗಿ ನೆನಪಿಟ್ಟುಕೊಳ್ಳಿರಿ, ಬರೇ ಅಧಿಕಾರಕ್ಕಾಗಿ ಖ಼ಲೀಫನಾಗುವವನು ಸುಳ್ಳುಗಾರನಾಗಿದ್ದಾನೆ. ಜನರ ಸುಧಾರಣೆಗಾಗಿ ಅಲ್ಲಾಹನ ವತಿಯಿಂದ ಕಾರ್ಯ ನಿರ್ವಹಿಸುವವನು ಅಲ್ಲಾಹನ

ಪ್ರೀತಿಗೆ ಪಾತ್ರನಾಗಿದ್ದಾನೆ. ಇಡೀ ಲೋಕವೇ ಅವನ ಶತ್ರುವಾಗಿದ್ದರೂ ಸರಿ."

**(ಮನ್ಸಬೆ ಖಿಲಾಫತ್ ಅನ್ವಾರುಲ್ ಉಲೂಂ ಸಂ. 2, ಪುಟ 53–54 – ಖುತ್ಬಾತೆ ಮಸ್ರೂರ್ ಸಂ. 2 ಪುಟ 201–202 ಖಾದಿಯಾನ್‌ನಿಂದ ಪ್ರಕಾಶಿತ)**

"ಅಲ್ಲಾಹನ ಈ ಮಹತ್ತರವಾದ ಕೊಡುಗೆಗೆ ಪ್ರಾಮುಖ್ಯತೆಯನ್ನು ಕೊಡಬೇಕಾದುದು ನಿಮ್ಮೆಲ್ಲರ ಕರ್ತವ್ಯವಾಗಿದೆ ಹಾಗೂ ಈ ಕೊಡುಗೆಗಾಗಿ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಿರಿ. ಕಾಲದ ಖಲೀಫ ಹಾಗೂ ಜಮಾಅತಿನ ವ್ಯವಸ್ಥೆಯೊಂದಿಗೆ ಮುರಿಯಲ್ಪಡದಂತಹ ಪ್ರೀತಿಯ ಮತ್ತು ಅನುಸರಣೆಯ ಸಂಬಂಧವನ್ನು ನೆಲೆನಿಲ್ಲಿಸಿರಿ. ಇದೇ ನಿಮ್ಮ ವೈಶಿಷ್ಟ್ಯತೆಯಾಗಿರಬೇಕು. ಅಲ್ಲಾಹನು ನಿಮ್ಮನ್ನು ಸದ್ಗುಣದ, ದೇವಭಕ್ತಿಯ, ಧರ್ಮನಿಷ್ಠೆಯ ಹಾಗೂ ಅನುಸರಣೆಯ ಅತ್ಯುತ್ಕೃಷ್ಟತೆಯ ಮಾದರಿಯನ್ನಾಗಿಸಲಿ...."

"ನೀವು ತಖ್ವದಲ್ಲಿ ನೆಲೆನಿಂತರೆ, ನೀವು ಕಾಲದ ಖಲೀಫರೊಂದಿಗೆ ಪ್ರೀತಿಯ ಹಾಗೂ ನಿಷ್ಠೆಯ ಸಂಬಂಧವಿರಿಸುವವರಾದರೆ, ಜಮಾಅತಿನ ವ್ಯವಸ್ಥೆಯನ್ನು ಮತ್ತು ಖಲೀಫರನ್ನು ಅನುಸರಿಸುವ ಹಾಗೂ ಗೌರವಿಸುವ ಬಗ್ಗೆ ನಿಮ್ಮ ಹೃದಯದಲ್ಲಿ ಆವೇಶವಿದ್ದರೆ, ನೀವು ಪವಿತ್ರ ಖುರ್‌ಆನಿನಲ್ಲಿ ತನ್ನ ಸಚ್ಚರಿತರಾದ ಸತ್ಯವಿಶ್ವಾಸಿಗಳಿಗೆ ಅಲ್ಲಾಹನು ವಾಗ್ದಾನ ಮಾಡಿರುವ ಸ್ಥಾಯಿಯಾದ ಪಾರಿತೋಷಕದ ವಾರಸುದಾರರಾಗುವಿರಿ. ನಾನು ನಿಮಗೆ ಭರವಸೆ ನೀಡುತ್ತೇನೆ. ಅದರ ಅನುಗ್ರಹದಿಂದ ನಿಮ್ಮ ಆಧ್ಯಾತ್ಮಿಕವೂ ಭೌತಿಕವೂ ಆದ ಎಲ್ಲ ಅಗತ್ಯಗಳು ಪೂರೈಸಲ್ಪಡುವುವು. ಅದರಿಂದಾಗಿ ನಿಮ್ಮಲ್ಲಿ ಘನತೆಯುಂಟಾಗುವುದು. ಅದರ ಅನುಗ್ರಹದಿಂದ ನಿಮ್ಮ ಎಲ್ಲ ಭಯಗಳನ್ನು ಅಲ್ಲಾಹನು ದೂರಮಾಡಿ ಸದಾ ನೆಮ್ಮದಿಯನ್ನು ನೀಡುವನು. ಆದರೆ ಆರಾಧನೆ ಮತ್ತು ಸತ್ಕರ್ಮ ಇದಕ್ಕಿರುವ ನಿಬಂಧನೆಯಾಗಿದೆ. ಅದನ್ನು ಯಾವಾಗಲೂ ಮುಂದಿಟ್ಟುಕೊಂಡು ಕಾಲದ ಖಲೀಫರ ಕರೆಗೆ ಓಗೊಡುವವರಾಗಲು ಸದಾ ಎಚ್ಚರದಿಂದಿರುವಿರಾದರೆ ಯಶಸ್ಸು ನಿಮ್ಮನ್ನು ಹಿಂಬಾಲಿಸುವುದು. ಅಲ್ಲಾಹನು ನಿಮಗೆ ಆಧ್ಯಾತ್ಮಿಕವೂ ಭೌತಿಕವೂ ಆದ ಎಲ್ಲ ತರದ ಅಭಿವೃದ್ಧಿಯನ್ನು ದಯಪಾಲಿಸುವನು. ಇನ್‌ಶಾ ಅಲ್ಲಾಹ್. ಅಲ್ಲಾಹನು ನಿಮಗೆ ನನ್ನ ಉಪದೇಶಗಳನ್ನು ಅನುಸರಿಸಿ ನಡೆಯಲು ಸೌಭಾಗ್ಯ

ನೀಡಲಿ... ಆಮೀನ್."

**(ಅನ್ಸಾರುಲ್ಲಾಹ್ ಪತ್ರಿಕೆ ಖಾದಿಯಾನ್ – ಖಿಲಾಫತ್ ಅಹ್ಮದಿಯಾ ಜುಬಿಲಿ 2008 ಪುಟ 29)**

"ನೆನಪಿಡಿರಿ, ನಿಮಗೆ ಅಲ್ಲಾಹನಿಗಾಗಿ ಖಿಲಾಫತಿನ ಮೇಲೆ ಪ್ರೀತಿ ಇರುವುದಾಗಿ ನೀವು ವಾದಿಸುವಿರಾದರೆ, ಖಿಲಾಫತಿನ ಭಾಗವಾಗಿರುವ ನಿಝ಼ಾಮೆ ಜಮಾಅತನ್ನು (ಜಮಾಅತಿನ ವ್ಯವಸ್ಥೆ) ಪೂರ್ಣವಾಗಿಯೂ ಅನುಸರಿಸಿರಿ."

**(ಅಲ್‌ಫಝ್ಲ್ ಇಂಟರ್‌ನ್ಯಾಷನಲ್ 15 ಜುಲೈ 2005)**

"ಜಮಾಅತಿನ ವ್ಯವಸ್ಥೆಯನ್ನು ಮತ್ತು ಹುದ್ದೆದಾರರನ್ನು ಅನುಸರಿಸುವುದರಲ್ಲಾಗಿದೆ ಅಲ್ಲಾಹನ ಹಾಗೂ ರಸೂಲರ ಅನುಸರಣೆಯು ಇರುವುದು. ಅವರ ಆದೇಶಗಳನ್ನು ಮತ್ತು ತೀರ್ಮಾನಗಳನ್ನು ಅಂಗೀಕರಿಸಿರಿ. ಆ ತೀರ್ಮಾನಗಳು ತಪ್ಪಾಗಿದ್ದಲ್ಲಿ ಅಲ್ಲಾಹನು ನಿಮಗೆ ಸಹನೆಯ ಪ್ರತಿಫಲವನ್ನು ನೀಡುವನು. ಯಾಕೆಂದರೆ, ಅಂತ್ಯದಿನದ ಬಗ್ಗೆ ನಿಮಗೆ ವಿಶ್ವಾಸವಿದೆ ಎಂದಾದರೆ, ಅಲ್ಲಾಹನಿಗೆ ಈ ಕಾರ್ಯವನ್ನು ಬಿಟ್ಟುಕೊಡಿರಿ. ನಿಮ್ಮ ಮತಬೇಧದಲ್ಲಿ ಪಟ್ಟುಹಿಡಿಯುವ ಅಧಿಕಾರ ನಿಮಗಿಲ್ಲ. ನಿಮ್ಮ ಕೆಲಸವು ಬರೇ ಅನುಸರಣೆ ಮಾತ್ರವಾಗಿದೆ."

**(ಖುತ್ಬಾತ್ ಮಸ್‌ರೂರ್ ಸಂ. 1 ಪುಟ 258–266)**

"ಈಗ ಹಝ್ರತ್ ಪೈಗಂಬರರ(ಸ) ಸತ್ಯಸಂಧನಾದ ದಾಸನ (ಹಝ್ರತ್ ಮಸೀಹ್ ಮೌಊದ್(ಅ)) ಸೇವಕನಾಗಿರುವುದು ಹಾಗೂ ಖಿಲಾಫತಿನ ಅನುಸರಣೆಯಲ್ಲಿಯೇ ಅಲ್ಲಾಹನ ಅನುಗ್ರಹವನ್ನು ಸೆಳೆಯುವರೆ ಸಾಧಿಸುವುದು ಅದರ ಹೊರತು ಅನ್ಯ ಮಾರ್ಗವಿಲ್ಲ. ಅಲ್ಲಾಹನು ಎಲ್ಲ ಅಹ್ಮದಿಯರಿಗೂ ಅದನ್ನು ಅರಿಯುವ ಸೌಭಾಗ್ಯ ನೀಡಲಿ.... ಈ ರೀತಿಯ ಪ್ರಾಮಾಣಿಕತೆ, ನಿಷ್ಠಾವಂತಿಕೆ, ಅನುಸರಣೆಯ ಸಂಬಂಧವನ್ನು ವರ್ಧಿಸುತ್ತಾ ಹೋಗಲಿ, ಹಾಗೆ ನಾವು ಶೀಘ್ರದಲ್ಲೇ ಹಝ್ರತ್ ಪೈಗಂಬರರ(ಸ) ಪತಾಕೆಯನ್ನು ನಾಟಿ ಲೋಕದಲ್ಲೆಡೆ ಇಸ್ಲಾಮಿನ ಪ್ರಭುತ್ವವನ್ನು ಸ್ಥಾಪಿಸುವಂತಾಗಲಿ"

**(ಅಲ್‌ಫಝ್ಲ್ ಇಂಟರ್‌ನ್ಯಾಷನಲ್ 12–18 ಜೂನ್ 2015 ಪುಟ 10)**

"ನೀವು ನಿಮ್ಮನ್ನು ಹಝ್ರತ್ ಮಸೀಹ್ ಮೌಊದ್‌ರೊಂದಿಗೆ[ಅ] ಜೋಡಿಸಿದ ನಂತರ ಖಿಲಾಫತಿನೊಂದಿಗೆ ಪರಿಪೂರ್ಣವಾದ ಅನುಸರಣೆ ಮಾಡಬೇಕಾದುದು ಅತ್ಯಗತ್ಯವಾಗಿದೆ. ಜಮಾಅತಿನ ಸ್ಥಿರತೆಗೆ ಮತ್ತು ಆಧ್ಯಾತ್ಮಿಕವಾದ ಅಭಿವೃದ್ಧಿಗೆ ಕಾರಣವಾಗುವುದು ಇದೇ ಆಗಿದೆ. ಖಲೀಫರ ಪ್ರತಿಯೊಂದು ತೀರ್ಮಾನಗಳನ್ನು ಸಂತೋಷದಿಂದ ಸ್ವೀಕರಿಸುವವನಾಗುವ ರೀತಿಯಲ್ಲಿ ಖಿಲಾಫತಿನ ನಿಜವಾದ ಪರಿಚಯ, ಅರಿವು ಮತ್ತು ಸರಿಯಾದ ಗ್ರಹಿಕೆಯುಂಟಾಗಬೇಕಾಗಿದೆ. ಅವರ ತೀರ್ಮಾನಗಳನ್ನು ಸ್ವೀಕರಿಸುವುದರಲ್ಲಿ ಯಾವುದೇ ರೀತಿಯ ಅಡಚಣೆ ಮನಸ್ಸಿನಲ್ಲಿ ಉಂಟಾಗಬಾರದು. ಅವರ ಯಾವುದೇ ವಿಷಯಗಳನ್ನು ಆಲಿಸಿ ಅತೃಪ್ತಿ ಉಂಟಾಗಬಾರದು. ಕಾಲದ ಖಲೀಫರಿಗೆ ವಿಧೇಯತೆ ಮತ್ತು ನಿಝಾಮನ್ನು (ಜಮಾಅತಿನ ವ್ಯವಸ್ಥೆ) ಅನುಸರಿಸುವುದು ಅತ್ಯಂತ ಪ್ರಾಮುಖ್ಯವಾದುದಾಗಿದೆ. ಅದರ ಪ್ರಾಧಾನ್ಯತೆಯನ್ನು ಪ್ರತಿಯೊಬ್ಬರು ತಿಳಿದಿರಬೇಕು."

**(ಜುಮಾ ಖುತ್‌ಬ – ಜನವರಿ 31, 2014;**

**ಅಲ್‌ಫಝಲ್ ಇಂಟರ್‌ನ್ಯಾಷನಲ್ 12–18 ಜೂನ್ 2015 ಪುಟ 10)**

"ಜಮಾಅತಿನ ಪ್ರತಿಯೊಬ್ಬ ವ್ಯಕ್ತಿ ಪರಿಪೂರ್ಣವಾಗಿ ವಿಧೇಯನಾಗಿರುವುದು ಆವಶ್ಯಕವಾಗಿದೆ. ಪ್ರತಿಯೊಬ್ಬನು ಸಂಪೂರ್ಣವಾಗಿ ವಿಧೇಯನಾಗುವಾಗ ಆಧ್ಯಾತ್ಮಿಕವಾದ ಅಭಿವೃದ್ಧಿಯ ಕಡೆಗೆ ನಮ್ಮ ಹೆಜ್ಜೆಯು ಮುನ್ನಡೆಯುವುದು. ಇನ್‌ಶಾಅಲ್ಲಾಹ್."

**(ಜುಮುಅ ಖುತ್‌ಬ 6 ಜೂನ್ 2014 –**

**ಅಲ್‌ಫಝ್‌ಲ್ ಇಂಟರ್‌ನ್ಯಾಷನಲ್ 12–18 ಜೂನ್ 2015 ಪುಟ 11)**

"ಹೃದಯದಲ್ಲಿ ಒಂದು ಹೊಳಪು ಸೃಷ್ಟಿಯಾಗುತ್ತಿದೆಯೇ? ಅನುಸರಣೆಯಿಂದ ಆತ್ಮದಲ್ಲಿ ಆನಂದವೂ ಪ್ರಕಾಶವೂ ಉಂಟಾಗುತ್ತಿದೆಯೇ? ಎಂದು ನೋಡುವುದಾಗಿದೆ ಪ್ರತಿಯೊಬ್ಬರಿಗೂ ತನ್ನ ಅನುಸರಣೆಯನ್ನು ಅಳೆಯುವ ಮಾನದಂಡ. ಪ್ರತಿಯೊಬ್ಬನು ಈ ಕಡೆಗೆ ಗಮನಹರಿಸುವನಾದರೆ, ಸ್ವತಃ ತನ್ನ

ಅನುಸರಣೆಯು ಮಟ್ಟವನ್ನು ಅಳೆಯಬಹುದಾಗಿದೆ. ಅಲ್ಲಾಹನನ್ನೂ ಅವನ ಪ್ರವಾದಿಯನ್ನೂ ಮಸೀಹ್ ಮೌಊದ್‌ರಿಂದ[ಅ] ಸ್ಥಾಪಿತವಾದ ಖಿಲಾಫತಿನ ವ್ಯವಸ್ಥೆಯನ್ನೂ ಎಷ್ಟರಮಟ್ಟಿಗೆ ಅನುಸರಿಸುತ್ತಾನೆಂದು ಅರಿಯುವನು. ಅಲ್ಲಾಹನ ಮತ್ತು ಅವನ ಪ್ರವಾದಿಯ ಅನುಸರಣೆಯ ನಂತರ ಯಾವುದೇ ಪ್ರಕಾಶ ಗಳಿಸುವುದಿಲ್ಲವಾದರೆ ಅದರಿಂದ ಯಾವುದೇ ಪ್ರಯೋಜನವಿಲ್ಲ. ಸರಕಾರವನ್ನು ಅನುಸರಿಸುವುದರಿಂದ ಶಾಂತಿಯೂ ಸಮಾಧಾನವೂ ಉಂಟಾಗುವುದು. ಆದರೆ ಆಧ್ಯಾತ್ಮಿಕವಾದ ಜ್ಯೋತಿಯು ಮತ್ತು ಆನಂದವು ಆಧ್ಯಾತ್ಮಿಕವಾದ ವ್ಯವಸ್ಥೆಯನ್ನು ಅನುಸರಿಸುವುದರಿಂದ ಮಾತ್ರ ಸಿಗುವುದು."

**(ಜುಮುಅ ಖುತ್‌ಬ 5 ಡಿಸೆಂಬರ್ 2014;**

**ಅಲ್‌ಫಝ್ಲ್ ಇಂಟರ್‌ನ್ಯಾಷನಲ್ 12–18 ಜೂನ್ 2015 ಪುಟ 11)**

"ನೆನಪಿಡಿರಿ, ಅಮೀರರು, ಅಧ್ಯಕ್ಷರು, ಹುದ್ದೇದಾರರು ಹಾಗೂ ಶಾಖಾ ಸಂಘಟನೆಗಳ ಹುದ್ದೇದಾರರು ಎಲ್ಲರೂ ಖ಼ಲೀಫರಿಂದ ನೇಮಿತರಾದ ವ್ಯವಸ್ಥೆಯ ಒಂದು ಭಾಗವಾಗಿದ್ದಾರೆ. ಆ ಕಾರಣದಿಂದ ಅವರು ಆಯಾಕಾಲದ ಖ಼ಲೀಫರ ಪ್ರತಿನಿಧಿಗಳಾಗಿದ್ದಾರೆ. ಆದ್ದರಿಂದ ತಮ್ಮ ಕರ್ತವ್ಯಗಳನ್ನು ಪೂರೈಸುವುದರಲ್ಲಿ ಅವರ ಆಲೋಚನೆಯು ಕಾಲದ ಖಲೀಫರಿಗೆ ಅಧೀನವಾಗಿರಬೇಕು. ಅವರಿಗೆ ಕೇಂದ್ರದಿಂದ ನೀಡಲ್ಪಡುವಂತಹ ಸೂಚನೆಯ ಮೇರೆಗೆ ಕಾರ್ಯನಿರ್ವಹಿಸಬೇಕಾಗಿದೆ. ಹಾಗೆ ಮಾಡುವುದಿಲ್ಲವಾದರೆ ಅವರು ತಮ್ಮ ಹುದ್ದೆಯ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ. ಆ ಹುದ್ದೆಯ ನ್ಯಾಯವಾದ ಅವಶ್ಯಕತೆಗಳನ್ನು ಪೂರೈಸುತ್ತಿಲ್ಲ."

**(ಖುತ್ಬಾತೆ ಮಸ್‌ರೂರ್ ಸಂ. 2, ಪುಟ 951)**

ಹಝ್ರ಼ತ್ ಖ಼ಲೀಫತುಲ್ ಮಸೀಹ್ ಖ಼ಾಮಿಸ್[ಅಯ್ಯದಹುಲ್ಲಾಹು] ಶೂರಾದ ಪ್ರತಿನಿಧಿಗಳಿಗೆ ಹಾಗೂ ಇತರ ಕಾರ್ಯಕರ್ತರಿಗೆ ಕಾಲದ ಖ಼ಲೀಫರನ್ನು ಅನುಸರಿಸುವುದರ ಬಗ್ಗೆ ಗಮನಹರಿಸುತ್ತಾ ಹೇಳುತ್ತಾರೆ:

"ಶೂರಾದ ತೀರ್ಮಾನಗಳನ್ನು ಕಾರ್ಯರೂಪಕ್ಕೆ ತರಬೇಕಾದುದು ಶೂರಾದ ಪ್ರತಿನಿಧಿಗಳ ಮತ್ತು ಹುದ್ದೇದಾರರ ಕರ್ತವ್ಯವಾಗಿವೆ. ಆ ತೀರ್ಮಾನಗಳು

ಕಾಲದ ಖಲೀಫರಿಂದ ಅನುಮೋದನೆ ಪಡೆದಿರುವುದರಿಂದ ಅವುಗಳನ್ನು ಕಾರ್ಯರೂಪಕ್ಕೆ ತರುವುದರ ಕುರಿತು ಪೂರ್ಣವಾಗಿ ಗಮನಹರಿಸದಿದ್ದರೆ; ಅದು ಕಾಲದ ಖಲೀಫರ ನಿರ್ಧಾರಗಳನ್ನು ಹಗುರವಾಗಿ ತೆಗೆದುಕೊಳ್ಳುವಂತಾಗುತ್ತದೆ. ಅನುಸರಣೆಯ ವೃತ್ತದೊಳಗೆ ಇಲ್ಲವೆಂಬುವುದಾಗಿದೆ ಅದರ ಅರ್ಥ. ಜವಾಬ್ದಾರಿ ವಹಿಸಲ್ಪಟ್ಟಂತಹ ಹುದ್ದೇದಾರರು ಇತರರಿಗೆ ಅತ್ಯುತ್ತಮವಾದ ಅನುಕರಣೀಯವಾದ ಮಾದರಿಯಾಗಬೇಕಾಗಿದೆ. ಆದ್ದರಿಂದ ಸೇವೆ ಮಾಡಲು ದೊರೆತ ಸಂದರ್ಭವನ್ನು ಬರೇ ಗೌರವದ ಹಾಗೂ ಸಂತೋಷದ ಸ್ಥಾನವಾಗಿ ಭಾವಿಸಬಾರದು. 'ತಖ್ವ'ದ ಉನ್ನತವಾದ ಪದವಿಯಲ್ಲಿ ನೆಲೆನಿಂತರೆ ಮಾತ್ರ ಅದೊಂದು ಗೌರವದ ಮತ್ತು ಸಂತೋಷದ ಸ್ಥಾನವಾಗುವುದು.... ಅಲ್ಲಾಹನು ಎಲ್ಲರನ್ನು 'ತಖ್ವ'ದ ದಾರಿಯಲ್ಲಿ ನಡೆಸಿ ತಮ್ಮ ಜವಾಬ್ದಾರಿಯನ್ನು ನಿಭಾಯಿಸಲು ಸೌಭಾಗ್ಯ ನೀಡಲಿ. ಜಮಾಅತಿನ ಸೇವೆಮಾಡಲು ಸಂದರ್ಭ ದೊರೆಯುತ್ತಿರುವ ಎಲ್ಲರೂ ಖಲೀಫರ ಕೈ ಬಲಪಡಿಸುವವರಾಗಿರಿ."

**(ಖುತ್ಬಾತೆ ಮಸ್‌ರೂರ್ ಸಂ. 4, ಪುಟ 165-166 ಖಾದಿಯಾನಿನಿಂದ ಪ್ರಕಾಶಿತ)**

ಖಿಲಾಫತಿನ ವ್ಯವಸ್ಥೆಯನ್ನು ಪರಿಪೂರ್ಣವಾಗಿ ಅನುಸರಿಸಲಿಕ್ಕಾಗಿ ಜಮಾಅತಿನ ಸದಸ್ಯರು, ಶೂರಾದ ವ್ಯವಸ್ಥೆಯ ಉಪಯುಕ್ತತೆಯ ಬಗ್ಗೆ ಚೆನ್ನಾಗಿ ಅರಿತಿರಬೇಕು. ಹಾಗಾದರೆ ಜಮಾಅತಿನ ಅಭಿವೃದ್ಧಿಗಾಗಿ ಕಾಲದ ಖಲೀಫರಿಗೆ ತಮ್ಮ ಪ್ರತಿನಿಧಿಗಳ ಮೂಲಕ ಕಳುಹಿಸಲಾಗುವ ಯೋಜನೆಗಳು ಎಲ್ಲ ವಿಧದಲ್ಲೂ ಜಮಾಅತಿಗೆ ಉಪಯುಕ್ತವೂ ಅನುಯೋಜ್ಯವೂ ಆಗಿರುವುದು. ಆಗ ಆ ಯೋಜನೆಗಳ ಪ್ರಕಾರ ಕಾರ್ಯನಿರ್ವಹಿಸಲಾಗುವುದು ಮತ್ತು ಈ ರೀತಿಯಲ್ಲಿ ಕಾಲದ ಖಲೀಫರನ್ನು ಪರಿಪೂರ್ಣವಾಗಿ ಅನುಸರಿಸಲು ಸಾಧ್ಯವಾಗುವುದು. ಇದಕ್ಕೆ ಸಂಬಂಧಿಸಿ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಯ್ಯದಹುಲ್ಲಾಹು) ಶೂರಾದ ಸದಸ್ಯರಿಗೆ ತಮ್ಮ ಸ್ಥಾನವನ್ನು ಅರಿಯಲು ಮತ್ತು ಕಾಲದ ಖಲೀಫರನ್ನು ಅನುಸರಿಸಲು ತಾಕೀತು ಪಡಿಸುತ್ತಾ ಹೇಳುತ್ತಾರೆ:

"ಆಯಾಕಾಲದ ಖಲೀಫರು ಜಮಾಅತಿನ ವ್ಯವಸ್ಥೆಯ ಮುಖಾಂತರ ಸಲಹೆಯನ್ನು ಕೇಳುತ್ತಾ ಕರೆಯುವಾಗ ಆ ವಿಷಯದಲ್ಲಿ ಎಷ್ಟೊಂದು

ಮುಂಜಾಗ್ರತೆಯ ಅಗತ್ಯವಿದೆಯೆಂದು ನೋಡಬೇಕಾಗಿದೆ. ಸಲಹೆ ನೀಡಲಿಕ್ಕಾಗಿ ಮಜ್ಲಿಸ್ ಶೂರಾದಲ್ಲಿ ಕರೆಯಲ್ಪಡುವಾಗ, ಮಜ್ಲಿಸ್ ಶೂರಾದ ಪ್ರತಿಯೊಬ್ಬ ಸದಸ್ಯರ ಮೇಲೆ ಅದೊಂದು ದೊಡ್ಡ ಜವಾಬ್ದಾರಿಯಾಗಿದೆ. ಅವರನ್ನು ಒಂದು ಪವಿತ್ರವಾದ ಕಾರ್ಯಕಾರಿ ಸಮಿತಿಯ ಸದಸ್ಯರನ್ನಾಗಿಸಲಾಗುತ್ತದೆ. ಯಾಕೆಂದರೆ, ಖಿಲಾಫತಿನ ವ್ಯವಸ್ಥೆಯ ನಂತರದ ಅತ್ಯಂತ ಮುಖ್ಯವಾದ ಹಾಗೂ ಮಹತ್ವಪೂರ್ಣವಾದ ಕಾರ್ಯಕಾರಿ ಸಮಿತಿಯು 'ಶೂರಾ'ದ ಸಮಿತಿಯಾಗಿದೆ. ಕಾಲದ ಖ಼ಲೀಫರು ಅಲ್ಲಾಹನ ಶಿಕ್ಷಣವನ್ನು ಲೋಕದಲ್ಲೆಡೆ ಪ್ರಚಾರಪಡಿಸಲು, ಜಮಾಅತಿನ ಸದಸ್ಯರನ್ನು ತರಬೇತುಗೊಳಿಸಲು, ಅವರ ಇತರ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಮಾನವ ಕುಲದ ಸೇವೆಮಾಡುವ ಸಲುವಾಗಿ ಕರೆಯುವಾಗ ಜಮಾಅತಿನ ಸದಸ್ಯರು ತಮ್ಮಿಂದಲೇ ಪ್ರತಿನಿಧಿಗಳನ್ನು ಆಯ್ಕೆಮಾಡಿ ಕಳುಹಿಸುತ್ತಾರೆ. ಹೀಗಿರುವಾಗ ಇದು ಎಷ್ಟೊಂದು ಜವಾಬ್ದಾರಿಯುತವಾದ ಕಾರ್ಯವಾಗಿದೆಯೆಂದು ಅರಿತು ಮಜ್ಲಿಸ್ ಶೂರಾದಲ್ಲಿ ಕುಳಿತುಕೊಳ್ಳುವರಾದರೆ ಹಾಗೂ ಸಂಪೂರ್ಣವಾಗಿ ಮಜ್ಲಿಸಿನ ಕಾರ್ಯಕ್ರಮಗಳನ್ನು ಆಲಿಸುತ್ತಲೂ ಇಸ್ತಿಗ್‌ಫಾರ್ ಮಾಡುತ್ತಲೂ ದುರೂದ್ ಹೇಳುತ್ತಲೂ ಇರುವರಾದರೆ ಅವರ ಮನಸ್ಸಲ್ಲಿ ಬೇರೆ ಚಿಂತೆಯೇ ಬರಲಿಕ್ಕೆ ಸಾಧ್ಯವಿಲ್ಲ. ಆಗ ಮಾತ್ರ ಮಜ್ಲಿಸಿನಲ್ಲಿ ಸಲಹೆ ಕೊಡಲು ಅಪೇಕ್ಷಿಸಲಾಗುವಾಗ ಸರಿಯಾದ ಹಾಗೂ ಸಂಪೂರ್ಣವಾದ ಜವಾಬ್ದಾರಿಕೆಯಿಂದ ಸಲಹೆ ಕೊಡಲು ಸಾಧ್ಯವಾಗುವುದು. ಏಕೆಂದರೆ, ಈ ಸಲಹೆಗಳು ಕಾಲದ ಖ಼ಲೀಫರಿಗೆ ರವಾನಿಸಲ್ಪಲ್ಪಡಲಾಗುತ್ತದೆ. ಆ ಸದಸ್ಯರು ಅಗಾಧವಾಗಿ ಚಿಂತಿಸಿ ಇಂತಿಂತಹ ವಿಷಯದಲ್ಲಿ ಅಭಿಪ್ರಾಯವನ್ನು ನಿರೂಪಿಸಿರಬಹುದೆಂಬ ಉತ್ತಮ ನಿರೀಕ್ಷೆ ಖ಼ಲೀಫರಿಗೆ ಇರುತ್ತದೆ. ಸಾಮಾನ್ಯವಾಗಿ ಮಜ್ಲಿಸ್ ಶೂರಾದ ಸಲಹೆಗಳನ್ನು ಈ ಕಾರಣದಿಂದ ಅಕ್ಷರಶಃ ಸ್ವೀಕರಿಸಲಾಗುತ್ತದೆ– ಕೆಲವೊಂದು ವಿಷಯಗಳಿಗೆ ಸಂಬಂಧಿಸಿ ಮಜ್ಲಿಸ್ ಶೂರಾದ ತೀರ್ಮಾನಗಳನ್ನು ಸ್ವೀಕರಿಸುವುದರಿಂದ ಜಮಾಅತಿಗೆ ಹಾನಿಯಾಗಬಹುದೆಂದು ಖ಼ಲೀಫರು ಅರಿತಿರುವಂತಹ ತೀರ್ಮಾನಗಳನ್ನು ಹೊರತುಪಡಿಸಿ. ಇದು ಪವಿತ್ರ ಖುರ್‌ಆನಿನ ಶಿಕ್ಷಣಕ್ಕೆ ಎದುರಾದದ್ದೋ ಅದರಿಂದ ದೂರವಾದದ್ದೋ ಅಲ್ಲ. ಯಾಕೆಂದರೆ, ಅಲ್ಲಾಹನು ಅದಕ್ಕೆ ಅನುಮತಿ ನೀಡಿರುವನು. ಅಲ್ಲಾಹನು ಹೇಳುತ್ತಾನೆ:

وَشَاوِرْهُمْ فِي الْأَمْرِ ۚ فَإِذَا عَزَمْتَ فَتَوَكَّلْ عَلَى اللَّهِ ۚ إِنَّ اللَّهَ يُحِبُّ الْمُتَوَكِّلِينَ

ಅಂದರೆ ಪ್ರತಿಯೊಂದು ಪ್ರಧಾನ ಕಾರ್ಯಗಳಲ್ಲಿ ನೀನು ಅವರೊಡನೆ ಸಮಾಲೋಚನೆ ನಡೆಸು (ನಬಿಗೆ ಈ ಆದೇಶವಿದೆ). ಹಾಗೆ ಯಾವುದೇ ಕಾರ್ಯ ತೀರ್ಮಾನಿಸಲ್ಪಟ್ಟರೆ ನೀನು ಅಲ್ಲಾಹನ ಮೇಲೆ ಭರವಸೆಯನ್ನಿಡು.(3:160) ಇಲ್ಲಿ ಪ್ರಧಾನ ಕಾರ್ಯಗಳಲ್ಲಿ ಸಮಾಲೋಚನೆ ಅಗತ್ಯವಾಗಿದೆಯೆಂದು ಹೇಳಲಾಗಿದೆ. ಖಂಡಿತವಾಗಿಯೂ ಸಮಾಲೋಚನೆ ಮಾಡಬೇಕಾಗಿದೆ. ಈ ಆದೇಶದ ಹಿನ್ನೆಲೆಯಲ್ಲಿ ಹಝ್ರ‌ತ್ ಪೈಗಂಬರ್[ಸ] ಸಮಾಲೋಚನೆ ನಡೆಸುತ್ತಿದ್ದರು. ಎಷ್ಟರ ಮಟ್ಟಿಗೆ ಸಮಾಲೋಚಿಸುತ್ತಿದ್ದರೆಂದರೆ ಹಝ್ರ‌ತ್ ಅಬೂಹುರೈರ[ರ] ವರದಿ ಮಾಡುತ್ತಾರೆ: ನಾನು ಹಝ್ರ‌ತ್ ಪೈಗಂಬರರಿಗಿಂತ[ಸ] ಹೆಚ್ಚಾಗಿ ತನ್ನ ಅನುಚರರೊಂದಿಗೆ ಸಮಾಲೋಚನೆ ನಡೆಸುವವರನ್ನು ಕಂಡಿಲ್ಲ.

**(ಖುತ್ಬಾತೆ ಮಸ್‌ರೂರ್ ಸಂ. 2, ಪುಟ 195–196)**

ಇಲ್ಲಿ ಸಂದರ್ಭೋಚಿತವಾಗಿ ಒಂದು ವಿಷಯವನ್ನು ವ್ಯಕ್ತಪಡಿಸಬೇಕಾದುದು ಅಗತ್ಯವಾಗಿದೆ. ಶೂರಾದ ವ್ಯವಸ್ಥೆ ಪ್ರವಾದಿಚರ್ಯೆಯ ಅನುಸರಣದಿಂದಲೇ ಸ್ಥಾಪಿತವಾಗಿದೆ. ಅದು ಕೇವಲ ಕಾಲದ ಖ಼ಲೀಫರಿಗೆ ಹಲವು ವಿಷಯಗಳಲ್ಲಿ ಸಲಹೆಗಳನ್ನು ನೀಡುವುದಕ್ಕಾಗಿರುತ್ತದೆ. ಆದರೆ ತೀರ್ಮಾನಗಳನ್ನು ಕೈಗೊಳ್ಳುವುದು ಖ಼ಲೀಫರ ಅಧಿಕಾರಕ್ಕೆ ಒಳಪಟ್ಟದ್ದಾಗಿರುತ್ತದೆ. ಆ ಕುರಿತು ಹಝ್ರ‌ತ್ ಖ಼ಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝುರು ಹೇಳುತ್ತಾರೆ:

"ಬದರ್ ಯುದ್ಧದ ಸಂದರ್ಭದಲ್ಲಿ ಕೈದಿಗಳೊಂದಿಗೆ ವ್ಯವಹರಿಸುವುದರ ಬಗ್ಗೆ ಬಹುಮತದ ಅಭಿಪ್ರಾಯಗಳನ್ನು ರದ್ದುಪಡಿಸಿ ಹಝ್ರ‌ತ್ ಪೈಗಂಬರರು[ಸ] ಕೇವಲ ಹಝ್ರ‌ತ್ ಅಬೂಬಕರರ[ರ] ಅಭಿಪ್ರಾಯವನ್ನು ಅಂಗೀಕರಿಸಿದರು ಎಂದು ಚರಿತ್ರೆಯಲ್ಲಿ ಇದೆ. ಕೆಲವು ಇತರ ಯುದ್ಧಗಳ ಸಂದರ್ಭಗಳಲ್ಲಿ ಸಹಾಬಿಗಳ ಸಲಹೆಗಳನ್ನು ಅತ್ಯಂತ ಮಹತ್ವದಿಂದ ಅಂಗೀಕರಿಸಲಾಯಿತು. 'ಉಹುದ್' ಯುದ್ಧದ ಸಂದರ್ಭದಲ್ಲಿ ಸಹಾಬಿಗಳ ಸಲಹೆಯಂತೆ ಹಝ್ರ‌ತ್ ಪೈಗಂಬರ್[ಸ]

ಅಲ್ಲಿಗೆ ಹೋಗಿದ್ದರು. ಅಲ್ಲಿಗೆ ಹೋಗುವುದು ಅವರಿಗೆ ಇಷ್ಟವಿರಲಿಲ್ಲ. ಹಝ್ರತ್ ಪೈಗಂಬರರ(ಸ) ಇಚ್ಛೆ ಮದೀನದಲ್ಲಿದ್ದುಕೊಂಡು ಹೋರಾಡಬೇಕೆಂದಾಗಿತ್ತು. ಸಹಾಬಿಗಳ ಸಲಹೆಯಂತೆ ಹಝ್ರತ್ ಪೈಗಂಬರ್(ಸ) ಆಯುಧ ಸನ್ನದ್ಧರಾಗಿ ಹೊರಟಾಗ ನಬಿಯ ಇಷ್ಟಕ್ಕೆ ವಿರುದ್ಧವಾಗಿ ತೀರ್ಮಾನವುಂಟಾಗಿದೆಯೆಂದು ಸಹಾಬಿಗಳಿಗೆ ಅನಿಸಿ ಇಲ್ಲಿದ್ದುಕೊಂಡೇ ಯುದ್ಧ ಮಾಡಬಹುದೆಂದು ಹೇಳಿದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: **"ಇಲ್ಲ, ನಬಿ ಒಂದು ತೀರ್ಮಾನ ಕೈಗೊಂಡರೆ ಅದರಿಂದ ಹಿಂಜರಿಯುವುದಿಲ್ಲ. ಇನ್ನು ಅಲ್ಲಾಹನಲ್ಲಿ ಭರವಸೆ ಇಟ್ಟು ಹೊರಡಿರಿ."**

"ಒಮ್ಮೆ ಹೀಗೂ ಉಂಟಾಯಿತು – **'ಹುದೈಬಿಯಾ ಸಂಧಿ'**ಯ ಸಂದರ್ಭದಲ್ಲಿ ಒಡಂಬಡಿಕೆಯಲ್ಲಿ ಹಸ್ತಾಕ್ಷರ ಮಾಡಬಾರದೆಂದಾಗಿತ್ತು ಎಲ್ಲ ಸಹಾಬಿಗಳ ಒಮ್ಮತದ ಅಭಿಪ್ರಾಯ. ಆದರೆ ಹಝ್ರತ್ ಪೈಗಂಬರ್(ಸ) ಸಹಾಬಿಗಳೆಲ್ಲರ ಒಮ್ಮತಾಭಿಪ್ರಾಯಕ್ಕೆ ವಿರುದ್ಧವಾಗಿ ಒಡಂಬಡಿಕೆಯಲ್ಲಿ ಹಸ್ತಾಕ್ಷರ ಮಾಡಿದರು. ಅದರ ನಂತರ ಅದರ ಫಲವಾಗಿ ಅಲ್ಲಾಹನು ಎಷ್ಟೊಂದು ವೈಭವಶಾಲಿ ಯಾದ ಯಶಸ್ಸನ್ನು ಉಂಟುಮಾಡಿದನೆಂದು ಕಾಣಬಹುದಾಗಿದೆ. ಆದ್ದರಿಂದ ಸಂಪೂರ್ಣ ರೀತಿಯಲ್ಲಿ ವಿಷಯ ಹೊಮ್ಮಿಬರುವಂತಾಗಲು ಸಲಹೆಗಳನ್ನು ಕೇಳಲು ಆಜ್ಞೆಯಿದೆ. ಆದರೆ ಅವುಗಳನ್ನು ಅಂಗೀಕರಿಸಲೇ ಬೇಕೆಂದೇನಿಲ್ಲ. ಒಟ್ಟಿನಲ್ಲಿ ಹಝ್ರತ್ ಪೈಗಂಬರರ(ಸ) ಚರ್ಯೆಯ ಅನುಸರಣೆಯಲ್ಲಿಯೇ ನಮ್ಮ **ಶೂರಾ ನಿಝಾಮ್** ಸಹ ನೆಲೆಗೊಂಡಿದೆ. ಆಳವಾಗಿ ಹೋಗಿ ಕಾರ್ಯಗಳನ್ನು ನೋಡುವಂತಾಗಲು ಖಲೀಫರು ಸಲಹೆ ಸಮಾಲೋಚನೆಗಳನ್ನು ಕೇಳುತ್ತಾರೆ. ಆದರೆ ಶೂರಾದ ಎಲ್ಲ ಸಲಹೆ ಸಮಾಲೋಚನೆಗಳನ್ನು ಸ್ವೀಕರಿಸುವುದು ಕಡ್ಡಾಯವಲ್ಲ. ಆದ್ದರಿಂದ ಸದಾ ಶೂರಾದ ಕಾರ್ಯಕಲಾಪಗಳ ಕೊನೆಗೆ ಕಾರ್ಯಗಳ ಅವಲೋಕನದ ನಂತರ ವರದಿ ನೀಡಲಾಗುವಾಗ ಅದರಲ್ಲಿ 'ಶೂರಾ ಇದನ್ನು ಶಿಫಾರಸು ಮಾಡುತ್ತದೆ' ಎಂದು ಬರೆದಿರುತ್ತದೆ; ಶೂರಾ ಹೀಗೆ ತೀರ್ಮಾನಿಸಿದೆಯೆಂದು ಬರೆಯುವ ಹಕ್ಕಿರುವುದಿಲ್ಲ. ಶೂರಾಕ್ಕೆ ಬರೇ ಶಿಫಾರಸು ಮಾಡುವ ಹಕ್ಕಿರುತ್ತದೆ. ತೀರ್ಮಾನಿಸುವ ಹಕ್ಕು ಕಾಲದ ಖಲೀಫರಿಗೆ

ಮಾತ್ರವಾಗಿರುತ್ತದೆ. ಹಾಗಿದ್ದಲ್ಲಿ ಶೂರಾದ ಸಭೆ ಕರೆಯುವ ಹಾಗೂ ಸಲಹೆ ಕೇಳುವ ಪ್ರಯೋಜನವಾದರೂ ಏನೆಂದು ಇಂದಿನ ಕೆಲವು ಶಿಕ್ಷಿತ ವರ್ಗದವರ ಮನಸ್ಸಲ್ಲಿ ಉದ್ಭವಿಸಬಹುದು. ಆದ್ದರಿಂದ ನಾನು ಮೊದಲೇ ವಿವರಿಸಿದ್ದೇನೆ, **ಮಜ್ಲಿಸ್ ಮುಶಾವಿರಾತ್** ಒಂದು ಸಲಹೆ ಕೊಡುವ ಸಮಿತಿ ಮಾತ್ರವಾಗಿದೆ. ಅದರ ನಡವಳಿಕೆ ಪಾರ್ಲಿಮೆಂಟಿನಂತೆ ನಿರ್ಧಾರ ಕೈಗೊಳ್ಳುವಂತಹದ್ದಲ್ಲ. ಕೊನೆಯ ನಿರ್ಧಾರಕ್ಕಾಗಿ ಖಲೀಫರ ಸನ್ನಿಧಿಗೆ ತರಲಾಗುತ್ತದೆ, ಖಲೀಫರಿಗೆ ಮಾತ್ರವೇ ಕೊನೆಯ ತೀರ್ಮಾನ ಕೈಗೊಳ್ಳುವ ಅಧಿಕಾರವಿರುವುದು. ಈ ಅಧಿಕಾರವು ಅಲ್ಲಾಹನಿಂದ ನೀಡಲ್ಪಟ್ಟದ್ದಾಗಿದೆ. ನಾನು ಮೊದಲು ಹೇಳಿದಂತೆ, ಕಾಲದ ಖಲೀಫರಿಗೆ ಮಾತ್ರ ಅರಿವಿರುವ ಪ್ರಧಾನವಾದ ಕೆಲವು ವಿಷಯಗಳನ್ನು ಹೊರತುಪಡಿಸಿದರೆ ಸಾಮಾನ್ಯವಾಗಿ ಶೂರಾದ ಸಲಹೆಗಳನ್ನು ಸ್ವೀಕರಿಸಲಾಗುತ್ತದೆ. ಖಲೀಫರು ಹೇಳಲಿಚ್ಛಿಸದ ಕೆಲವು ಕಾರಣಗಳಿಂದ ಶೂರಾದ ಸಲಹೆಗಳನ್ನು ರದ್ದುಪಡಿಸಿರಬಹುದು. ಅಂತಹ ಕೆಲವು ನಿರ್ಬಂಧಿತಾವಸ್ಥೆಯಿರುತ್ತವೆ. ಒಟ್ಟಿನಲ್ಲಿ, ಸಲಹೆಗಳನ್ನು ಕೇಳುವುದರಿಂದ ಪ್ರಯೋಜನಗಳುಂಟಾಗುತ್ತವೆ. ಯಾಕೆಂದರೆ, ವಿವಿಧ ಪರಿಸ್ಥಿತಿಯ, ವಿವಿಧ ಸಮುದಾಯದ, ವಿವಿಧ ಸಾಮಾಜಿಕ ಪರಿಸರದ, ಕಡಿಮೆ ವಿದ್ಯಾವಂತರೂ ಉನ್ನತ ವಿದ್ಯಾವಂತರೆಲ್ಲರೂ ಸಲಹೆಗಳು ನೀಡುತ್ತಾರೆ. ಈ ಕಾಲದಲ್ಲಿ ಜಮಾಅತ್ ಹರಡಿಕೊಂಡಿದೆ, ವಿವಿಧ ರಾಷ್ಟಗಳಿಗೆ ಸಂಬಂಧಿಸಿ ಅದರ ಪರಿಸ್ಥಿತಿಗನುಸರಿಸಿ ಸಲಹೆಗಳು ತಲುಪುವುದರಿಂದ ಕಾಲದ ಖಲೀಫರಿಗೆ ಆ ರಾಷ್ಟ್ರಗಳಲ್ಲಿರುವವರ ಸಾಮಾನ್ಯ ಪರಿಸ್ಥಿತಿಗಳು, ಜಮಾಅತಿನ ಜೀವನ ಮಟ್ಟ, ಜಮಾಅತಿನ ಭೌತಿಕವೂ ಆಧ್ಯಾತ್ಮಿಕವೂ ಆದ ಗುಣಮಟ್ಟ ಮತ್ತು ಅವರ ಚಿಂತನೆಗಳ ಕುರಿತು ಅರಿವುಂಟಾಗುತ್ತವೆ. ಅನಂತರ ಅವುಗಳು ಯಾವುದಾದರೂ ಕಾರ್ಯಯೋಜನೆ, ಸೂತ್ರ ವಿಧಾಯಕಗಳನ್ನು ಮಾಡುವರೆ ಸಹಾಯ ಒದಗಿಸುತ್ತವೆ. ಒಟ್ಟಾರೆ, ಶೂರಾದ ಕೆಲವು ಸಲಹೆಗಳು ಮೂಲತಃ ಸ್ವೀಕರಿಸಲ್ಪಡದಿದ್ದರೂ ಖಂಡಿತವಾಗಿಯೂ ಅವರಿಗೆ ಕಾಲದ ಖಲೀಫರನ್ನು ನೋಡುವುದರಿಂದ ಹಾಗೂ ಆಲಿಸುವುದರಿಂದ ಪ್ರಯೋಜನ ಲಭಿಸುತ್ತದೆ. ಹೇಗಿದ್ದರೂ ಸದುದ್ದೇಶದೊಂದಿಗೆ ಸಲಹೆ ಕೊಡುವುದು ಸಲಹೆ ಕೊಡುವವರ ಕರ್ತವ್ಯವಾಗಿದೆ. ಕಾಲದ ಖಲೀಫರು ಜಮಾಅತಿನಿಂದ ಸಲಹೆ ಕೇಳುವುದು

ಅವರ ಅಧಿಕಾರವೂ ಕರ್ತವ್ಯವೂ ಆಗಿದೆ."

**(ಖುತ್ಬಾತೆ ಮಸ್‌ರೂರ್ ಸಂ. 2, ಪುಟ 196–197)**

ಆಯಾಕಾಲದ ಖಲೀಫರ ಮಾತುಗಳನ್ನು ಸ್ವೀಕರಿಸದೆ ಇರುವುದರಿಂದ ನಾವು ಮತ್ತು ನಮ್ಮ ಪೀಳಿಗೆಗಳು ಅಲ್ಲಾಹನ ಅನುಗ್ರಹಗಳಿಂದಲೂ ದೀನಿನಿಂದಲೂ ದೂರವಾಗುವುವು. ಆ ಕುರಿತು ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಯ್ಯದಹುಲ್ಲಾಹು) ಹೇಳುತ್ತಾರೆ:

"ಜಮಾಅತಿಗೆ ಬೆಲೆ ಕೊಡದಿದ್ದರೆ, ಆಯಾಕಾಲದ ಖಲೀಫರ ಮಾತನ್ನು ನಿರ್ಲಕ್ಷ್ಯ ಮಾಡುವರಾದರೆ, ಕ್ರಮೇಣವಾಗಿ, ತಮ್ಮನ್ನು ಮಾತ್ರವಲ್ಲ ತಮ್ಮ ಪೀಳಿಗೆಗಳನ್ನು ಅಲ್ಲಾಹನ ಅನುಗ್ರಹಳಿಂದಲೂ ದೀನಿನಿಂದಲೂ ದೂರವಿರಿಸುವಿರಿ. ಆದ್ದರಿಂದ ಗಮನಹರಿಸಿರಿ! ಚಿಂತಿಸಿರಿ! ಈ ಭೌತಿಕ ಲೋಕವು ನಿಮ್ಮನ್ನು ಧರ್ಮದಿಂದ ದೂರಸರಿಸುವುದಾದರೆ ಆ ಲೌಕಿಕತೆಯು ನಿಮಗೆ ಪುರಸ್ಕಾರವಲ್ಲ, ಬದಲಾಗಿ ನಾಶಕಾರಿಯಾಗಿದೆ. ಇದು ಅಲ್ಲಾಹನ ಅನುಗ್ರಹಗಳನ್ನು ಕಡೆಗಣಿಸುವುದಾಗಿದೆ. ಇದು ಅಲ್ಲಾಹನ ಅನುಗ್ರಹಗಳನ್ನು ತಿರಸ್ಕರಿಸುವುದಾಗಿದೆ. ಯಾವ ಕಾಲಘಟ್ಟದ ಇಮಾಮಿನ ಬರುವಿಕೆಯನ್ನು ಪ್ರತಿಯೊಂದು ಸಮುದಾಯವು ಪ್ರತೀಕ್ಷಿಸುತ್ತಿದೆಯೋ ಆ ಇಮಾಮರಿಗೆ ಬೈಅತ್ ಮಾಡಿದ್ದವರಾಗಿದ್ದೇವೆ ನಾವೆಂದು ಸದಾ ನೆನಪಿನಲ್ಲಿರಿಸಬೇಕಾಗಿದೆ. ಆ ಬಗ್ಗೆ ಹಝ್ರತ್ ಪೈಗಂಬರ್(ಸ) ಅತ್ಯಂತ ಸ್ನೇಹಭರಿತ ಶಬ್ದಗಳನ್ನು ಪ್ರಯೋಗಿಸಿರುವರು. ಅವರಿಗಾಗಿ ಹಝ್ರತ್ ಪೈಗಂಬರ್(ಸ) ಸಲಾಂ ತಲುಪಿಸಲು ಉಪದೇಶಿಸಿರುವರು*."

"ಹಾಗಿದ್ದಲ್ಲಿ ಅಂತಹ ವ್ಯಕ್ತಿಯೊಂದಿಗೆ ಸಂಬಂಧವಿರುವುದು ಸಾಮಾನ್ಯ ವಿಷಯವೇ? ಖಂಡಿತವಾಗಿಯೂ ಇದು ಒಬ್ಬ ಅಹ್ಮದಿಗೆ ದೊರೆತ ಅತ್ಯಂತ ದೊಡ್ಡ ಗೌರವವಾಗಿದೆ. ಆದ್ದರಿಂದ ಈ ಮನ್ನಣೆಗೆ ಬೆಲೆ ಕೊಡುವುದು ಪ್ರತಿಯೊಬ್ಬ ಅಹ್ಮದಿಯ ಕರ್ತವ್ಯವಾಗಿದೆ. ಅದಕ್ಕೆ ಬೆಲೆಕೊಡುವ ಒಬ್ಬ ನೈಜ ಅಹ್ಮದಿಯನ್ನು ಅದು ಕೃತಜ್ಞತೆಯುಳ್ಳ ಅಲ್ಲಾಹನ ದಾಸನಾಗಿಸುತ್ತದೆ. ಅನಂತರ ಅಲ್ಲಾಹನ ಅನುಗ್ರಹವು ಅವನಲ್ಲಿ ಮೊದಲಿಗಿಂತಲೂ ಹೆಚ್ಚು ವರ್ಷಿಸುವುದಾಗಿ

ಅವನು ಕಾಣುವನು. ಹಝ್ರತ್ ಮಸೀಹ್ ಮೌಊದ್‌ರೊಂದಿಗೆ[ಅ] ಸಂಬಂಧವಿರುವುದಾಗಿ ಹೇಳುವುದು ಬರೇ ಬಾಯಿಮಾತಿನ ಘೋಷಣೆಯಲ್ಲ, ಬದಲಾಗಿ ಅದು ನಾವು ಅವರೊಂದಿಗೆ ಮಾಡಿದ ಬೈಅತಿನ ಪ್ರತಿಜ್ಞೆಯಾಗಿದೆ. ಅವರ ನಂತರ ಅವರ ಹೆಸರಿನಲ್ಲಿ ಆಯಾಕಾಲದ ಖಲೀಫರುಗಳೊಂದಿಗೆ ಆ ಪ್ರತಿಜ್ಞೆ ಮಾಡಿರುವೆವು. ಆದ್ದರಿಂದ ಬೈಅತಿನ ಈ ವಿಷಯವನ್ನು ಸರಿಯಾಗಿ ಗ್ರಹಿಸುವುದು ಪ್ರತಿಯೊಬ್ಬ ಅಹ್ಮದಿಯ ಕರ್ತವ್ಯವಾಗಿದೆ. ಬೈಅತ್ ಎಂದರೆ (ಸ್ವಯಂ) ವಿಕ್ರಯಿಸುವುದರ ನಾಮವಾಗಿದೆ. ಅಂದರೆ, ತನ್ನ ಬಯಕೆ, ತನ್ನ ಎಲ್ಲ ತರದ ಅಭಿಲಾಷೆ, ತನ್ನ ಆವೇಶಗಳನ್ನು ಅಲ್ಲಾಹನ ಆದೇಶಗಳಿಗನುಸಾರವಾಗಿ ತ್ಯಾಗಮಾಡುವುದು ಹಾಗೂ ಅದರಂತೆ ತನ್ನ ಜೀವನವನ್ನು ಸಾಗಿಸುವ ಬಗ್ಗೆ ಒಂದು ಪ್ರತಿಜ್ಞೆಯಾಗಿದೆ. ತನ್ನೆಲ್ಲ ಇಚ್ಛೆಗಳನ್ನು ಸಂಪೂರ್ಣವಾಗಿ ಕೊನೆಗೊಳಿಸುವುದರ ನಾಮವಾಗಿದೆ. ಅಲ್ಲಾಹನನ್ನು "**ಹಾಝಿರ್ ನಾಝಿರ್**" (ಎಲ್ಲವನ್ನು ನೋಡುತ್ತಾ ನಿಮ್ಮೊಂದಿಗೆ ಇರುವವನು) ಎಂದು ತಿಳಿದು ಮಾಡುವುದಾಗಿದೆ. ಅಲ್ಲಾಹನನ್ನು ಭೇಟಿಯಾಗುವ ಮತ್ತು ಎಲ್ಲ ವಾಗ್ದಾನಗಳ ಕುರಿತು ವಿಚಾರಿಸಲ್ಪಡುವ ಆ ಅಂತ್ಯದಿನದ ಬಗ್ಗೆ ದೃಢನಂಬಿಕೆಯಿರುವ ವ್ಯಕ್ತಿಗೆ ಅದನ್ನು ನೆನೆಯುವಾಗ ರೋಮಾಂಚನವಾಗುತ್ತದೆ."

**(ಖುತ್ಬಾತೆ ಮಸ್‌ರೂರ್ ಸಂ. 8, ಪುಟ 191–192)**

ಖಿಲಾಫತಿನೊಂದಿಗೆ ಸಂಬಂಧವಿಟ್ಟುಕೊಳ್ಳುವುದರ ಬಗ್ಗೆ ಹೇಳುತ್ತಾರೆ:

"ನೀವು ಅಭಿವೃದ್ಧಿ ಹೊಂದಬೇಕಾದರೆ ಲೋಕದ ಮೇಲೆ ಮೇಲುಗೈ ಸಾಧಿಸಬೇಕೆಂದಿದ್ದರೆ, ನಿಮಗೆ ನನ್ನ ಉಪದೇಶ ಹಾಗೂ ಸಂದೇಶವೇನಂದರೆ, ನೀವು ಖಿಲಾಫತಿನೊಂದಿಗೆ ಅಂಟಿಕೊಂಡಿರಿ. ಅಲ್ಲಾಹನ ಈ ಪಾಶವನ್ನು ಬಿಗಿಯಾಗಿ ಹಿಡಿದುಕೊಳ್ಳಿರಿ. ನಮ್ಮ ಎಲ್ಲ ತರದ ಅಭಿವೃದ್ಧಿಯ ತಳಹದಿ ಖಿಲಾಫತಿನೊಂದಿಗೆ ಸೇರಿಕೊಳ್ಳುವುದರಲ್ಲಿ ಅಡಗಿದೆ."

**(ದೈನಿಕ, ಅಲ್‌ಫಝ್ಲ್ ರಬ್ವ 30 ಮೇ 2003)**

* ಅಲ್ ಮುಅ್‌ಜಮುಲ್ ಔಸತ್ ಅಲ್ಲಸತ್ ಸಂ. 3 ಮಿನ್ ಇಸ್ಮುಹು ಈಸಾ ಹದೀಸ್ ನಂಬ್ರ 4898 ಪುಟ 383 –384 ದಾರುಲ್ ಫಿಕ್ರ್ ಉಮ್ಮಾನ್ ಉರ್ದುವಿನಲ್ಲಿ ಪ್ರಥಮ ಆವೃತ್ತಿ 1999.

"ಅಲ್ಲಾಹನು ನಿಮಗೆ ಖಿಲಾಫತಿನ ಅನುಗ್ರಹವನ್ನು ದಯಪಾಲಿಸಿರುವನು. ಅದು ಎಲ್ಲ ತರದ ಅಭಿವೃದ್ಧಿಗೆ ಅನುಗ್ರಹೀತವಾದಂತಹ ದಾರಿಯಾಗಿದೆ. ಅಲ್ಲಾಹನ ಈ ಪಾಶವನ್ನು ಬಿಗಿಯಾಗಿ ಹಿಡಿದುಕೊಳ್ಳಿರಿ. ಏಕತೆ ಮತ್ತು ಒಗ್ಗಟಿನ ಸ್ಥಾಪನೆಗಾಗಿ ಹಾಗೂ ಯಶಸ್ಸನ್ನು ಗಳಿಸಲು ಖಿಲಾಫತಿನೊಂದಿಗೆ ಸದಾ ಸೇರಿಕೊಂಡಿರಿ. ಅದಲ್ಲದೆ ಈ ಮಹತ್ತಾದ ವರದಾನದೊಂದಿಗೆ ಸೇರಿಕೊಂಡಿರಲು ತಮ್ಮ ಸಂತಾನಗಳಿಗೂ ಮುಂಬರುವ ಪೀಳಿಗೆಗೂ ತಾಕೀತು ಮಾಡುತ್ತಿರಿ. ಸದಾ ಅದರ ಔನತ್ಯಕ್ಕೂ ದೃಢತೆಗಾಗಿಯೂ ಪ್ರಯತ್ನಿಸುತ್ತಿರಿ. ಆ ದಾರಿಯಲ್ಲಿ ಬರುವ ಎಲ್ಲ ತ್ಯಾಗಕ್ಕೂ ಸನ್ನದ್ಧರಾಗಿರಿ."

**(ಮಶ್ಅಲೆ ರಾಹ್ ಸಂ. 5 ಪುಟ 32–33)**

"ನೆನಪಿಡಿರಿ! ಈ ಕಾಲದಲ್ಲಿ ಅಲ್ಲಾಹನ ವಾಗ್ದಾನ ಮತ್ತು ಹಝ್ರತ್ ಮಸೀಹ್ ಮೌಊದ್‌ರ(ಅ) ಸ್ಪಷ್ಟವಾದ ಬೋಧನೆಗಳ ಬೆಳಕಿನಲ್ಲಿ ಖಿಲಾಫತಿನೊಂದಿಗಿನ ಸಂಬಂಧದ ಫಲವಾಗಿ ಮಾತ್ರವೇ ವಿಶ್ವಾಸಪರವಾದ ಮತ್ತು ಕರ್ಮಪರವಾದ ಅಭಿವೃದ್ಧಿಯುಂಟಾಗುವುದು. ಒಬ್ಬ ಎಷ್ಟೇ ದೊಡ್ಡ ವಿದ್ವಾಂಸನಾಗಿರಲಿ, ಎಷ್ಟೇ ದೊಡ್ಡ ಧೀಮಂತನಾಗಿರಲಿ, ಅಥವಾ ಬಾಹ್ಯನೋಟದಲ್ಲಿ ಆಧ್ಯಾತ್ಮಿಕವಾದ ಯಾವುದಾದರೂ ದೊಡ್ಡ ಸ್ಥಾನಕ್ಕೆ ತಲುಪಿದವನಾಗಿರಲಿ, ಅವನಿಗೆ ಖಿಲಾಫತಿನೊಂದಿಗಿನ ಸಂಬಂಧವಿರಿಸಬೇಕಾದ ಆ ಮಾನದಂಡದಂತೆ ಸಂಬಂಧವಿಲ್ಲದಿದ್ದರೆ, ಜಮಾಅತಿಯಾದ ಅಭಿವೃದ್ಧಿಯಲ್ಲಿ ಅಥವಾ ಯಾರದ್ದೇ ಆಧ್ಯಾತ್ಮಿಕವಾದ ಅಭಿವೃದ್ಧಿಯಲ್ಲಿ ಅವನ ಈ ಸ್ಥಾನಮಾನಗಳು ಎಳ್ಳಷ್ಟು ಪ್ರಭಾವ ಬೀರಲಿಕ್ಕಿಲ್ಲ. ಅಲ್ಲಾಹನು ಈ ವಿಷಯವನ್ನು ಆಳವಾಗಿ ತಿಳಿಯಲು ನಿಮಗೆಲ್ಲರಿಗೂ ಸೌಭಾಗ್ಯ ನೀಡಲಿ."

**(ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಯ್ಯದಹುಲ್ಲಾಹು) ಪಾಕಿಸ್ತಾನದ ಶೂರಾ ಸದಸ್ಯರಿಗೆ 2014ರಲ್ಲಿ ನೀಡಿದ ಸಂದೇಶ – ಅಲ್‌ಫಝ್ಲ್ ಇಂಟರ್‌ನ್ಯಾಷನಲ್ ಮೇ 23–29, 2014 ಪುಟ 1ರಲ್ಲಿ ಉಲ್ಲೇಖಿತ)**

ಅದೇ ರೀತಿಯಲ್ಲಿ ತನ್ನನ್ನು ಸ್ವತಃ ಅಹ್ಮದಿಯೆಂದು ಹೇಳುವ ಪ್ರತಿಯೊಬ್ಬನು ಜಮಾಅತಿನ ವ್ಯವಸ್ಥೆಯೊಂದಿಗೆ ದೃಢವಾದ ಸಂಬಂಧವನ್ನಿರಿಸಬೇಕಾಗಿದೆ ಮತ್ತು

ಅಹ್ಮದಿಯಾ ಖಿಲಾಫತಿನೊಂದಿಗೆ ನಿಷ್ಠಾವಂತಿಕೆಯ ಮತ್ತು ಅನುಸರಣೆಯ ಸಂಬಂಧವಿರಿಸುವುದು ಅವನ ಕರ್ತವ್ಯವಾಗಿದೆ. ಯಾಕೆಂದರೆ ಇದು ಅವನು ಬೈಅತ್ ಮಾಡುವಾಗ ಮಾಡಿದ ಪ್ರತಿಜ್ಞೆಯಾಗಿರುತ್ತದೆ. ಅಲ್ಲಾಹನ ಅನುಗ್ರಹದಿಂದ ನವ ಅಹ್ಮದಿಯರು, ವಿಶೇಷವಾಗಿ ಪೂರ್ಣ ದೃಢನಂಬಿಕೆಯಿಂದ, ಅಂತರ್ದೃಷ್ಟಿಯಿಂದ ಹಝ್ರತ್ ಮಸೀಹ್ ಮೌಊದ್ರ(ಅ) ವಾದವನ್ನು ಸರಿಯಾಗಿ ಗ್ರಹಿಸಿ ಅಂಗೀಕರಿಸಿದವರು ತಮ್ಮ ಬೈಅತಿನ ಪ್ರತಿಜ್ಞೆ ಹಾಗೂ ಅದರ ಷರತ್ತುಗಳ ಕುರಿತು ಆಳವಾಗಿ ಚಿಂತನೆ ಮಾಡುತ್ತಿರುತ್ತಾರೆ. ಹಲವಾರು ಜನರು ನನಗೆ ಪತ್ರವನ್ನೂ ಬರೆಯುತ್ತಾರೆ..."

**(ಅಲ್‌ಫಝಲ್ ಇಂಟರ್‌ನ್ಯಾಷನಲ್ ಅಕ್ಟೋಬರ್ 30, 2015; ಪುಟ 6ರಲ್ಲಿ ಉಲ್ಲೇಖಿತ)**

"ತಾನು ಹಝ್ರತ್ ಮಸೀಹ್ ಮೌಊದರ(ಅ) ಬೈಅತಿನಲ್ಲಿ ಸೇರಿಕೊಂಡು ಖಿಲಾಫತಿನ ವಾಗ್ದಾನವಿರುವ ಸತ್ಯವಿಶ್ವಾಸಿಗಳ ಜಮಾಅತಿನಲ್ಲಿ ಸೇರ್ಪಡೆಗೊಂಡಿದ್ದೇನೆಂದು ವಾದಿಸುವ ಪ್ರತಿಯೊಬ್ಬ ಅಹ್ಮದಿಯ ಕರ್ತವ್ಯವೇನೆಂದರೆ, ಅವನು ಸದಾ ಅಲ್ಲಾಹನ ಆದೇಶಕ್ಕನುಸರಿಸಿ ತನ್ನ ಜೀವನ ರೀತಿಗಳಲ್ಲಿ ಪರಿಶುದ್ಧವಾದ ಬದಲಾವಣೆಗಳನ್ನುಂಟುಮಾಡಲು ಪರಿಶ್ರಮಿಸುತ್ತಾ ಇರಬೇಕು. ಅಲ್ಲಾಹನು ನಮ್ಮನ್ನು ಖಿಲಾಫತಿನ ಕೊಡುಗೆಯಿಂದ ಅನುಗ್ರಹಿಸಿರುವುದರಿಂದ, ನಾವು ಅದಕ್ಕೆ ನಮ್ಮಿಂದ ಸಾಧ್ಯವಾದಷ್ಟು ಮಟ್ಟಿಗೆ ಅರ್ಹರಾಗಲು ಪರಿಶ್ರಮಿಸಬೇಕೆಂಬ ಯೋಚನೆ ಪ್ರತಿಯೊಬ್ಬ ಪುರುಷ, ಸ್ತ್ರೀ, ಬಾಲಕ, ಯುವಕನಲ್ಲಿ ಇರಬೇಕು. ಸತ್ಯವಿಶ್ವಾಸಿಗಳಿಗೆ ವಾಗ್ದಾನ ಮಾಡಲಾದ ಅನುಗ್ರಹಗಳನ್ನು ಪಡೆಯಲು ಪರಿಶ್ರಮಿಸಬೇಕು. ಅಲ್ಲಾಹನು ಆದೇಶಿರುವಂತಹ ಸತ್ಕರ್ಮಗಳನ್ನು ನಾವು ನಮ್ಮ ಜೀವಿತದಲ್ಲಿ ಅಳವಡಿಸಬೇಕು. ನೆನಪಿಡಿರಿ, ನಾವು ಇಂದು ನಮ್ಮ ಜೀವನ ರೀತಿಯನ್ನು (ಸತ್ಕರ್ಮದ ಮೂಲಕ) ಬದಲಾವಣೆಯನ್ನು ಮಾಡಿ ಅದರಲ್ಲಿ ಸ್ಥಿರಚಿತ್ತತೆಯಿಂದ ನೆಲೆನಿಲ್ಲುವ ಕಡೆಗೆ ಗಮನಹರಿಸದಿದ್ದರೆ, ನಾವು (ಜಮಾಅತಿನಿಂದ) ಹಿಮ್ಮೆಟ್ಟುತ್ತಾ ಮತ್ತೆಂದೂ ಹಿಂತಿರುಗಲು ಸಾಧ್ಯವಾಗದಷ್ಟು ದೂರಕ್ಕೆ ತಲುಪುವೆವು. ಅದರ ಫಲವಾಗಿ ಖಿಲಾಫತಿನೊಂದಿಗೆ ಸಂಯೋಜಿತವಾಗಿರುವ ಕೊಡುಗೆಗಳಿಗೂ ಅನರ್ಹರಾಗುವೆವು. ನಾವು ನಮ್ಮನ್ನು

ಮಾತ್ರವಲ್ಲ ನಮ್ಮ ಪೀಳಿಗೆಗಳನ್ನೂ ಅದರಿಂದ ವಂಚಿತರನ್ನಾಗಿಸುವೆವು... ಆದ್ದರಿಂದ ನಾವು ನಮ್ಮ ಜವಾಬ್ದಾರಿಯನ್ನರಿತು ಈ ಅನುಗ್ರಹವನ್ನು ಪರಿಪೋಷಣೆ ಮಾಡುತ್ತಾ ನಾವು ನಮ್ಮ ಪೀಳಿಗೆಗಳಲ್ಲಿ ಇದರ ಗೌರವವನ್ನು ನೆಲೆನಿಲ್ಲಿಸಬೇಕಾದುದು ನಮ್ಮ ಇಂದಿನ ಕರ್ತವ್ಯವಾಗಿದೆ. ಯಾವುದೇ ಪರಿಸ್ಥಿತಿಯಲ್ಲೂ ತಮ್ಮ ಪ್ರಾಣ, ಧನ, ಸಮಯ ಮತ್ತು ವ್ಯಕ್ತಿತ್ವವನ್ನು ತ್ಯಾಗಮಾಡುತ್ತಾ ಅಹ್ಮದಿಯಾ ಖಿಲಾಫತನ್ನು ಕಾಪಾಡಬೇಕು ಮತ್ತು ಸದಾ ಕಾಪಾಡುತ್ತಲೇ ಇರಬೇಕೆಂದು ನಮ್ಮ ಸಂತಾನಗಳಿಂದ ಪ್ರತಿಜ್ಞೆ ಪಡೆಯಬೇಕಾಗಿದೆ. ನಮ್ಮ ಪೀಳಿಗೆಯಲ್ಲಿ, ನಮ್ಮ ಸಮುದಾಯ ಮತ್ತು ಲೋಕದೆಲ್ಲೆಡೆ ಇಸ್ಲಾಂ ಹಾಗೂ ಅಹ್ಮದಿಯತಿನ ಸಂದೇಶವನ್ನು ತಲುಪಿಸುವುದಕ್ಕಾಗಿ ಪರಿಶ್ರಮಿಸುತ್ತಾ ಹೋಗಬೇಕಾಗಿದೆ."

**(ಅಲ್‌ಫಝ್ಲ್ ಇಂಟರ್‌ನ್ಯಾಷನಲ್ ಮೇ 24–30, 2013 ಪುಟ 8ರಲ್ಲಿ ಉಲ್ಲೇಖಿತ)**

"ದುಆ ಮಾಡುವುದರ ಕಡೆಗೆ ಅತ್ಯಧಿಕವಾಗಿ ಗಮನವಹಿಸುವುದು ಮತ್ತು ಖಿಲಾಫತಿನೊಂದಿಗೆ ಸಂಬಂಧ ಸ್ಥಾಪಿಸುವುದು ನಿಮ್ಮಲ್ಲಿ ಪ್ರತಿಯೊಬ್ಬರ ಕರ್ತವ್ಯವಾಗಿದೆ. ನಿಮ್ಮ ಎಲ್ಲ ಅಭಿವೃದ್ಧಿಯ ಮತ್ತು ಯಶಸ್ಸಿನ ಗುಟ್ಟಿರುವುದು ಖಿಲಾಫತಿನೊಂದಿಗೆ ಸಂಬಂಧ ಸ್ಥಾಪಿಸುವುದರಿಂದಾಗಿದೆ. ಇಮಾಮರೊಂದಿಗೆ ಸಂಬಂಧ ಸ್ಥಾಪಿಸುವ ವ್ಯಕ್ತಿ ಮಾತ್ರವೇ ಜಮಾಅತಿಗೆ ಪ್ರಯೋಜನಕಾರಿಯಾಗಿರುತ್ತಾನೆ. ಇಮಾಮರೊಂದಿಗೆ ಸಂಬಂಧ ಸ್ಥಾಪಿಸದ ಒಬ್ಬ ವ್ಯಕ್ತಿ ಸರ್ವಜ್ಞಾನಿಯಾಗಿದ್ದರೂ ಅವನಿಗೆ ಯಾವುದೇ ಬೆಲೆಯಿಲ್ಲ. ನಿಮ್ಮ ಬುದ್ಧಿವಂತಿಕೆಗಳೂ ವಿಚಾರಗಳೂ ಖಿಲಾಫತಿಗೆ ಅಧೀನವಾಗಿರುವ ವರೆಗೆ ಮತ್ತು ನೀವು ಇಮಾಮಿನ ಹಿಂದೆ ಅವರ ಸೂಚನೆಗಳಿಗೆ ಅನುಸಾರ ನಡೆಯುವ ವರೆಗೆ ಅಲ್ಲಾಹನ ನೆರವು ಮತ್ತು ಆಸರೆ ನಿಮಗೆ ಲಭಿಸುತ್ತಿರುವುದು."

**(ಅಲ್‌ಫಝ್ಲ್ ದೈನಿಕ – 30 ಮೇ 2003 ಪುಟ. 2).**

ಖಿಲಾಫತಿನೊಂದಿಗೆ ಸಹಕರಿಸುವುದರ ಬಗ್ಗೆ ಹಝ್ರ‌ತ್ ಮುಸ್ಲಿಹ್ ಮೌಊದ್‌ರ(ರ) ಮಾತುಗಳನ್ನು ಉಲ್ಲೇಖಿಸುತ್ತಾ ಹಝ್ರ‌ತ್ ಖಲೀಫತುಲ್ ಮಸೀಹ್ ಖಾಮಿಸ್(ಅಯ್ಯದಹುಲ್ಲಾಹ್) ಹೇಳುತ್ತಾರೆ:

"ಒಂದು ಖುತ್‌ಬದಲ್ಲಿ ಹಝ್ರ‌ತ್ ಮುಸ್ಲಿಹ್ ಮೌಊದ್[ರ] ಮುಬಲ್ಲಿಗ್‌ರಿಗೆ ಒಂದು ಮಹತ್ವಪೂರ್ಣವಾದ ಉಪದೇಶವನ್ನು ನೀಡಿದ್ದರು. ಅವರು ಹೇಳುತ್ತಾರೆ: ದೀನಿನ ಬಗ್ಗೆ ಕನಿಕರವಿರುವ, ಜಮಾಅತಿನ ಬಗ್ಗೆ ನಿಷ್ಠೆಯಿರುವ ಮತ್ತು ಉತ್ತಮ ಖ್ಯಾತಿಯೊಂದಿಗೆ ಜಮಾಅತ್ ಲೋಕದೆಲ್ಲೆಡೆ ಹರಡಬೇಕೆಂದು ಆಶಿಸುವ, ಹಝ್ರ‌ತ್ ಪೈಗಂಬರರ[ಸ] ಕಾಲದಲ್ಲಿ ಇಸ್ಲಾಮಿಗೆ ಲಭಿಸಿದಂತಹ ಗೌರವ ಪುನಃ ದೊರೆಯಬೇಕೆಂದು ಇಚ್ಛಿಸುವ ಹಾಗೂ ಇದಕ್ಕಾಗಿ ಹಝ್ರ‌ತ್ ಮಸೀಹ್ ಮೌಊದ್[ಅ] ಮಾಡಿದ ಪರಿಶ್ರಮಗಳು ವ್ಯರ್ಥವಾಗದಿರಲು ಬಯಸುವ ಪ್ರತಿಯೊಬ್ಬ ಸತ್ಯವಿಶ್ವಾಸಿಯ ಕರ್ತವ್ಯವೇನೆಂದರೆ, ಅವರು ಖ಼ಲೀಫರೊಂದಿಗೆ ರಾತ್ರಿ ಹಗಲೆನ್ನದೆ ಸಹಕರಿಸಬೇಕು ಮತ್ತು ಜಮಾಅತಿನ ಸದಸ್ಯರ ಅಲೋಚನೆಗಳಲ್ಲೂ ಸುಧಾರಣೆ ಉಂಟುಮಾಡಲು ಪರಿಶ್ರಮಿಸಬೇಕು. ಮದುವೆ ಸಮಾರಂಭದಲ್ಲಿ ಎಸೆಯುವ ಸಿಹಿತಿಂಡಿ ಒಟ್ಟುಗೂಡಿಸಲು ಜನರು ತಮ್ಮ ಜೋಳಿಗೆಯನ್ನು ಚಾಚುವ ರೀತಿಯಲ್ಲೇ (ಕೆಲವು ಕಡೆಗಳಲ್ಲಿ ಖರ್ಜೂರಗಳನ್ನು ಹಂಚುವ ವಾಡಿಕೆಯಿದೆ, ಖರ್ಜೂರಗಳು ಜೋಳಿಗೆಯಲ್ಲಿ ಬೀಳಲೆಂದು ಜನರು ಅದನ್ನು ಚಾಚುತ್ತಾರೆ) ಖ಼ಲೀಫರು ಜಮಾಅತಿನ ಸುಧಾರಣೆಯ ಬಗ್ಗೆ ಏನಾದರೂ ಹೇಳಿದರೆ, ಅದನ್ನು ಎರಡೂ ಕೈಗಳಿಂದ ಸ್ವೀಕರಿಸಿ ಜಮಾಅತಿನ ಜನರಲ್ಲಿ ಅದನ್ನು ಪುನರಾವರ್ತಿಸುತ್ತಿರಿ. ಮಂದಬುದ್ಧಿಯಾದವರು ಕೂಡ ವಿಷಯವನ್ನು ತಿಳಿದುಕೊಂಡು ದೀನಿನಲ್ಲಿ ಸರಿಯಾಗಿ ನಡೆಯಲು ದಾರಿಯನ್ನು ಕಾಣುವಂತಾಗಲಿಕ್ಕಾಗಿ ಅದನ್ನು ಪುನರಾವರ್ತಿಸುತ್ತಲೇ ಹೋಗಿರಿ."

**(ಸಂಗ್ರಹ – ಖುತ್ಬಾತ್ ಮಹ್ಮೂದ್ ಸಂ. 18, ಪುಟ. 214–215 – ಅಲ್‌ಫಝ್ಲ್ ಇಂಟರ್‌ನ್ಯಾಷನಲ್ ಜೂನ್ 19–25, 2015 ಪುಟ 8ರಲ್ಲಿ ಉಲ್ಲೇಖಿತ)**

"ಅನುಗ್ರಹೀತವಾದ ಈ ಖ಼ಿಲಾಫತ್ ಜಮಾಅತಿನ ಜೀವನಾಡಿಯಾಗಿದೆ. ಆದ್ದರಿಂದ ಚೈತನ್ಯಪೂರ್ಣವಾದ ಜೀವಿತ ಲಭಿಸಬೇಕೆಂದು ಇಚ್ಛಿಸುವಿರಾದರೆ, ಅಹ್ಮದಿಯಾ ಖ಼ಿಲಾಫತಿನೊಂದಿಗೆ ಪ್ರಾಮಾಣಿಕವಾಗಿಯೂ ನಿಷ್ಠಾವಂತಿಕೆಯಿಂದಲೂ ಅಂಟಿಕೊಂಡಿರಿ. ಅದರೊಂದಿಗೆ ಪೂರ್ಣವಾಗಿ ತಮ್ಮನ್ನು ಹೊಂದಿಸಿಕೊಳ್ಳಿರಿ. ನಿಮ್ಮ ಎಲ್ಲ ಅಭಿವೃದ್ಧಿಯ ಗುಟ್ಟಿರುವುದು ಖಿಲಾಫತಿನೊಂದಿಗೆ ಸಮನ್ವಯ

ಗೊಳ್ಳುವುದರಿಂದ ಮಾತ್ರವಾಗಿದೆ. ಕಾಲದ ಖಲೀಫರ ಸಂತೃಪ್ತಿಯು ತಮ್ಮ ಸಂತೃಪ್ತಿಯನ್ನಾಗಿಸಿರಿ. ಕಾಲದ ಖಲೀಫರ ಹೆಜ್ಜೆಯನ್ನು ಹಿಂಬಾಲಿಸುತ್ತಾ ತಮ್ಮ ಹೆಜ್ಜೆಗಳನ್ನಿಡಿರಿ. ಕಾಲದ ಖಲೀಫರ ಸಂಪ್ರೀತಿ ನಿಮ್ಮ ಗುರಿಯಾಗಿರಲಿ."

**(ಮಾಸಿಕ ಖಾಲಿದ್ ಸಯ್ಯದುನಾ ತಾಹಿರ್ ನಂಬರ್; ಮಾರ್ಚ್, ಏಪ್ರಿಲ್ 2004 ಪುಟ 4)**

"ಖಿಲಾಫತಿನ ಅನುಗ್ರಹಗಳು ತಮ್ಮಲ್ಲಿ ಚಿರಸ್ಥಾಯಿಯಾಗಿರಲು ಪ್ರತಿಯೊಬ್ಬ ಅಹ್ಮದಿಯೂ ಅದರ ಸುದೃಢವಾದ ನೆಲೆನಿಲ್ಲುವಿಕೆಗಾಗಿ ಸದಾ ದುಆ ಮಾಡುತ್ತಿರಬೇಕು..... ತಮ್ಮ ಅಂತರಂಗದಲ್ಲಿ ವಿಶೇಷವಾದ ಒಂದು ಪರಿವರ್ತನೆಯನ್ನುಂಟುಮಾಡಿರಿ. ಸತ್ಯವಿಶ್ವಾಸ ಮತ್ತು ನಿಷ್ಠಾವಂತಿಕೆಯಲ್ಲಿ ಮೊದಲಿಗಿಂತಲೂ ಹೆಚ್ಚಿನ ಅಭಿವೃದ್ಧಿಯನ್ನುಂಟುಮಾಡಿರಿ... ಸತ್ಕರ್ಮ ಮಾಡುತ್ತಾ ಖಿಲಾಫತಿನೊಂದಿಗೆ ಸೇರಿಕೊಂಡಿರುವವರು ಮಾತ್ರವೇ ಈಗ ಅಹ್ಮದಿಯತಿನ ನಿಜವಾದ ಧ್ವಜವಾಹಕರು. (ಮುಂದಾಳು)"

**(ಖುತ್‌ಬ ಜುಮುಅ 27 ಮೇ 2005)**

"ಅಹ್ಮದಿಯತ್ ಅಥವಾ ಯಥಾರ್ಥ ಇಸ್ಲಾಮಿನ ದೃಢತೆಗಾಗಿ ಅದರ ಪ್ರಚಾರಕ್ಕಾಗಿ ಹಾಗೂ ಖಿಲಾಫತಿನ ವ್ಯವಸ್ಥೆಗಾಗಿ ಕೊನೆಯುಸಿರಿನ ತನಕ ತೀವ್ರವಾಗಿ ಪ್ರಯತ್ನಿಸಬೇಕಾಗಿದೆ. ಅದಕ್ಕಾಗಿ ದೊಡ್ಡ ದೊಡ್ಡ ತ್ಯಾಗಗಳನ್ನು ಮಾಡಲು ಸದಾ ಸನ್ನದ್ಧರಾಗಿರಬೇಕಾಗಿದೆ. ಖಿಲಾಫತಿನೊಂದಿಗೆ ಸೇರಿಕೊಂಡಿರಲು ತಮ್ಮ ಸಂತಾನಗಳನ್ನು ಸದಾ ಉಪದೇಶಿಸುತ್ತಾ ಇರಬೇಕಾಗಿದೆ. ಅವರ ಹೃದಯಗಳಲ್ಲಿ ಖಲೀಫರೊಡನೆ ಪ್ರೀತಿಯನ್ನುಂಟಾಗಿಸಬೇಕಾಗಿದೆ. ಇದು ಅತ್ಯಂತ ಮಹತ್ತಾದ ಗುರಿಯಾಗಿದೆ. ಈ ಪ್ರತಿಜ್ಞೆಯನ್ನು ಸಂಪೂರ್ಣವಾಗಿ ಈಡೇರಿಸಲು ಮತ್ತು ಅದರ ಎಲ್ಲ ಅವಶ್ಯಕತೆಗಳನ್ನು ನಿಭಾಯಿಸಲು ದೃಢನಿಶ್ಚಯ ಮತ್ತು ಹೃತ್ಪೂರ್ವಕವಾದ ಉತ್ಸಾಹದ ಆವಶ್ಯಕತೆ ಇದೆ."

**(ಮಾಸಿಕ-ಅಲ್ ನಾಸಿರ್ ಜರ್ಮನಿ; ಜೂನ್-ಸೆಪ್ಟಂಬರ್ 2003 ಪುಟ 1)**

"ನೆನಪಿಡಿರಿ, ಅವನು ಸತ್ಯವಾದ ವಾಗ್ದಾನಗಳನ್ನು ನೀಡುವ ದೇವನಾಗಿದ್ದಾನೆ. ಈಗಲೂ ತನ್ನ ಪ್ರೀತಿಯ ಮಸೀಹರ ಈ ಪ್ರೀತಿಯ ಜಮಾಅತಿನ ಮೇಲೆ

ತನ್ನ ಕೈಯಿಟ್ಟಿರುವನು. ಅವನು ನಮ್ಮನ್ನು ಎಂದಿಗೂ ಕೈಬಿಡಲಿಕ್ಕಿಲ್ಲ. ಹಿಂದಿನ ಖಿಲಾಫತಿನ ಕಾಲದಲ್ಲಿ ತನ್ನ ವಾಗ್ದಾನಗಳನ್ನು ಪೂರ್ತಿಗೊಳಿಸಿದ ಹಾಗೆಯೇ ಈಗಲೂ ತನ್ನ ವಾಗ್ದಾನಗಳನ್ನು ಈಡೇರಿಸುತ್ತಿರುವನು. ಹಿಂದೆ ತನ್ನ ಕಾರುಣ್ಯಗಳನ್ನು ಮತ್ತು ವರದಾನಗಳನ್ನು ವರ್ಷಿಸಿದ ರೀತಿಯಲ್ಲೇ ಈಗಲೂ ವರ್ಷಿಸುತ್ತಿರುವನು. ಇನ್ನು ಮುಂದೆಯೂ ತನ್ನ ಅನುಗ್ರಹಗಳನ್ನು ಕರುಣಿಸುವನು. ಇನ್‌ಶಾ ಅಲ್ಲಾಹ್. ....ಆದ್ದರಿಂದ ಸದಾ ಪ್ರಾರ್ಥಿಸುತ್ತಲೂ ಅವನ ಮುಂದೆ ಬಾಗುತ್ತಲೂ ಅವನ ಅನುಗ್ರಹಗಳನ್ನು ಅಪೇಕ್ಷಿಸುತ್ತಲೂ ಅವನ ಸನ್ನಿಧಿಯಲ್ಲಿ ಬಿದ್ದುಕೊಂಡಿರಿ ಮತ್ತು ಅವನ ಭದ್ರವಾದ ಹಿಡಿತವನ್ನು ಬಿಡದಿರಿ. ಆ ಬಳಿಕ ನಿಮಗೆ ಯಾವ ನಷ್ಟವನ್ನೂ ಉಂಟುಮಾಡಲು ಯಾರಿಂದಲೂ ಸಾಧ್ಯವಿಲ್ಲ. ಅಲ್ಲಾಹನು ಎಲ್ಲರಿಗೂ ಇದಕ್ಕಿರುವ ಸೌಭಾಗ್ಯ ನೀಡಲಿ – ಆಮೀನ್."

**(ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್‌ರ(ಅಯ್ಯದಹುಲ್ಲಾಹು) ನಿರ್ದೇಶನ, 21 ಮೇ 2004)**

ಆಯಾಕಾಲದ ಖಲೀಫರ ಪ್ರತಿಯೊಂದು ಉಪದೇಶಗಳನ್ನು ಶ್ರದ್ಧೆಯಿಂದ ಆಲಿಸುವುದು ಒಬ್ಬ ನೈಜ ಅಹ್ಮದಿಯ ಮುಖ್ಯವಾದ ಜವಾಬ್ದಾರಿಯಾಗಿದೆ. ಯಾಕೆಂದರೆ ಈ ಉಪದೇಶಗಳು ಒಬ್ಬ ಯಥಾರ್ಥ ಅಹ್ಮದಿಯ ಜೀವಿತದಲ್ಲೇ ಒಂದು ಉತ್ತಮವಾದ ಬದಲಾವಣೆಯನ್ನುಂಟುಮಾಡುತ್ತದೆ. ಅದರಲ್ಲಿ (ಆ ಉಪದೇಶಗಳಲ್ಲಿ) ಅಲ್ಲಾಹನ ಸಹಾಯ ಹಾಗೂ ಅನುಗ್ರಹಗಳು ಅಡಗಿರುತ್ತವೆ. ಯಾಕೆಂದರೆ ಕಾಲದ ಖಲೀಫರು ಅಲ್ಲಾಹನ ವಿಶೇಷವಾದ ಅನುಮತಿಯಿಂದ ಹೇಳುತ್ತಾರೆ. ಭೌತಿಕ ಲೋಕದಲ್ಲಿ ಸಿಗದ ಹಾಗೂ ಹುಡುಕುವುದರಿಂದ ಲಭ್ಯವಾಗದ ಆಧ್ಯಾತ್ಮಿಕ ಜ್ಞಾನಗಳು ಅವರ ನಾಲಗೆಯಿಂದ ಜಾರಿಯಾಗುತ್ತವೆ. ಅಲ್ಲಾಹನ ಇಚ್ಛೆಯಂತೆ ಸಂದರ್ಭೋಚಿತವಾಗಿ ತಕ್ಕ ಸಮಯಕ್ಕೆ ಕರ್ಮನಿರತರಾಗಲು ಆಹ್ವಾನಿಸುತ್ತಾರೆ. ಹೀಗೆ ಉತ್ತಮ ರೀತಿಯಲ್ಲಿ ಜನರಿಂದ ಸತ್ಕರ್ಮಗಳನ್ನು ಮಾಡಿಸಲು ಖಲೀಫರಿಂದ ಮಾತ್ರ ಸಾಧ್ಯ. ಎಲ್ಲ ವಿಧದ ಅಭಿವೃದ್ಧಿಯ ಮಾರ್ಗಗಳಲ್ಲಿ ಸರಿಯಾದ ರೀತಿಯಲ್ಲಿ ನಡೆಯಲು ಆಯಾಕಾಲದ ಖಲೀಫರ ನಿರ್ದೇಶನಾನುಸಾರವಾಗಿ ಮಾತ್ರವೇ ಸಾಧ್ಯ. ಆದ್ದರಿಂದ ಆಯಾಕಾಲದ ಖಲೀಫರ ಜ್ಞಾನಭರಿತ ಖುತ್‌ಬಗಳು, ಭಾಷಣಗಳು, ತತ್ವಬೋಧನೆಗಳು, ಸಂದೇಶಗಳು,

ನಿಯತವಾಗಿ ಶ್ರದ್ಧೆಯಿಂದ ಸ್ವತಃ ಆಲಿಸುವುದು ಮತ್ತು ಮಕ್ಕಳನ್ನೂ ಕುಟುಂಬದ ಸದಸ್ಯರನ್ನೂ ಆಲಿಸುವಂತೆ ಮಾಡುವುದು ಹಾಗೂ ಇತರ ಸ್ನೇಹಿತರನ್ನೂ ಸಂಬಂಧಿಕರನ್ನೂ ಸ್ಥಳೀಯ ಸದಸ್ಯರನ್ನೂ ಅವುಗಳನ್ನು ಕೇಳಲಿಕ್ಕಾಗಿ ಪ್ರೇರೇಪಿಸುವುದು ಪ್ರತಿ ಅಹ್ಮದೀ ಸ್ತ್ರೀ ಪುರುಷರ ಕರ್ತವ್ಯವಾಗಿದೆ. ಕಾಲದ ಖಲೀಫರು ಏನು ಹೇಳುತ್ತಿದ್ದಾರೆ, ಅವರು ನಮ್ಮಿಂದ ಏನು ಆವಶ್ಯಪಡುತ್ತಿರುವರು, ನಮ್ಮಿಂದ ಏನನ್ನು ನಿರೀಕ್ಷಿಸುತ್ತಾರೆ ಎಂಬಿತ್ಯಾದಿಗಳು ಇವುಗಳಿಂದಲೇ ತಿಳಿಯಲು ಸಾಧ್ಯವಾಗುವುದು. ಈ ನಿರ್ದೇಶನಗಳಿಗೂ ಉಪದೇಶಗಳಿಗೂ ಶ್ರದ್ಧೆಯಿಂದ ಆಲಿಸದವನು ಸಂಪೂರ್ಣವಾಗಿಯೂ ಅನುಸರಣೆಯ ಸೌಭಾಗ್ಯದಿಂದ ವಂಚಿತನಾಗುತ್ತಾನೆ. ಅದು ಪೂರೈಸಲು ಸಾಧ್ಯವಾಗದ ಇಹಪರ ನಷ್ಟಗಳಿಗೆ ಹೇತುವಾಗುವುದು.

ಒಬ್ಬ ಯಥಾರ್ಥ ಸತ್ಯವಿಶ್ವಾಸಿಯ ಔನ್ನತ್ಯವಿರುವುದು ಖಿಲಾಫತ್ತನ್ನು ಅನುಸರಿಸುವುದರಿಂದ ಮಾತ್ರವಾಗಿದೆ. ಅವನ ಸಕಲ ಕಾರ್ಯಗಳು ಖಿಲಾಫತಿನೊಂದಿಗಿನ ನಿಷ್ಠೆ ಹಾಗೂ ಬಾಂಧವ್ಯದಿಂದಿರುತ್ತದೆ. ಹಝ್ರತ್ ಮಸೀಹ್ ಮೌಊದ್[ಅ] ಅರುಹುತ್ತಾರೆ:

"ಅಲ್ಲಾಹನ ಕೈ ಜಮಾಅತಿನ ಮೇಲಿರುತ್ತದೆ. ಅಲ್ಲಾಹನು ಏಕತ್ವವನ್ನು ಇಷ್ಟಪಡುತ್ತಾನೆಂಬುದೇ ಅದರ ರಹಸ್ಯವಾಗಿದೆ. ಅನುಸರಣೆಯಿಲ್ಲದಿದ್ದರೆ ಎಂದಿಗೂ ಈ ಏಕತ್ವವು ನೆಲೆನಿಲ್ಲಲಿಕ್ಕೆ ಸಾಧ್ಯವಿಲ್ಲ. ಹಝ್ರತ್ ಪೈಗಂಬರರ[ಸ] ಕಾಲದಲ್ಲಿ ಅವರ ಸಹಾಬಿಗಳು ಉತ್ತಮ ಸಲಹೆಗಾರರಾಗಿದ್ದರು. ಅಲ್ಲಾಹನು ಅವರಿಗೆ ಅದನ್ನು ಹುಟ್ಟುಗುಣವನ್ನಾಗಿಸಿದ್ದನು. ಅವರು ರಾಜನೀತಿಯನ್ನು ಚೆನ್ನಾಗಿ ಅರಿತವರಾಗಿದ್ದರು. ಹಝ್ರತ್ ಅಬೂಬಕರ್[ರ], ಹಝ್ರತ್ ಉಮರ್[ರ] ಮುಂತಾದವರು ಖಲೀಫರಾಗಿ ಅವರಿಗೆ ರಾಜ್ಯಾಡಳಿತವು ದೊರೆತಾಗ, ಅವರು ಬಹಳ ಸುಂದರವಾಗಿಯೂ ವ್ಯವಸ್ಥಿತವಾಗಿಯೂ ರಾಜ್ಯಾಡಳಿತವನ್ನು ನಡೆಸಿದರು. ಇದರಿಂದ ಅವರಿಗೆ ರಾಜ್ಯಾಡಳಿತದ ಜ್ಞಾನ ಎಷ್ಟಿತ್ತೆಂದು ಅರಿವಾಗುತ್ತದೆ. ಆದರೆ ಹಝ್ರತ್ ಪೈಗಂಬರರ[ಸ] ಸನ್ನಿಧಿಯಲ್ಲಿ ಅವರ ಅವಸ್ಥೆ ಹೇಗಿತ್ತೆಂದರೆ, ಹಝ್ರತ್ ಪೈಗಂಬರ್[ಸ] ಏನಾದರೂ ಹೇಳಿದರೆ ಅದರ ಮುಂದೆ ತಮ್ಮ

ಎಲ್ಲ ಅಭಿಪ್ರಾಯಗಳನ್ನೂ ಪಾಂಡಿತ್ಯವನ್ನೂ ಅತ್ಯಂತ ಕ್ಷುಲ್ಲಕವೆಂದು ತಿಳಿದು ಕೊಂಡು ಹಝ್ರತ್ ಪೈಗಂಬರ್(ಸ) ಹೇಳಿದ್ದನ್ನು ಅನುಷ್ಠಾನಕ್ಕೆ ತರುವುದು ಕಡ್ಡಾಯವೆಂದು ತೀರ್ಮಾನಿಸುತ್ತಿದ್ದರು.... ಅಜ್ಞಾನಿಗಳಾದ ವಿರೋಧಿಗಳು ಇಸ್ಲಾಂ ಖಡ್ಗದ ಬಲದಿಂದ ವ್ಯಾಪಿಸಿದ್ದೆಂದು ಹೇಳುತ್ತಾರೆ. ಆದರೆ ಇದು ಸರಿಯಲ್ಲ. ಯಥಾರ್ಥದಲ್ಲಿ ಅವರ ಹೃದಯಗಳ ನಾಲೆಗಳು ಅನುಸರಣೆಯ ಜಲದಿಂದ ತುಂಬಿ ಹರಿಯುತ್ತಿದ್ದುವು. ಈ ಅನುಸರಣೆ ಮತ್ತು ಐಕ್ಯತೆಯ ಫಲದಿಂದಲೇ ಅವರು ಇತರರ ಹೃದಯಗಳನ್ನು ಜಯಿಸುವವರಾದರು. ನೀವು ಮಸೀಹ್ ಮೌಊದ್‌ರ(ಅ) ಜಮಾಅತಿನಲ್ಲಿರುವರಾಗಿದ್ದು ಹಝ್ರತ್ ಪೈಗಂಬರರ(ಸ) ಸಹಾಬಿಗಳ ಜಮಾಅತಿನೊಂದಿಗೆ ಸೇರಿಕೊಳ್ಳುವ ಹಂಬಲವನ್ನಿಟ್ಟಿರುವಿರಾದರೆ, ನೀವು ನಿಮ್ಮೊಳಗೆ ಸಹಾಬಿಗಳಂತಹ ಗುಣವೈಶಿಷ್ಟ್ಯಗಳನ್ನು ಉಂಟುಮಾಡಿರಿ. ಅನುಸರಣೆಯೆಂದರೆ ಹಾಗಿರಬೇಕು. ಪರಸ್ಪರ ಪ್ರೀತಿ ಮತ್ತು ಸಹೋದರತೆ ಆ ರೀತಿಯದ್ದಾಗಿರಬೇಕು. ಒಟ್ಟಿನಲ್ಲಿ, ಎಲ್ಲ ವಿಧದಲ್ಲೂ ಬಗೆಯಲ್ಲೂ ನೀವು ಸಹಾಬಿಗಳಿಗೆ ಅನುಗುಣವಾಗಿರಿ."

**(ತಫ್‌ಸೀರ್ ಹಝ್ರತ್ ಮಸೀಹ್ ಮೌಊದ್(ಅ) ಸಂ.2 ಪುಟ 246–248,**
**ತಫ್‌ಸೀರ್ ಸೂರತುನ್ನಿಸಾಅ್ ಸೂಕ್ತ 60)**

ಖಿಲಾಫತನ್ನು ಅದರ ನಿಜವಾದ ಅರ್ಥದಲ್ಲಿ ಗೌರವಿಸುವವರಾಗಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ. ನಾವು ನಮ್ಮ ಪ್ರತಿಜ್ಞೆಗಳನ್ನು ಈಡೇರಿಸುವವರಾಗಲಿ. ಪೀಳಿಗೆಯಿಂದ ಪೀಳಿಗೆಯವರೆಗೆ ಈ ವರದಾನ ದೊರೆಯುವಂತಾಗಲು ಜೀವಿತದ ಕೊನೆಯುಸಿರಿನ ತನಕ ನಿಷ್ಠೆಯಿಂದ ಖಿಲಾಫತಿನೊಂದಿಗೆ ಅಂಟಿಕೊಂಡಿರುವವರಾಗಲಿ. ಖಿಲಾಫತಿನ ನಿರ್ದೇಶನಗಳನ್ನು ಆಲಿಸುವುದರೊಂದಿಗೆ ಅವುಗಳನ್ನು ಅನುಸರಿಸಿ ಕರ್ಮನಿರತರಾಗುವಂತಾಗಲು ಸಹ ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ – ಆಮೀನ್. ಅಲ್ಲಾಹನ ಇಚ್ಛೆಗೆ ಅನುಸಾರವಾಗಿ ನಾವು ಖಿಲಾಫತಿನ ಈ ಪಾರಿತೋಷಕವನ್ನು ಉಳಿಸಿಕೊಳ್ಳುವವರಾಗೋಣ.

## خلافت کا فیضان (ಖಿಲಾಫತಿನ ವರದಾನಗಳು)

خُدا کا یہ احسان ہے ہم پہ بھاری
کہ جس نے ہے اپنی یہ نعمت اُتاری
نہ مایوس ہونا گھٹن ہو نہ طاری
رہے گا خلافت کا فیضان جاری

ಅಲ್ಲಾಹನ ಮಹತ್ತಾದ ಔದಾರ್ಯವೇನೆಂದರೆ,
ಅವನು ತನ್ನ ಈ ಅನುಗ್ರಹವನ್ನು ವರ್ಷಿಸಿರುವನು.
ಯಾವುದೇ ನಿರಾಶೆ ಅಥವಾ ದುಃಖ ನಿಮ್ಮನ್ನು ಆವರಿಸದಿರಲಿ
ಯಾಕೆಂದರೆ ಖಿಲಾಫತಿನ ವರದಾನ ಸದಾ ಜಾರಿಯಲ್ಲಿರುವುದು.

نبوت کے ہاتھوں جو پودا لگا ہے
خلافت کے سائے میں پھولا پھلا ہے
یہ کرتی ہے اس باغ کی آبیاری
رہے گا خلافت کا فیضان جاری

ನುಬುವತಿನ ಕೈಯಲ್ಲಿ ನಾಟಿದ ಈ ವೃಕ್ಷವು
ಖಿಲಾಫತಿನ ನೆರಳಲ್ಲಿ ಬೆಳೆದು ಸಮೃದ್ಧವಾಗಿ ಹರಡಿದೆ.
ಇದು (ಖಿಲಾಫತ್) ಈ ತೋಟವನ್ನು ಆರೈಕೆ ಮಾಡುತ್ತಿದೆ.
ಖಿಲಾಫತಿನ ವರದಾನ ಜಾರಿಯಲ್ಲಿರುವುದು.

خلافت سے کوئی بھی ٹکر جو لے گا
وہ ذلت کی گہرائی میں جا گرے گا
خدا کی یہ سنّت ازل سے ہے جاری
رہے گا خلافت کا فیضان جاری

ಖಿಲಾಫತಿನ ವಿರುದ್ಧವಾಗಿ ನಿಲ್ಲುವವನು,
ಅವಮಾನದ ಹೊಂಡಕ್ಕೆ ದೂಡಲ್ಪಡುವನು;
ಅಲ್ಲಾಹನ ಈ ನಡವಳಿಕೆ ಆದಿಯಿಂದಲೇ ಜಾರಿಯಲ್ಲಿದೆ,
ಖಿಲಾಫತಿನ ವರದಾನ ಜಾರಿಯಲ್ಲಿರುವುದು.

خدا کا ہے وعدہ خلافت رہے گی
یہ نعمت تمہیں تاقیامت ملے گی
مگر شرط اس کی اطاعت گزاری
رہے گا خلافت کا فیضان جاری

ಖಿಲಾಫತ್ ನೆಲೆನಿಲ್ಲುವುದು ಎಂದು ಅಲ್ಲಾಹನ ವಾಗ್ದಾನವಿದೆ,
ಈ ಅನುಗ್ರಹ ನಿಮಗೆ ಖಿಯಾಮತ್ ತನಕ ಸಿಗುವುದು.
ಆದರೆ ಇದಕ್ಕಿರುವ ನಿಬಂಧನೆ ಅನುಸರಣೆಯಾಗಿದೆ;
ಖಿಲಾಫತಿನ ವರದಾನ ಜಾರಿಯಲ್ಲಿರುವುದು.

محبت کے جذبے،وفا کا قرینہ
اخوّت کی نعمت ،ترقی کا زینہ
خلافت سے ہی برکتیں ہیں یہ ساری
رہے گاخلافت کا فیضان جاری

ಅನುರಾಗದ ಆವೇಶ, ನಿಷ್ಠೆಯ ನಮೂನೆ,
ಸಹೋದರ್ಯತೆಯ ಕೃಪೆ, ಅಭಿವೃದ್ಧಿಯ ಸೋಪಾನ.
ಖಿಲಾಫತಿನಿಂದಲೇ ಈ ಎಲ್ಲ ಅನುಗ್ರಹಗಳು;
ಖಿಲಾಫತಿನ ವರದಾನ ಜಾರಿಯಲ್ಲಿರುವುದು.

الٰہی ہمیں تو فراست عطا کر
خلافت سے گہری محبت عطا کر
ہمیں دکھ نہ دے کوئی لغزش ہماری
رہے گا خلافت کا فیضان جاری

ಅಲ್ಲಾಹನೇ, ನಮಗೆ ನೀನು ಸೂಕ್ಷ್ಮ ದೃಷ್ಟಿಯನ್ನು ನೀಡು,
ಖಿಲಾಫತಿನೊಂದಿಗೆ ಅಗಾಧವಾದ ಅನುರಾಗವನ್ನನುಗ್ರಹಿಸು;
ನಾವು ಎಡವಿ ಬಿದ್ದು ಸಂಕಷ್ಟಕ್ಕೆ ಒಳಪಡದಿರಲಿ.
ಖಿಲಾಫತಿನ ಅನುಗ್ರಹವು ಸದಾ ಜಾರಿಯಲ್ಲಿರುವುದು.

**(ಸಾಹಿಬ್‌ಝಾದಿ ಅಮತುಲ್ ಖುದ್ದೂಸ್ ಬೇಗಂ ಸಾಹಿಬ)**